

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 17 ಶನಿವಾರ 2026

ಸಂಪುಟ: 46 | ಸಂಚಿಕೆ: 269 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ತಾಯಿ ಸೆರೆ ನಂತರ ತಬ್ಬಲಿಯಾಗಿರುವ ನಾಲ್ಕು ಹುಲಿಮರಿಗಳಲ್ಲಿ ಒಂದು ಮರಿ ಸುರಕ್ಷಿತ ಸೆರೆ

ಚಾಮರಾಜನಗರ, ಜ.16(ಎಂಟಿವೈ)– ಚಾಮರಾಜನಗರ ಜಿಲ್ಲೆಯ ಹರವೆ ಹೋಬಳಿಯ ನಂಜೇದೇವನಪುರದ ಬಳಿ ತಾಯಿ ಸೆರೆಯೊಂದಿಗೆ ತಬ್ಬಲಿಯಾಗಿದ್ದ ನಾಲ್ಕು ಹುಲಿ ಮರಿಗಳಲ್ಲಿ ಕಳೆದ ರಾತ್ರಿ ಹೆಣ್ಣು ಮರಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯ ಲಾಗಿದ್ದು, ಉಳಿದ ಮೂರು ಮರಿಗಳಿಗಾಗಿ ತೀವ್ರ ಶೋಧ ಮುಂದುವರೆಸಿದೆ.

ನಂಜೇದೇವನಪುರದ ಬಳಿ ಜ.9ರಂದು ತುಮಕೂರು ಮಾದರಿ ಬೋನಿನೊಳಗೆ ಇದ್ದ ಕರುವನ್ನ ಬೇಟೆಯಾಡಲು ಬಂದು ತಾಯಿ ಹುಲಿ ಸೆರೆ ಸಿಕ್ಕಿತ್ತು. ಕೊನೆಗೆ ಅದನ್ನು ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ತಾಯಿ ಹುಲಿ ಸೆರೆ ಸಿಕ್ಕ ಸುತ್ತಮುತ್ತಲಿನ ಸ್ಥಳದಲ್ಲಿ ಡ್ರೋನ್‌ನಲ್ಲಿ ಪರಿಶೀಲನೆ ನಡೆಸಿದಾಗ ಹುಲಿ ಮರಿಗಳ ಸಂಚಾರದ ದೃಶ್ಯ ಸೆರೆಯಾಗಿತ್ತು. ಹುಲಿ ಮರಿಗಳಿಗೆ 10 ತಿಂಗಳು ಆಗಿರುವುದರಿಂದ ಬೇಟೆಯಾಡುವ ಕಲೆ ಗೊತ್ತಿಲ್ಲ. ಈ ಹಿನ್ನೆಲೆಯಲ್ಲಿ ಮರಿಗಳನ್ನು ರಕ್ಷಣೆ ಮಾಡುವಂತೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಕಳೆದ ರಾತ್ರಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿ ಪೊದೆಯೊಂದರಲ್ಲಿ ಅಡಗಿದ್ದ ಹುಲಿ ಮರಿಯೊಂದನ್ನು ಸಾಕಾನೆಗಳೊಂದಿಗೆ ಕಾರ್ಯಾಚರಣೆ ನಡೆಸಿ, ಪಶುವೈದ್ಯ ಡಾ. ಆದರ್ಶ್ ಅರವಳಿಕೆ ಮದ್ದು ನೀಡಿ, ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಬಳಿಕ ಬೋನಿನೊಳಗೆ ಇಟ್ಟು ಪ್ರಾಥಮಿಕ ಚಿಕಿತ್ಸೆ ನೀಡಿ ಆರೈಕೆ ಮಾಡಿದ ಬಳಿಕ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಪ್ರಸ್ತುತ ಸೆರೆ ಸಿಕ್ಕಿರುವ ಹುಲಿ ಮರಿ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿದು ಬಂದಿದೆ. ಆದರೂ, ಅದರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ.



ನಂಜೇದೇವನಪುರದ ಬಳಿ ಸೆರೆ ಹಿಡಿದ 10 ತಿಂಗಳ ಹೆಣ್ಣು ಹುಲಿ ಮರಿ.

ಮರಿಗಳ ರಕ್ಷಣೆ ಮುಖ್ಯ

ಹುಲಿ ಸೆರೆ ಕಾರ್ಯಾಚರಣೆಯನ್ನು ರಾತ್ರಿ ನಡೆಸುತ್ತಿರುವುದಕ್ಕೆ ಕೆಲ ಹೋರಾಟಗಾರರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಿಸಿದ್ದಾರೆ. ಆದರೆ, ಎಸ್‌ಓಪಿ ಪಾಲನೆಗಾಗಿ ಕಾಯುತ್ತಿದ್ದರೆ ಹುಲಿ ಮರಿಗಳನ್ನು ಕಳೆದುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಬಹುದು. ಹುಲಿ ಮರಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು, ತಾಯಿ ಮಡಿಲಿಗೆ ಸೇರಿಸುವುದಕ್ಕಾಗಿ ಕಾರ್ಯಾಚರಣೆಯನ್ನು ತ್ವರಿತಗತಿಯಲ್ಲಿ ನಡೆಸುವಂತೆ ಪ್ರಾಣಿ ಪ್ರಿಯರು ಆಗ್ರಹಿಸಿದ್ದಾರೆ. ಈಗಾಗಲೇ ಹುಣಸೂರು ಬಳಿ ರಕ್ಷಣೆ ಮಾಡಿದ್ದ ಹುಲಿ ಮರಿಗಳಲ್ಲಿ ಮೂರು ಮರಿಗಳನ್ನು ಕಳೆದು ಕೊಂಡಿದ್ದೇವೆ. ನಂಜೇದೇವನಪುರದ ಬಳಿ ಓಡಾಡುತ್ತಿರುವ ಉಳಿದ ಮೂರು ಮರಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ನಿತ್ರಾಣಗೊಂಡಿರುವ ಸಾಧ್ಯತೆ: ತಾಯಿ ಸೆರೆ ಸಿಕ್ಕು ಏಳು ದಿನವಾಗಿದ್ದು, ಮರಿಗಳು ಆಹಾರ ವಿಲ್ಲದೆ ಹಸಿವಿನಿಂದ ಕಂಗೆಟ್ಟಿರುವ ಸಾಧ್ಯತೆ ಇದೆ. ಕೇವಲ 10 ತಿಂಗಳಷ್ಟೇ ಆಗಿರುವುದರಿಂದ ಸ್ವಯಂ ಬೇಟೆಯಾಡುವ ಸಾಮರ್ಥ್ಯವಿಲ್ಲದ ಕಾರಣ, ಹಸಿವು ನೀಗಿಸಿಕೊಳ್ಳಲು ತಾಯಿ ಹುಲಿಯನ್ನೇ ಅವಲಂಭಿಸಿವೆ. ಈ ಹಿನ್ನೆಲೆಯಲ್ಲಿ ಉಳಿದ ಮೂರು ಮರಿಗಳನ್ನು ತ್ವರಿತಗತಿಯಲ್ಲಿ ಸೆರೆ ಹಿಡಿದು ರಕ್ಷಣೆ ಮಾಡದೇ ಇದ್ದರೆ, ಅವುಗಳು ಹಸಿವಿನಿಂದ ನಿತ್ರಾಣಗೊಳ್ಳುವ ಸಾಧ್ಯತೆ ಹೆಚ್ಚಾಗಿದೆ.

ಹುಲಿ ಜಾಡು: ಹರವೇ ಹೋಬಳಿಯ ನಂಜೇದೇವನಪುರದ ಜಮೀನೊಂದರಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ನಾಲ್ಕು ಮರಿಗಳೊಂದಿಗೆ ತಾಯಿ ಹುಲಿ ವಿಹರಿಸುತ್ತಿದ್ದ ದೃಶ್ಯ ಸೆರೆಯಾಗಿ ಸ್ಥಳೀಯರಲ್ಲಿ ಭಯದೊಂದಿಗೆ ಸಂಚಲನ ಉಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲಿಸಿದ್ದ ಅರಣ್ಯ ಇಲಾಖೆ ನಾಲ್ಕು ಮರಿಗಳೊಂದಿಗೆ ತಾಯಿ ಹುಲಿ ಜಾಡನ್ನು ಖಚಿತಪಡಿಸಿಕೊಂಡು ಥರ್ಮಲ್ ಡ್ರೋನ್ ಕಾರ್ಯಾಚರಣೆ ನಡೆಸಿತ್ತು. ಈ ವೇಳೆ ಪೊದೆಯೊಂದರ ಬಳಿ ಮರಿಗಳೊಂದಿಗೆ ತಾಯಿ ಹುಲಿ ವಿರಮಿಸುತ್ತಿರುವ ದೃಶ್ಯ ಸೆರೆಯಾಗಿತ್ತು.

ಆದರೆ, ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದ್ದರೂ, ಮರಿಗಳೊಂದಿಗೆ ತಾಯಿ ಹುಲಿ ಸೆರೆ ಸಿಗದೆ ಅಜ್ಞಾತವಾಗಿತ್ತು. ಈ ನಡುವೆ ಆ ಭಾಗದಲ್ಲಿಟ್ಟಿದ್ದ ಬೋನಿಗೆ ಹೊಸ ಹುಲಿಯೊಂದು ಸೆರೆ ಸಿಕ್ಕಿತ್ತು. ಆ ಹುಲಿ ಸೆರೆ ಅಚ್ಚರಿ ಮೂಡಿಸಿತ್ತು. ಅದೇ ಸ್ಥಳದಲ್ಲಿಟ್ಟಿದ್ದ ತುಮಕೂರು ಮಾದರಿಯ ಬೋನ್‌ಗೆ ಜ.9ರಂದು ತಾಯಿ ಹುಲಿ ಸೆರೆ ಸಿಕ್ಕಿದ್ದನ್ನು ಸ್ಮರಿಸಬಹುದು.

ಟೋಲ್ ಪ್ಲಾಜಾಗಳಲ್ಲಿ ಏ.1ರಿಂದ
ನಗದು ಪಾವತಿ ಬಂದ್

ನವದೆಹಲಿ, ಜ.16– ಭಾರತದ ಹೆದ್ದಾರಿ ಪ್ರಯಾಣವು ಸಂಪೂರ್ಣ ಡಿಜಿಟಲ್ ರೂಪಾಂತರಗೊಳ್ಳುತ್ತಿದೆ. ಹೊಸ್ತಿಲಲ್ಲಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಏಪ್ರಿಲ್ 1ರಿಂದ ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ನಗದು ಪಾವತಿಯನ್ನು ಬಂದ್ ಮಾಡಲಿದೆ.

ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಪ್ರಯಾಣ ವನ್ನು ಸುಗಮಗೊಳಿಸುವ ಉದ್ದೇಶದಿಂದ ಪ್ರಯಾಣಿಕರು ಟೋಲ್‌ಗಳನ್ನು ಪಾವತಿಸಲು ಫಾಸ್ಟ್ಯಾಗ್ ಅಥವಾ ಯುಪಿಐ ಅನ್ನು ಬಳಸಬೇಕಾಗುತ್ತದೆ. ಸಚಿವಾಲಯವು ಸುಗಮ ಪರಿವರ್ತನೆಗೆ ಸಿದ್ಧತೆ ನಡೆಸುತ್ತಿದೆ. ಈ ಕ್ರಮವು ದೀರ್ಘ ಸರತಿ ಸಾಲುಗಳನ್ನು ನಿವಾರಿಸುತ್ತದೆ ಮತ್ತು ಪ್ರಯಾಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಗಡುವು ಸಮೀಪಿಸುತ್ತಿರುವುದರಿಂದ, ಪ್ರಯಾಣಿಕರು ಡಿಜಿಟಲ್ ಬದಲಾವಣೆಗೆ ಸಿದ್ಧರಾಗಲು ಮತ್ತು ಅಗತ್ಯ ವ್ಯವಸ್ಥೆಗಳನ್ನು ಮಾಡಲು ಸೂಚಿಸಲಾಗಿದೆ.

ಈ ಹೊಸ ನಿಯಮದೊಂದಿಗೆ ಸರ್ಕಾರವು ಹಲವಾರು ಪ್ರಯಾಣದ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.

ಹೊಸ ನಿಯಮ ಜಾರಿ



ಫೈಲ್ ಚಿತ್ರ

ಟೋಲ್ ಪ್ಲಾಜಾಗಳಲ್ಲಿ ನಗದು ಪಾವತಿಗಾಗಿ ಕಾಯಬೇಕಾಗುತ್ತದೆ. ಇದನ್ನು ತಪ್ಪಿಸಿ ಸುಗಮ ಪ್ರಯಾಣಕ್ಕೆ ಅವಕಾಶ ಕಲ್ಪಿಸಬಹುದು. ವಾಹನಗಳು ಟೋಲ್ ಬೂತ್‌ಗಳಲ್ಲಿ ನಿಲ್ಲದೇ ಸುಗಮ ಸಂಚಾರದಿಂದ ಗಣನೀಯ ಪ್ರಮಾಣದ ಡೀಸೆಲ್ ಮತ್ತು ಪೆಟ್ರೋಲ್ ಉಳಿತಾಯವಾಗುತ್ತದೆ. ಡಿಜಿಟಲ್ ಪಾವತಿಗಳು ಎಲ್ಲಾ ವಹಿವಾಟುಗಳ ಸ್ಪಷ್ಟ, ಟ್ರ್ಯಾಕ್ ಮಾಡಬಹುದಾದ ದಾಖಲೆಯನ್ನು ಒದಗಿಸುತ್ತವೆ.

ಈ ಬದಲಾವಣೆಯು ಬಹು–ಪಥ ಮುಕ್ತ ಸಂಚಾರದ ವ್ಯವಸ್ಥೆಯತ್ತ ಮೊದಲ ಹೆಜ್ಜೆಯಾಗಿದೆ. ಯಾವುದೇ ಭೌತಿಕ ಅಡೆತಡೆಗಳಿಲ್ಲದೆ ಹೆದ್ದಾರಿ ವೇಗದಲ್ಲಿ ಕಾರುಗಳು ಟೋಲ್ ಪ್ರದೇಶಗಳ ಮೂಲಕ ಓಡಿಸಲು ಅನುವು ಮಾಡಿಕೊಡುವ ತಂತ್ರಜ್ಞಾನವನ್ನು ಕಾರ್ಯಗತಗೊಳಿಸಲು ■6ನೇ ಪುಟಕ್ಕೆ

ದೆಹಲಿಯಲ್ಲಿ ಡಿಸಿಎಂ ಡಿಕೆಶಿ ಅಧಿಕಾರ ಹಸ್ತಾಂತರ ಸಂಬಂಧ ವರಿಷ್ಠರ ಮನವೊಲಿಕೆ ಕಸರತ್ತು

ಬೆಂಗಳೂರು, ಜ.16(ಕೆಎಂಶಿ)– ಕರ್ನಾಟಕದಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯುವ ವೇಳೆ ನೀಡಿದ್ದ ವಾಗ್ದಾನದಂತೆ ಮುಖ್ಯಮಂತ್ರಿಗಾದಿ ಹಸ್ತಾಂತರಿಸುವಂತೆ ಕಾಂಗ್ರೆಸ್ ವರಿಷ್ಠರ ಮನವೊಲಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಬಿಡಾರ ಹೂಡಿದ್ದಾರೆ.



ಅಸ್ಸಾಂ ವಿಧಾನಸಭಾ ಚುನಾವಣೆಯ ಪಕ್ಷದ ವೀಕ್ಷಕ ಹೊಣೆ ಹೊತ್ತಿರುವ ಶಿವಕುಮಾರ್ ಇಂದು ಎಐಸಿಸಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದರು.


ಸಭೆ ನಂತರ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವು ನಾಯಕರನ್ನು ಪ್ರತ್ಯೇಕವಾಗಿ, ಅದರಲ್ಲೂ ಕೆಲವರನ್ನು ಗೌಪ್ಯವಾಗಿ ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಾಡಲಿದ್ದಾರೆ. ತಮಿಳುನಾಡಿನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರು ಮೂಲಕ ತೆರಳಲು ಆಗಮಿಸಿದ್ದ ಸಂದರ್ಭದಲ್ಲಿ ಶಿವಕುಮಾರ್ ರಾಹುಲ್ ಭೇಟಿ ಮಾಡಿ, ಅಧಿಕಾರ ಹಸ್ತಾಂತರಕ್ಕೆ ಚಾಲನೆ ನೀಡುವಂತೆ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ್ದ ರಾಹುಲ್, ನಿಮ್ಮನ್ನು ಮತ್ತು ಮುಖ್ಯಮಂತ್ರಿ ■6ನೇ ಪುಟಕ್ಕೆ

ಮುಂಬೈ ಕಿರೀಟ ಮುಡಿಗೇರಿಸಿಕೊಂಡ ಬಿಜೆಪಿ ನೇತೃತ್ವದ ಮಹಾಯುತಿ

30 ವರ್ಷಗಳ ಬಳಿಕ ಠಾಕ್ರೆ ಭದ್ರಕೋಟೆ ಪತನ

ಮುಂಬೈ, ಜ.16– ಬೃಹನ್ಮುಂಬೈ (ಬಿಎಂಸಿ) ಮೇಲೆ ಠಾಕ್ರೆ ಸಹೋದರರು 25 ವರ್ಷಗಳ ನಂತರ ಹಿಡಿತ ಕಳೆದುಕೊಂಡಿದ್ದಾರೆ. ಬೃಹನ್ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಮಹಾಯುತಿ ಭಾರೀ ಗೆಲುವು ಕಂಡಿದೆ.

ಬಿಜೆಪಿ ನೇತೃತ್ವದ ಮಹಾಯುತಿ 118, ಯುಬಿಟಿ 65, ಕಾಂಗ್ರೆಸ್ 24, ಎಐ ಎಂಐಎಂ 8, ಎಂಎನ್‌ಎಸ್ 6, ಎನ್‌ಸಿಪಿ 3, ಎಸ್‌ಪಿ 2, ಎನ್‌ಸಿಪಿ (ಎಸ್‌ಪಿ)1 ಗಳಿಸಿವೆ. ಬಿಜೆಪಿ ನೇತೃತ್ವದ ಮಹಾಯುತಿ ಸ್ಪಷ್ಟಬಹುಮತದೊಂದಿಗೆ ಬೃಹನ್ಮುಂಬೈ ಪಾಲಿಕೆ ಅಧಿಕಾರ ಹಿಡಿಯುವುದು ಖಚಿತವಾಗಿದೆ. ಗುರುವಾರ ಬಿಎಂಸಿ ಚುನಾವಣೆ ನಡೆದಿತ್ತು. ಭಾರತದ ವಾಣಿಜ್ಯ ರಾಜಧಾನಿಯಾಗಿರುವ ಮುಂಬೈ ಅನೇಕ ಉದ್ಯಮಿಗಳು, ಸೆಲಬ್ರಿಟಿಗಳು, ರಾಜಕಾರಣಿಗಳ ವಾಸ ಸ್ಥಾನ. ಇದು ಭಾರತದ ಅತ್ಯಂತ ಶ್ರೀಮಂತ ಮತ್ತು ಪ್ರಭಾವಿ ಕಾರ್ಪೋರೇಷನ್ ಆಗಿದೆ. ಬಿಎಂಸಿ ಸೇರಿದಂತೆ ಮಹಾರಾಷ್ಟ್ರದಾದ್ಯಂತ 29 ನಾಗರಿಕ ಸಂಸ್ಥೆಗಳಲ್ಲಿ ಮತದಾನ ನಡೆದಿತ್ತು. ■6ನೇ ಪುಟಕ್ಕೆ




ಗೆಲುವಿನ ರುವಾರಿ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್‌ಗೆ ಸಿಹಿ ತಿನಿಸುತ್ತಿರುವುದು.

ಚುನಾವಣೆ ವೇಳೆ ತಮಿಳುನಾಡು ಬಿಜೆಪಿ ನಾಯಕ ಅಣ್ಣಾಮಲೈಗೆ ರಸಮಲೈ.... ಉಠಾವೋ ಲುಂಗಿ... ಬಜಾವೋ ಪುಂಗಿ ಎಂದು ಲೇವಡಿ ಮಾಡಿದ್ದ ಶಿವಸೇನೆಯ ರಾಜ್‌ಠಾಕ್ರೆಗೆ ಬಿಜೆಪಿಯ ತೇಜಿಂದ್ರ ರಸಮಲೈ ಸಿಹಿ ಕಳುಹಿಸಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ವ್ಯಂಗ್ಯವಾಡಿದ್ದಾರೆ.

ಧನ್ಯವಾದ ಮಹಾರಾಷ್ಟ್ರ: ಪ್ರಧಾನಿ ಮೋದಿ ಟ್ವೀಟ್

ಮುಂಬೈ, ಜ.16– ಬಿಜೆಪಿ ಹಾಗೂ ಮಿತ್ರಪಕ್ಷಗಳ ಗೆಲುವಿನ ಬೆನ್ನಲ್ಲೇ ಎಕ್ಸ್ ಪೋಸ್ಟ್ ಮೂಲಕ ಪ್ರಧಾನಿ ಮೋದಿ ಮಹಾರಾಷ್ಟ್ರದ ಜನರಿಗೆ ಧನ್ಯವಾದ ಅರ್ಪಿಸಿದ್ದಾರೆ.



ತಮ್ಮ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ 'ರಾಜ್ಯದ ಉತ್ಸಾಹ ಭರಿತ ಜನರು ಎನ್‌ಡಿಎಯ ಸಾರ್ವಜನಿಕ ಕಲ್ಯಾಣ ಮತ್ತು ಉತ್ತಮ ಆಡಳಿತದ ಕಾರ್ಯ ಸೂಚಿಯನ್ನು ಆಶೀರ್ವದಿಸಿದ್ದಾರೆ! ವಿವಿಧ ಮುನ್ಸಿಪಲ್ ಕಾರ್ಪೋರೇಷನ್ ಚುನಾವಣೆಗಳ ಫಲಿತಾಂಶಗಳು ಎನ್‌ಡಿಎ ಮತ್ತು ಮಹಾರಾಷ್ಟ್ರದ ಜನರ ನಡುವಿನ ಬಾಂಧವ್ಯವು ಇನ್ನಷ್ಟು ಬಲಗೊಂಡಿದೆ ಎಂದು ತೋರಿಸುತ್ತದೆ. ನಮ್ಮ ಕೆಲಸದ ಅನುಭವ ಮತ್ತು ಅಭಿವೃದ್ಧಿಯ ದೃಷ್ಟಿ ಕೋನವು ಜನರ ಹೃದಯಗಳನ್ನು ಮುಟ್ಟಿದೆ. ಮಹಾರಾಷ್ಟ್ರದ ಎಲ್ಲಾ ಜನರಿಗೆ ನಾನು ಪ್ರಾಮಾಣಿಕವಾಗಿ ಧನ್ಯವಾದ ಹೇಳುತ್ತೇನೆ. ಈ ಜನಾದೇಶವು ಪ್ರಗತಿಯನ್ನು ಮತ್ತಷ್ಟು ವೇಗಗೊಳಿಸುತ್ತದೆ ■6ನೇ ಪುಟಕ್ಕೆ

ಆಸ್ತಿಗಾಗಿ ಅಣ್ಣನೇ ತನ್ನ ಮಕ್ಕಳೊಂದಿಗೆ ಸೇರಿ ತಮ್ಮನ 28 ಬಾರಿ ಇರಿದು ಹತ್ಯೆ

ಜ.21ಕ್ಕೆ ಹಸೆಮಣೆ ಏರಬೇಕಿದ್ದವ ಅಣ್ಣನ ಆಸ್ತಿ ಆಸೆಗೆ ಬಲಿಯಾದ!

ಮಂಡ್ಯ, ಜ.16– ಆಸ್ತಿ ಕಲಹದ ಹಿನ್ನೆಲೆಯಲ್ಲಿ ಅಣ್ಣನೇ ತನ್ನ ಮಕ್ಕಳೊಂದಿಗೆ ಸೇರಿ ತಮ್ಮನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಾಲೂಕಿನ ಮಾಯಪ್ಪನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಮುಂಜಾನೆ ನಡೆದಿದೆ.

ಗ್ರಾಮದ ನಿವಾಸಿ ಯೋಗೇಶ್ (30) ಕೊಲೆಯಾದವರು. ಈತನ ಅಣ್ಣ ಲಿಂಗರಾಜು ತನ್ನ ಮಕ್ಕಳೊಂದಿಗೆ ಸೇರಿ ಹತ್ಯೆ ಮಾಡಿದ್ದು, ಚಾಕುವಿನಿಂದ 28 ಬಾರಿ ಇರಿದು ಕೊಲೆ ಮಾಡಿದ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅವರ ಬಂಧನಕ್ಕೆ ಶೋಧ ಕಾರ್ಯ ಕೈಗೊಂಡಿದ್ದಾರೆ. ಹಲವು ವರ್ಷಗಳಿಂದ ಲಿಂಗರಾಜು ಹಾಗೂ ಯೋಗೇಶ್ ನಡುವೆ ಆಸ್ತಿ ಕಲಹವಿತ್ತು. ಅನೇಕ ಬಾರಿ ಗ್ರಾಮಸ್ಥರು ರಾಜೀ ಸಂಧಾನ ಮಾಡಿಯೂ ಯಾರ ಮಾತಿಗೂ ಲಿಂಗರಾಜು ಬೆಲೆ ಕೊಡುತ್ತಿರಲಿಲ್ಲ.



ಮೃತ ಯೋಗೇಶ್



ಆರೋಪಿ ಲಿಂಗರಾಜು

ಮಾಯಪ್ಪನಹಳ್ಳಿ ಸಮೀಪದ ಹೊನಗಾನಹಳ್ಳಿ ಗ್ರಾಮದ ಯುವತಿಯೊಂದಿಗೆ ಇದೇ ತಿಂಗಳ 21ರಂದು ಯೋಗೇಶ್ ಮದುವೆ ನಿಶ್ಚಯವಾಗಿತ್ತು. ಮನಸ್ತಾಪ ಮರೆತು ಆಹ್ವಾನ ಪತ್ರಿಕೆಯಲ್ಲಿ ಲಿಂಗರಾಜು ಹೆಸರನ್ನು ಯೋಗೇಶ್ ಹಾಕಿಸಿದ್ದ. ಆದರೆ, ಆತ ಅದು ಹೇಗೆ ಮದುವೆಯಾಗುತ್ತಾನೆಂದು ನೋಡುವುದಾಗಿ ಊರು ತುಂಬಾ ಲಿಂಗರಾಜು ದ್ವೇಷ ಕಾರುತ್ತಾ ಹೇಳುತ್ತಿದ್ದನಂತೆ. ಈ ವೇಳೆ ಗ್ರಾಮಸ್ಥರು, ಯೋಗೇಶ್‌ಗೆ ಎಚ್ಚರಿಕೆಯಿಂದ ಇರು. ಇಲ್ಲದಿದ್ದಲ್ಲಿ ಮದುವೆಯಾಗುವವರೆಗೆ ಊರಿಗೆ ಬರಬೇಡ ಎಂದು ಸಲಹೆ ನೀಡಿದ್ದರಂತೆ.

ಮುನ್ನೆಚ್ಚರಿಕೆ ಕ್ರಮವಾಗಿ ಮನೆಯಲ್ಲಿ ಸಿಸಿ ಕ್ಯಾಮರಾ ಸಹ ಹಾಕಿಸಲು ಯೋಗೇಶ್ ನಿರ್ಧರಿಸಿದ್ದ. ಈ ವೇಳೆ ತನ್ನ ತಾಯಿಗೆ ಹೃದಯಾಘಾತವಾಗಿದ್ದರಿಂದ ಮಂಡ್ಯದ ಪ್ರಶಾಂತ್ ನರ್ಸಿಂಗ್ ಹೋಂನಲ್ಲಿ ■6ನೇ ಪುಟಕ್ಕೆ

ಸುತ್ತೂರು ಶ್ರೀ ಕ್ಷೇತ್ರದ ಜಾತ್ರೆಯಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ 135 ಜೋಡಿಗಳು



ಸುತ್ತೂರು ಜಾತ್ರೆಯಲ್ಲಿ ಹೊಸಬಾಳಿಗೆ ಕಾಲಿಟ್ಟ 135 ನವಜೋಡಿಗಳು.

ನಂಜನಗೂಡು, ಜ.16– ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಜರುಗಿದ ಸರಳ ಸಾಮೂಹಿಕ ವಿವಾಹದಲ್ಲಿ ನಾಡಿನ ಮಠಾಧೀಶರು, ಪಾದ್ರಿಗಳು, ಮೌಲ್ವಿಗಳು ಸೇರಿದಂತೆ ಸರ್ವಧರ್ಮದ ಮಹನೀಯರ ಸಮ್ಮುಖದಲ್ಲಿ 135 ಜೋಡಿಗಳು ಹೊಸ ಬಾಳಿಗೆ ಕಾಲಿಟ್ಟರು.

ಸಾಮೂಹಿಕ ವಿವಾಹದಲ್ಲಿ ರಾಜ್ಯದ ಮೈಸೂರು, ಚಾಮರಾಜನಗರ, ಮಂಡ್ಯ, ಗುಲ್ಬರ್ಗ, ರಾಯಚೂರು, ಬೆಂಗಳೂರು, ತಮಿಳುನಾಡು ಸೇರಿದಂತೆ ವೀರಶೈವ ಲಿಂಗಾಯಿತ 4 ಜೋಡಿ, ಪರಿಶಿಷ್ಟ ಜಾತಿಯ 84 ಜೋಡಿ, ಪರಿಶಿಷ್ಟ ಪಂಗಡದ 15 ಜೋಡಿ, ಹಿಂದುಳಿದ ವರ್ಗದ 21 ಜೋಡಿ, ಅಂತರ್ಜಾತಿ ವಿವಾಹವಾದ 11 ಜೋಡಿಗಳು ಸೇರಿದಂತೆ 135 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಡುವ ಮೂಲಕ ಸತಿಪತಿಗಳಾದರು.

ಸಾಮೂಹಿಕ ವಿವಾಹದಲ್ಲಿ ಕೈಹಿಡಿದ ಜೋಡಿಗಳು ಯಾವುದೇ ಜಾತಿ ಧರ್ಮಕ್ಕೆ ಸೀಮಿತವಾಗದೆ, ಪ್ರೀತಿಗೆ ಬಡತನ, ಜಾತಿ, ಅಂಗವಿಕಲತೆ, ಪೋಷಕರ ವಿರೋಧ ಯಾವುದು ಸಹ ಅಡ್ಡಿಯಾಗುವುದಿಲ್ಲ ಎಂಬ ಸಂದೇಶವನ್ನು ಸಾರಿದವು. ಮೈಸೂರಿನ ಜೆಪಿ ನಗರದ ನಿವಾಸಿ ಜಯ ಚಂದ್ರು ಚೆನ್ನಗಿರಿ ತಾಲೂಕಿನ ಕುಳೆನೂರು ಗ್ರಾಮದ ವಿದ್ಯಾಶ್ರೀ ಅವರನ್ನು ಅಂತರ್ಜಾತಿ ಮರುವಿವಾಹವಾಗುವ ಮೂಲಕ ಪ್ರೀತಿಗೆ ಜಾತಿಯ ಎಲ್ಲೇ ಇಲ್ಲ ಎಂಬುದನ್ನು ಸಾಬೀತುಪಡಿಸಿದರು. ■6ನೇ ಪುಟಕ್ಕೆ

ಇತ್ತೀಚಿನ ದಿನಗಳಲ್ಲಿ ಮದುವೆ ಆಡಂಬರವಾಗಿದ್ದು, ಲಕ್ಷಗಟ್ಟಲೆ ಖರ್ಚಾಗುತ್ತಿದೆ. ಬಡವರಿಗೆ ನೆರವಾಗುವ ಉದ್ದೇಶದಿಂದ ಹಾಗೂ ಮದುವೆ ವೆಚ್ಚವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಸರಳ ಸಾಮೂಹಿಕ ವಿವಾಹವನ್ನು ನಡೆಸಿಕೊಂಡು ಬರುತ್ತಿದ್ದಾರೆ, ಬಡತನ ನಿರ್ಮೂಲನೆಯಾಗಲು ಇಂತಹ ಸಾಮೂಹಿಕ ವಿವಾಹಗಳು ಹೆಚ್ಚು ಹೆಚ್ಚಾಗಿ ನಡೆಯಬೇಕು. ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಸಾಮೂಹಿಕ ವಿವಾಹದಲ್ಲಿ ಮದುವೆಯಾದ ಜೋಡಿಗಳು ಪರಸ್ಪರ ಪ್ರೀತಿ ವಿಶ್ವಾಸದಿಂದಿರಬೇಕು, ಮತ್ತು ಹಿರಿಯರಿಗೆ ಗೌರವ ಕೊಟ್ಟು ಕುಟುಂಬಕ್ಕೆ ಆದರ್ಶಪ್ರಾಯರಾಗಿರಬೇಕು.
–ಆರ್.ವಿ.ದೇಶಪಾಂಡೆ, ಮಾಜಿ ಸಚಿವ.

ಸುತ್ತೂರು ಮಠ ಧರ್ಮಕಾರ್ಯದ ಜೊತೆಗೆ ಸಾಮೂಹಿಕ ವಿವಾಹವನ್ನು ನಡೆಸಿಕೊಂಡು ಬರುವ ಮೂಲಕ ಲಕ್ಷಾಂತರ ಬಡವರಿಗೆ ನೆರವಾಗಿದೆ. ಶ್ರೀಮಠದಿಂದ ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಪ್ರಬುದ್ಧ ಸೇವೆಯನ್ನು ಸಲ್ಲಿಸಿ ವಿಶ್ವವಿಖ್ಯಾತಿ ಗಳಿಸಿದೆ.
–ರಾಮಲಿಂಗಾ ರೆಡ್ಡಿ, ಸಚಿವ

ಮೈಸೂರು ಮಿತ್ರ ಶನಿವಾರ 17 ಜನವರಿ 2026

ಮಾಜಿ ಶಾಸಕ ನಾಗೇಂದ್ರರಿಂದ ಗೋಪೂಜೆ; ಕಿಚ್ಚು ಹಾಯಿಸಿ ಸಂಕ್ರಾಂತಿ ಹಬ್ಬ ಆಚರಣೆ



ಮಾಜಿ ಶಾಸಕ ಎಲ್. ನಾಗೇಂದ್ರ ಸಂಕ್ರಾಂತಿಯ ದಿನ ಗೋಪೂಜೆ ಸಲ್ಲಿಸಿದರು.

ಮೈಸೂರು, ಜ.16– ಮೈಸೂರಿನ ಗೋಕುಲಂ 1ನೇ ಹಂತದಲ್ಲಿ ಮಾಜಿ ಶಾಸಕರು ಹಾಗೂ ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ ಅವರು ಸಂಕ್ರಾಂತಿಯ ದಿನ ಗೋಪೂಜೆ ಸಲ್ಲಿಸಿ, ಸಾಂಪ್ರದಾಯಿಕವಾಗಿ ಕಿಚ್ಚು ಹಾಯಿಸುವ ಮೂಲಕ ಕ್ಷೇತ್ರದ ಕಾರ್ಯಕರ್ತರೊಂದಿಗೆ ಹಬ್ಬದ ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಗೇಂದ್ರ ಸಂಕ್ರಾಂತಿಯ ವಿಶೇಷ ನೇಸರದ ಪಥ ಬದಲಾವಣೆ ಮಾಡುವ ಸಮಯದಲ್ಲಿ ಸೂರ್ಯನ ಉತ್ತರಾಯಣ ಆರಂಭವಾಗುತ್ತದೆ. ಇದು ಶುಭ ಕಾಲವಾಗುತ್ತದೆ ಎಂಬ ನಂಬಿಕೆ ಹಿಂದೂಗಳ ನಂಬಿಕೆಯ ದಿನ. ಈ ದಿನದಂದು ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ನಗರೀಕರಣ ಆವರಿಸಿರುವ ಗೋಕುಲಂ ಬಡಾವಣೆಯಲ್ಲಿ ಗೋಪಾಲಕರು ಹಸುಗಳ ವಿಶೇಷವಾಗಿ ಅಲಂಕರಿಸಿ ಶ್ರದ್ಧೆಯಿಂದ ಕಿಚ್ಚು ಹಾಯಿಸಿ ಪೂಜಿಸುವುದು ವಾಡಿಕೆ. ಇದರಲ್ಲಿ ಭಾಗಿಯಾಗಿದ್ದು, ಸಂತಸ ತಂದಿದೆ. ನಾಡಿನ ಸಮಸ್ತರಿಗೂ ಸಂಕ್ರಾಂತಿ ಶುಭ ಕೋರುವುದಾಗಿ ತಿಳಿಸಿದರು.

ಈ ಸಂಧರ್ಭದಲ್ಲಿ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ವಿ.ಮಧು ವೆಂಕಟಾಚಲ, ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರ ಬಿಜೆಪಿ ಕಾರ್ಯದರ್ಶಿ ಎಂ.ಎಸ್.ಪುನೀತ್ ಗೌಡ, ಲೋಕನಾಯಕನಗರ ಶ್ರೀನಿವಾಸ್‌ಗೌಡ, ಮಾಜಿ ನಗರಪಾಲಿಕೆ ಸದಸ್ಯ ಎಂ ಚಿಕ್ಕವೆಂಕಟು, ಎನ್.ಯೋಗಾನಂದ್, ಆರ್ ಸೋಮಣ್ಣ, ಕೆ.ಗಿರೀಶ್, ಪಾಲ್ಕನ್ ಪ್ರಸನ್ನ, ಸಿ.ಡಿ.ಕುಮಾರ್, ಜೀವನ್ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ರಾಮುಗೌಡ, ತೇಗು ಮೆಸ್ ಶ್ಯಾಮ್, ಕರಿಬಸಪ್ಪ ಶ್ರೀನಿವಾಸ್, ಜಯಣ್ಣ, ಸಂಜೀವಿನಿ ಕುಮಾರ್, ಜಿಮ್ ಪ್ರಶಾಂತ್, ಚೇತನ್ ಶ್ರೀನಿವಾಸ್, ವಿನೋದ್, ರಾಜೇಶ್, ಮಹೇಶ್ ನಾಗ, ಮಹದೇವ, ಶಾಮಿಯಾನ ಕುಮಾರ್, ರಂಗಸ್ವಾಮಿ, ಸತೀಶ್, ಕಾಂತರಾಜ್,ಪ್ರಭು ರೈಲ್ವೆ ಸೀನಪ್ಪ ರವಿ,ಕುಮಾರ್, ಕು.ಶ್ರೀನಿವಾಸ್, ದಿನೇಶ್,ಶ್ರೀಕಾಂತ್ ಮತ್ತಿತರರಿದ್ದರು.

ಸಂಕ್ರಾಂತಿ ಆಚರಣೆ !



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಮಕರ ಸಂಕ್ರಾಂತಿ ಹಬ್ಬ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಆಡಳಿತಾಧಿಕಾರಿ ಶ್ರೀಮತಿ ಕಾಂತಿ ನಾಯಕ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ವಾಜಮಂಗಲದ ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕರ ಸಂಕ್ರಾಂತಿ ಹಬ್ಬ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕರು, ಸಹಶಿಕ್ಷಕರು, ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ವಿಜಯನಗರ ಮೊದಲ ಹಂತದ ಚಂದನ ಜಯಂತ್ ಅವರ ನಾಲ್ಕರ ಪೋರಿ ತನ್ನ ಜೊತೆಗಾರರಿಗೆ ಸಂಕ್ರಾಂತಿಯ ಎಳ್ಳು ಬೆಲ್ಲ ವಿತರಿಸಿ ಸಂಭ್ರಮಿಸಿದಳು.

ಭಾನುವಾರ ನಿನಾದ ಗೃಹ ಸಂಗೀತದ 16ನೇ ಕಾರ್ಯಕ್ರಮ

ಮೈಸೂರು, ಜ.16– ಮೈಸೂರಿನ ಕೇರ್ಗಳ್ಳಿಯ, 37, ನಿನಾದ, ರಿಷಭ್ ಸಿದ್ಧಿ ಲೇಔಟ್‌ನಲ್ಲಿ ರಂಜನಿ ಮೆಮೋರಿಯಲ್ ಟ್ರಸ್ಟ್ ಅರ್ಪಿಸುವ ನಿನಾದ ಗೃಹ ಸಂಗೀತದ 16ನೇ ಕಾರ್ಯಕ್ರಮ ಭಾನುವಾರ ಸಂಜೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೌಶಿಕ್ ಐತಾಳ್ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ ಪ್ರಸ್ತುತ ಪಡಿಸಲಿದ್ದಾರೆ. ಇವರಿಗೆ ತಬಲಾದಲ್ಲಿ ಸುಮಿತ್ ನಾಯಕ್ ಮತ್ತು ಹಾರ್ಮೋನಿಯಂನಲ್ಲಿ ಪ್ರಸಾದ್ ಕಾಮತ್ ಸಾಥ್ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ 94496 76014 ಸಂಪರ್ಕಿಸಬಹುದು.

ಭಜನಾ ಕಾರ್ಯಕ್ರಮ



ಮೈಸೂರಿನ ಅಶೋಕಪುರಂನ ಡಾ.ಬಿ.ಆರ್ ಅಂಬೇಡ್ಕರ್ ಕಾಲೋನಿಯಲ್ಲಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶ್ರೀರಾಮ ಮಂದಿರ ಯುವಕರ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಭಜನಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭಾಗವಹಿಸಿದ್ದರು. ಕಾಲೋನಿಯ ಯಜಮಾನರಾದ ಆರ್ಮುಗಂ, ಮಹದೇವ, ವೆಂಕಟೇಶ್, ರವಿಶಂಕರ್, ನಾಗರಾಜ್ , ಅರ್ಚಕರಾದ ಕಂಬಯ್ಯ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕನಕದಾಸರ ಜಯಂತಿ; ಪ್ರತಿಭಾ ಪುರಸ್ಕಾರ

ಮೈಸೂರು, ಜ.16(ಎಂಟಿವೈ)– ಮೈಸೂರಿನ ಕೆಪಿಟಿಸಿಎಲ್ ಶ್ರೀ ಕನಕ ನೌಕರರ ಹಿತರಕ್ಷಣಾ ಸಮಿತಿ ವತಿಯಿಂದ ಜ.18ರಂದು ಸಂಜೆ 4 ಗಂಟೆಗೆ ಸಿದ್ಧಾರ್ಥನಗರದಲ್ಲಿರುವ ಜನಕ ಸಮುದಾಯ ಭವನದಲ್ಲಿ ಸಂತ ಶ್ರೇಷ್ಠ, ಭಕ್ತ ಕನಕದಾಸರ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಶ್ರೀ ಕನಕ ನೌಕರರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ.ಗಿರೀಶ್ ತಿಳಿಸಿದ್ದಾರೆ.

ನಿಧನ

ಆರ್. ನಾಗರಾಜು



ಮೈಸೂರು, ಜ.16– ಮೈಸೂರಿನ ನಜರ್‌ಬಾದ್ ನಿವಾಸಿ, ಶಾರದಾವಿಲಾಸ ಕಾನೂನು ಕಾಲೇಜಿನ ನಿವೃತ್ತ ಉದ್ಯೋಗಿ ನಾಗರಾಜು ಆರ್.(69) ಅನಾರೋಗ್ಯದ ನಿಮಿತ್ತ ಸ್ವಗೃಹದಲ್ಲಿ ಸೋಮವಾರ (ಜ. 16) ನಿಧನರಾದರು.

ಮೃತರು ಪತ್ನಿ ರಮಾಮಣಿ, ಪುತ್ರರಾದ ಶಿವರಾಜು.ಎನ್, ನಾಗೇಂದ್ರಪ್ರಸಾದ್.ಎನ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಆರ್.ಮಹದೇವು



ಮೈಸೂರು, ಜ.16– ತಾಲೂಕಿನ ಹಂಚ್ಯಾ ಗ್ರಾಮದ ನಿವಾಸಿ ಹೆಚ್.ಆರ್.ಮಹದೇವು(57) ಅವರು ಶುಕ್ರವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಇವರು ಪತ್ನಿ ಸವಿತಾ, ಪುತ್ರ ದಯಾನಂದ, ಪುತ್ರಿ ಹೇಮಾವತಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹಂಚ್ಯಾ ಗ್ರಾಮದ ಸಾರ್ವಜನಿಕ ಸ್ಮಶಾನದಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಹದೇವು ಅವರ ನಿಧನಕ್ಕೆ ಕಾಂಗ್ರೆಸ್ ಮುಖಂಡ ಕೆ.ಎಸ್.ಸಣ್ಣಸ್ವಾಮಿ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಆರ್.ಎಂ.ನಾಗಮ್ಮ



ಮೈಸೂರು: ಮೈಸೂರಿನ ಸರಸ್ವತಿಪುರಂ 14ನೇ ಮುಖ್ಯರಸ್ತೆ ನಿವಾಸಿ ಲೇಟ್ ಬಿ.ಎಸ್.ಶಿವಕುಮಾರ್ (ನಿವೃತ್ತ ಇಂಜಿನಿಯರ್) ಧರ್ಮಪತ್ನಿ ಆರ್.ಎಂ.ನಾಗಮ್ಮ(94) ಶುಕ್ರವಾರ ನಿಧನರಾದರು.

ಮೃತರು, ಓರ್ವ ಪುತ್ರಿ, ಮೂವರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಸಂಬಂಧಿಕರು.

ಶಿವಣ್ಣ



ಮೈಸೂರು, ಜ.16– ಮೈಸೂರಿನ ಇಟ್ಟಿಗೆಗೂಡಿನ ಹೊಸಬೀದಿ 3ನೇ ಕ್ರಾಸ್ ನಿವಾಸಿ ಶಿವಣ್ಣ(92–ಮಾಯಣ್ಣನ ಗರಡಿಯ ಪೈ.ಇಡ್ಲಿ ಶಿವಣ್ಣ) ಶುಕ್ರವಾರ ನಿಧನರಾದರು. ಮೃತರು, ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಲಲಿತಾದ್ರಿಪುರ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು, ಸುತ್ತಮುತ್ತ ಸಡಗರದ ಸಂಕ್ರಾಂತಿ ಆಚರಣೆ

ಜಾನುವಾರುಗಳಿಗೆ ಕಿಚ್ಚು ಹಾಯಿಸುವ ಅತೀ ರೋಚಕ ಚಿತ್ರಣ



ಸಿದ್ದಲಿಂಗಪುರದಲ್ಲಿ ಕಿಚ್ಚು ಹಾಯಿಸುತ್ತಿರುವ ಅತೀ ರೋಚಕ ಚಿತ್ರಣ.

ಮೈಸೂರು,ಜ.16(ಎಂಟಿವೈ)– ಹೊಸ ವರ್ಷದ ಮೊದಲ ಸುಗ್ಗಿಹಬ್ಬ ಸಂಕ್ರಾಂತಿಯನ್ನು ಮೈಸೂರಲ್ಲಿ ಗುರುವಾರ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ರೈತರು ರಾಸುಗಳ ಸಿಂಗರಿಸಿ ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ಹಬ್ಬಕ್ಕೆ ಮೆರಗು ತಂದರು.

ರೈತರಿಗೆ ಸುಗ್ಗಿ ಹಬ್ಬ ಹಾಗೂ ಸೂರ್ಯ ಪಥ ಬದಲಿಸುವ ಸಂಕ್ರಮಣದ ಹಿನ್ನೆಲೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವ ಪಡೆದಿರುವ ಮಕರ ಸಂಕ್ರಾಂತಿ ಹಬ್ಬವನ್ನು ಮೈಸೂರು ನಗರ ಮಾತ್ರವಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಸೂರ್ಯ ಪ್ರಯಾಣ ಆರಂಭವಾಗಲಿರುವ ಈ ಹಬ್ಬದ ಬಗ್ಗೆ ಹಿಂದೂಗಳಲ್ಲಿ ವಿಶೇಷ ಶ್ರದ್ಧೆ. ಮಾನವೀಯ ಸಂಬಂಧಗಳನ್ನು ಬೆಸೆಯುವ ಉತ್ತರಾಯಣ ಪುಣ್ಯಕಾಲದ ಹೊಸ ಬದಲಾವಣೆ ಹಾಗೂ ಯಶಸ್ಸಿನ ನಿರೀಕ್ಷೆಯೊಂದಿಗೆ ಹಬ್ಬವನ್ನು ಆಚರಿಸಲಾಯಿತು. ಜನ ಬೆಳಗ್ಗಿನಿಂದಲೇ ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಸಂಕ್ರಾಂತಿಯನ್ನು ಹೆಣ್ಣು ಮಕ್ಕಳ ಹಬ್ಬವೆಂದೇ ಬಿಂಬಿಸಲಾಗಿರುವ ಪರಿಣಾಮ ದೇಗುಲಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿತ್ತು. ಹೊಸ ಬಟ್ಟೆ ತೊಟ್ಟು ದೇಗುಲಗಳಿಗೆ ಆಗಮಿಸಿದ ಹೆಣ್ಣು ಮಕ್ಕಳು ದೇವರ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ನಗರದ ಹಲವು ಕಡೆಗಳಲ್ಲಿ ಗೋಪೂಜೆ ಮಾಡಿ, ಎಳ್ಳುಬೆಲ್ಲ, ಬಾಳೆಹಣ್ಣು ಮತ್ತಿತರ ಹಣ್ಣುಗಳನ್ನು ಸಮರ್ಪಿಸಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ರೈತರ ಪಾಲಿಗೆ ಸುಗ್ಗಿ ಹಬ್ಬವಾಗಿರುವ ಸಂಕ್ರಾಂತಿಯಂದು ಜಾನುವಾರುಗಳನ್ನು ತೊಳೆದು ಅಲಂಕಾರ ಮಾಡುವುದು ಸಾಮಾನ್ಯವಾಗಿತ್ತು.

ಮಹಿಳೆಯರು, ಯುವತಿಯರು ಹಾಗೂ ಚಿಣ್ಣರು ಸಂಜೆಯಾಗುತ್ತಿದ್ದಂತೆ ತಮ್ಮ ಸಂಬಂಧಿಕರು, ಬಂಧು–ಮಿತ್ರರು ಹಾಗೂ ನೆರೆಹೊರೆಯವರ ಮನೆಗಳಿಗೆ ತೆರಳಿ ಎಳ್ಳುಬೆಲ್ಲ ವಿನಿಮಯ ಮಾಡಿಕೊಂಡು, ಹಬ್ಬದ ಶುಭಾಶಯ ಕೋರಿದರು.

ನಗರ ಪ್ರದೇಶವಾದರೂ ಗ್ರಾಮ್ಯ ಸೊಗಡನ್ನು ಉಳಿಸಿಕೊಂಡಿರುವ ನಗರದ ಕೆ.ಜಿ. ಕೊಪ್ಪಲು, ತೊಣಚಿಕೊಪ್ಪಲು, ಕುಂಬಾರ ಕೊಪ್ಪಲು, ಪಡುವಾರಹಳ್ಳಿ ಮುಂತಾದ ಪ್ರದೇಶಗಳಲ್ಲಿ ಹಬ್ಬದ ಸಡಗರ ಮೇಳೈಸಿತ್ತು. ಈ ಪ್ರದೇಶಗಳಲ್ಲಿ ಅಳಿದುಳಿದ ಜಾನುವಾರುಗಳ ಬೆಳಗ್ಗೆಯೇ ತೊಳೆದು, ಕೊಂಬಿಗೆ ಬಣ್ಣ ಬಳಿದು ಸಿಂಗರಿಸಿ ಪೂಜಿಸಲಾಯಿತು.

ಚಾಮುಂಡಿಬೆಟ್ಟದ ಚಾಮುಂಡೇಶ್ವರಿ, ಅರಮನೆಯಲ್ಲಿರುವ ಕೋಟೆ ಆಂಜನೇಯ ಸ್ವಾಮಿ, ನೂರೊಂದು ಗಣಪತಿ, ಯೋಗ ನರಸಿಂಹಸ್ವಾಮಿ, ಒಂಟಿಕೊಪ್ಪಲಿನ ಲಕ್ಷ್ಮೀ ವೆಂಕಟೇಶ್ವರ ಸೇರಿದಂತೆ ನಗರದ ಪ್ರಮುಖ ದೇವಾಲಯಗಳಲ್ಲಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ ನಡೆಯಿತು. ದೇವಸ್ಥಾನ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕಂಡು ಬಂದರು.

ಸಂಜೆ ಮನೆ–ಮನೆಗೆ ಎಳ್ಳು ಬೆಲ್ಲ: ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು ಎಂಬ ಗಾದೆ ಮಾತಿನಂತೆ ಮಹಿಳೆಯರು, ಹೆಣ್ಣು ಮಕ್ಕಳು ಮನೆ–ಮನೆಗೆ ಎಳ್ಳು–ಬೆಲ್ಲ ಹಂಚಿ ಸಂಕ್ರಾಂತಿ ಹಬ್ಬದ ಶುಭ ಕೋರುತ್ತಿದ್ದ ದೃಶ್ಯ ಕಂಡು ಬಂದಿತು. ಎಳ್ಳು, ಬೆಲ್ಲ, ಕೊಬ್ಬರಿ, ಸಕ್ಕರೆ ಅಚ್ಚು, ಎಲಚಿ ಹಣ್ಣು, ಕಬ್ಬು, ಕಿತ್ತಳೆ ಹಣ್ಣನ್ನು ಹಂಚುವ ಮೂಲಕ ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.


ನಗರದಲ್ಲೂ ಕಿಚ್ಚು ಹಾಯಿಸುವ ಸಂಭ್ರಮ: ಮೈಸೂರಿನ ವಿವಿಧೆಡೆ ಹೈನುಗಾರಿಕೆ ಮಾಡುತ್ತಿರುವವರು ಸಂಕ್ರಾಂತಿ ಹಬ್ಬವನ್ನು ಇನ್ನಷ್ಟು ಸಂಭ್ರಮದಿಂದ ಆಚರಿಸಿದರು. ಹಸುಗಳನ್ನು ತೊಳೆದು, ಅವುಗಳಿಗೆ ಅರಿಶಿನ ಬಳಿದು ಅಲಂಕರಿಸಿದ್ದರು. ಅಲ್ಲದೆ, ಕೊಂಬಿಗೆ ಬಣ್ಣ ಬಣ್ಣದ ಟೇಪ್ ಕಟ್ಟಿ ಸಂಜೆ ವೇಳೆ ತಮ್ಮ ಬಡಾವಣೆಯ ಪ್ರಮುಖ ರಸ್ತೆಯಲ್ಲಿ ಕಿಚ್ಚು ಹಾಯಿಸಿದರು. ಮೈಸೂರಿನ ನಜ್ಜರ್‌ಬಾದ್, ಕುರುಬಾರಹಳ್ಳಿ, ಇಟ್ಟಿಗೆಗೂಡು, ದೇವರಾಜ ಮೊಹಲ್ಲಾ, ಅಗ್ರಹಾರ, ಸರಸ್ವತಿಪುರಂ, ಚಾಮುಂಡಿಪುರಂ, ಜೆ.ಪಿ.ನಗರ, ಶ್ರೀರಾಂಪುರ, ರಾಮಕೃಷ್ಣನಗರ, ಶಾರದಾದೇವಿನಗರ, ಜನತಾನಗರ, ಟಿ.ಕೆ.ಲೇಔಟ್, ಕೆ.ಜಿ.ಕೊಪ್ಪಲು, ಪಡುವಾರಹಳ್ಳಿ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು. ಮೇಟಗಳ್ಳಿ, ಕೆಸರೆ, ರಾಜೀವ್‌ನಗರ, ಯರಗನಹಳ್ಳಿ ಹೀಗೆ ವಿವಿಧ ಬಡಾವಣೆಯಲ್ಲಿ ಜಾನುವಾರುಗಳಿಗೆ ಕಿಚ್ಚು ಹಾಯಿಸಿ ಸಂಭ್ರಮಿಸಿದರು.

ಸಿದ್ದಲಿಂಗಪುರದಲ್ಲಿ ಕಿಚ್ಚಿನ ಜಾತ್ರೆ

ಮೈಸೂರು–ಬೆಂಗಳೂರು ಮುಖ್ಯರಸ್ತೆಯ ಸಿದ್ದಲಿಂಗಪುರದಲ್ಲಿ ಎಂದಿನಂತೆ ಈ ಬಾರಿಯೂ ಸಂಕ್ರಾಂತಿ ಕಿಚ್ಚು ಹಾಯಿಸುವ ಪದ್ಧತಿ ಜಾತ್ರೆಯಂತೆ ಅದ್ದೂರಿಯಾಗಿ ನೆರವೇರಿತು. ಸುತ್ತಮುತ್ತಲಿನ ಗ್ರಾಮಸ್ಥರು ತಮ್ಮ ಎತ್ತು, ಹಸು, ಟಗರು ಸೇರಿದಂತೆ ಜಾನುವಾರುಗಳನ್ನು ಮೆರವಣಿಗೆಯಲ್ಲಿ ಕರೆತಂದು ಕಿಚ್ಚು ಹಾಯಿಸಿದರು. ಇದಕ್ಕೂ ಮುನ್ನ ಬೃಹತ್ ಹಾರ ಹಾಕಿ ಜಾನುವಾರುಗಳ ಮೆರವಣಿಗೆ ಮಾಡಲಾಯಿತು. ರಿಂಗ್‌ರಸ್ತೆಯ ನಿವಾಸಿ ಉಮೇಶ್ ಎಂಬುವರು 666–ಅಗ್ನಿ ಹೆಸರಿನ ಎತ್ತಿಗೆ 30 ಸಾವಿರ ರೂ. ಮೌಲ್ಯದ ನೋಟುಗಳ ಹಾರವನ್ನು ಹಾಕಿದ್ದರೆ, ನಾಗಮಂಗಲದ ಸ್ವಾಮಿ ಎಂಬುವರು ಜೋಡೆತ್ತಿಗೆ ತಲಾ 50 ಸಾವಿರ ರೂ. ಮೌಲ್ಯದ 100 ರೂ. ಮುಖಬೆಲೆಯ ನೋಟಿನ ಹಾರ ಹಾಕಿ ಕಿಚ್ಚು ಹಾಯಿಸಲು ಕರೆ ತಂದಿದ್ದರು. ಅಲ್ಲದೆ, ಟಗರು, ಕುರಿಗಳು ಕಿಚ್ಚು ಹಾದವು. ಸಿದ್ಧಲಿಂಗಪುರದ ರೋಚಕ ಕಿಚ್ಚು ನೋಡಲೆಂದೇ ವಿದೇಶಿಗರೂ ಸೇರಿದಂತೆ ವಿವಿಧೆಡೆಯಿಂದ ಫೋಟೋಗ್ರಾಫರ್‌ಗಳು, ಪ್ರವಾಸಿಗರು ಆಗಮಿಸಿದ್ದು ವಿಶೇಷವಾಗಿತ್ತು.



100 ರೂ. ಮುಖಬೆಲೆಯ ನೋಟಿನ ಹಾರದೊಂದಿಗೆ ಸಿಂಗರಿಸಿರುವ ಜೋಡೆತ್ತುಗಳು.



20 ರೂ. ಮೌಲ್ಯದ ನೋಟಿನ ಹಾರದೊಂದಿಗೆ ಶೃಂಗಾರಗೊಂಡಿರುವ ತ್ರಿಬಲ್ ಸಿಕ್ಸ್–ಅಗ್ನಿ ಹೋರಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.1.2026 ಶನಿವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ



ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಚಲನಚಿತ್ರೋತ್ಸವ–2026

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)

- **ಶ್ರೀರಂಗ ರಂಗಮಂದಿರ:** ಬೆಳಗ್ಗೆ 10 ರಿಂದ ಹೀರೋ (ಇಂಗ್ಲೀಷ್), ನಿರ್ದೇಶನ : ಅವಿನಾಶ್ ವಿಜಯಕುಮಾರ್; ಮಧ್ಯಾಹ್ನ 12 ರಿಂದ ಘುಟ್ಲೀ ಲಡೂ (ಹಿಂದಿ), ನಿರ್ದೇಶನ : ಇಶ್ರತ್ ಆರ್. ಖಾನ್; ಮಧ್ಯಾಹ್ನ 2 ರಿಂದ ಹೆಬ್ಬುಲಿ ಕಟ್ (ಕನ್ನಡ), ನಿರ್ದೇಶನ : ಭೀಮರಾವ್.
- **ಭೂಮಿಗೀತ :** ಬೆಂಗಳೂರಿನ ಪಯಣ ರಂಗ ತಂಡದಿಂದ ಕಳೆದು ಹೋದ ಹಾಡು (ಕನ್ನಡ) ನಾಟಕ ಪ್ರದರ್ಶನ, ರಚನೆ : ಪಯಣ ಕಲಾವಿದರ ಅನುಭವ ಕಥನಗಳು, ರಂಗರೂಪ : ದಾದಾಪೀರ್ ಜೈಮಾನ್, ನಿರ್ದೇಶನ : ಎನ್. ಮಂಗಳ, ಸಂಜೆ 6.30ಕ್ಕೆ.
- **ವನರಂಗ :** ಚಿತ್ರದುರ್ಗದ ಶ್ರೀ ಕುಮಾರೇಶ್ವರ ನಾಟಕ ಸಂಘದಿಂದ ಕಿವುಡ ಮಾಡಿದ ಕಿತಾಪತಿ (ಕಂಪನಿ ನಾಟಕ), ರಚನೆ : ಕೆ.ಎನ್.ಸಾಳುಂಕಿ, ನಿರ್ದೇಶನ : ಬಿ. ಕುಮಾರಸ್ವಾಮಿ, ಸಂಜೆ 7ಕ್ಕೆ.
- **ಕಲಾಮಂದಿರ :** ಕಿಷ್ಕಿಂದ (ತಮಿಳು) ನಾಟಕ ಪ್ರದರ್ಶನ, ರಚನೆ : ರೆಜಿತ್ ವಿ. ಚಂದು, ನಿರ್ದೇಶನ : ಶ್ರೀಕಾಂತ್ ಶಂಕರ್, ತಂಡ : ಆಲಂ ಥಿಯೇಟರ್ ಗ್ರೂಪ್, ಕೊಯಮತ್ತೂರು, ತಮಿಳುನಾಡು, ಬೆಳಗ್ಗೆ 11 ಮತ್ತು ಸಂಜೆ 7ಕ್ಕೆ
- **ಕಲಾಮಂದಿರ :** ಬಹುರೂಪಿ ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ– ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ದಿ ವೈರ್, ನವದೆಹಲಿ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಡಾ. ಕೆ. ರಾಕೇಶ್‌ಕುಮಾರ್, ಬೆಳಗ್ಗೆ 10.30 ರಿಂದ.

- **ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ :** ಐಸಿಎಸ್‌ಐ ನ್ಯಾಷನಲ್ ಸೆಮಿನಾರ್, ಮುಖ್ಯ ಅತಿಥಿಗಳು : ಮೈಸೂರು ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಇನ್ಫೋಸಿಸ್ ಉಪಾಧ್ಯಕ್ಷ ವಿನಾಯಕ್ ಪಿ. ಹೆಗ್ಡೆ, ಸ್ಥಳ: ಬಿ.ಎನ್. ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10 ರಿಂದ.
- **ಶ್ರೀಕಾಂತ ವಿದ್ಯಾಸಂಸ್ಥೆ, ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ :** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಕೆ.ಎಸ್. ಪ್ರದೀಪ್ ಕುಮಾರ್, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಶ್ರೀಮತಿ ರಚನಾ ನಾಗೇಶ್, ಸ್ಥಳ: ವಿದ್ಯಾಸಂಸ್ಥೆ ಆವರಣ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎಂ.ಆರ್. ಸುಧಾ ಹಾಗೂ ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ– ಪ್ರೊ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ, ಕಾರ್ಯಕ್ರಮ, ವಿಷಯ–ಇತಿಹಾಸ, ಭಾಗವಹಿಸುವವರು– ಮೈಸೂರು ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೇಮ, ಉಪನ್ಯಾಸಕರು, ಪ್ರಸ್ತುತಿ– ದಿಗ್ವಿಜಯ್ .ಬಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ವಿಜಯಲಕ್ಷ್ಮಿ – ಪಿಟೀಲು ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ಪ್ರಹಸನ–ಅಪ್ಪಣೆ ಮಹಾಪ್ರಭು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮಳೆನೀರಿನ ಸಂರಕ್ಷಣೆ ಕುರಿತು ಸಂವಾದ, ಭಾಗವಹಿಸುತ್ತಾರೆ– ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಕಾರ್ಟ್ ವಿಭಾಗದ ನಿವೃತ್ತ ನಿರ್ದೇಶಕರಾದ ಯು.ಎನ್. ರವಿಕುಮಾರ್ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಪರಿಸರ ಅಧಿಕಾರಿ ಜಿ. ಆರ್. ಗಣೇಶನ್, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.00 ಯುವವಾಣಿ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025– ಪಂಡಿತ್ ಮಹೇಂದ್ರ ಟೋಕೆ – ಹಾಡುಗಾರಿಕೆ

- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ತಾಯಮ್ಮ ಪ್ರಕಾಶನ :** ಸಂಕ್ರಾಂತಿ ಕವಿಗೋಷ್ಠಿ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ : ಕರ್ನಾಟಕ ಪೊಲೀಸ್ ಅಕಾಡೆಮಿ ಡಿವೈಎಸ್ಪಿ ಉಪನಿರ್ದೇಶಕ ಎಸ್.ಎನ್. ಸಂದೇಶ್‌ಕುಮಾರ್, ಅಧ್ಯಕ್ಷತೆ : ಹಿರಿಯ ವಿದ್ವಾಂಸ ಡಾ.ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಡಾ. ಎಸ್.ಪಿ. ಯೋಗಣ್ಣ, ಡಾ.ಎ. ಪುಷ್ಪ ಅಯ್ಯಂಗಾರ್, ದೇವರಾಜು ಪಿ. ಚಿಕ್ಕಹಳ್ಳಿ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 5.30 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಪರಮಹಂಸಾನಂದ ಅವರಿಂದ ಡಿಸೈಪಲ್ಸ್ ಅಂಡ್ ಡಿವೋಟೀಸ್ ಆಫ್ ಶ್ರೀರಾಮಕೃಷ್ಣ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಭಾರತೀಯ ವಿದ್ಯಾಭವನ :** ಬೆಂಗಳೂರಿನ ನೂಪುರ ಪರ್ಫಾಮಿಂಗ್ ಆರ್ಟ್ಸ್ ಸೆಂಟರ್‌ನ ಹರಿಚೇತನ, ನಿಧಿಕಾ, ಸಿರಿಶಾ, ವಾರುಣಿ, ಉಡಿಷಾ, ಗೀತಾ ಶರಣ್ ಅವರಿಂದ ಕಥಕ್ ನೃತ್ಯ ಪ್ರದರ್ಶನ, ಸ್ಥಳ: ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6ಕ್ಕೆ.
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದುಷಿ ರೂಪಶ್ರೀ ಶಂಕರ್ ಅವರಿಂದ ಗಾಯನ, ವಿದ್ವಾನ್ ಅಮೋಘ್ ನಡದೂರ್– ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಟಿ.ಎಎನ್.ಅಜಯ್–ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

ಸುತ್ತೂರು ಜಾತ್ರಾ ಮಹೋತ್ಸವ (ಜ. 17)

- **ಸುತ್ತೂರು ಶ್ರೀ ಕ್ಷೇತ್ರ :** ಚಿತ್ರಕಲೆ, ಗಾಳಿಪಟ ಸ್ಪರ್ಧೆ, ಐವತ್ತೈದನೆಯ ದನಗಳ ಜಾತ್ರೆ, ದಿವ್ಯ ಸಮ್ಮುಖ: ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ದೇಶ್ವರ ಸ್ವಾಮೀಜಿ, ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀಮಹಾಂತ ಸ್ವಾಮೀಜಿ, ಅಧ್ಯಕ್ಷತೆ : ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ದನಗಳ ಜಾತ್ರೆ ಉದ್ಘಾಟನೆ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಚಿತ್ರಕಲೆ ಸ್ಪರ್ಧೆ ಉದ್ಘಾಟನೆ : ಶಾಸಕ ಬಿ.ಆರ್. ಪಾಟೀಲ್, ಗಾಳಿ ಪಟ ಸ್ಪರ್ಧೆ ಉದ್ಘಾ ಟನೆ : ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ್, ಮುಖ್ಯ ಅತಿಥಿಗಳು : ಶಾಸಕರಾದ ಹೆಚ್.ಡಿ. ರೇವಣ್ಣ, ಎಸ್.ಟಿ. ಸೋಮಶೇಖರ್, ಸಂಸದರಾದ ತೇಜಸ್ವಿ ಸೂರ್ಯ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಸಿ.ಕೆ. ರಾಮಮೂರ್ತಿ, ಕೃಷ್ಣನಾಯಕ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ. ರುದ್ರೇಶ್, ವಿಜ್ಞಾನಿಗಳಾದ ಶ್ರೀಮತಿ ಜಯಶ್ರೀ ಮತ್ತು ಜಿ. ಜಗದೀಶ್, ಸಂಜೆ 4ಕ್ಕೆ.

ಪ್ರತಿಭಟನೆ ಮೂಲಕ ಚಾಮುಂಡಿಬೆಟ್ಟದ ಪ್ರಸಾದ ಕಾಮಗಾರಿಗೆ ತಡೆಯೊಡ್ಡಿದ ಗ್ರಾಮಸ್ಥರು, ಹಿಂದೂಪರ ಸಾಮಾಜಿಕ ಹೋರಾಟಗಾರರು

- ಭೂಸ್ವಾಧೀನ, ಪ್ರಾಚ್ಯವಸ್ತು ಇಲಾಖೆ ಅನುಮತಿ ಪಡೆದಿಲ್ಲ
- ಕನಿಷ್ಟ ಕಾಮಗಾರಿ ಸ್ಥಳದ ಮಣ್ಣನ್ನು ಪರೀಕ್ಷೆಗೊಳಪಡಿಸಿಲ್ಲ
- ದೇವಸ್ಥಾನದ ಗೋಪುರದ ಅಸ್ತಿತ್ವಕ್ಕೆ ಧಕ್ಕೆ ತರಲಾಗುತ್ತಿದೆ
- ಕಾಮಗಾರಿ ಸ್ಥಗಿತಗೊಳಿಸಿ ನಿರ್ಗಮಿಸಿದ ಕಾರ್ಮಿಕರು

ಮೈಸೂರು, ಜ.16(ಬಿಎಲ್‌ಯು)– ತೀವ್ರ ವಿವಾದದ ಸ್ವರೂಪ ಪಡೆಯುತ್ತಿರುವ ಚಾಮುಂಡಿಬೆಟ್ಟದಲ್ಲಿನ ಪ್ರಸಾದ ಯೋಜನೆಯ ಕಾಮಗಾರಿಗೆ ಚಾಮುಂಡಿ ಬೆಟ್ಟದ ಗ್ರಾಮಸ್ಥರು ಹಾಗೂ ಹಿಂದೂ ಪರ ಸಾಮಾಜಿಕ ಹೋರಾಟಗಾರರು ಇಂದು ತಡೆಯೊಡ್ಡಿದ್ದಾರೆ.

ಪ್ರಸಾದ್ ಯೋಜನೆಯ ಕಾಮಗಾರಿ ಹಾಗೂ ಪ್ರಾಧಿಕಾರ ರಚನೆಯ ಸಿಂಧುತ್ವ ಪ್ರಶ್ನಿಸಿ ಪ್ರಮೋದಾ ದೇವಿ ಒಡೆಯರ್ ಅವರು ಸಲ್ಲಿಸಿದ್ದ ಅರ್ಜಿಗೆ ಹೈಕೋರ್ಟ್ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕಾಮಗಾರಿ ಬಗ್ಗೆ ವಿವರಣೆ ನೀಡುವಂತೆ ನೋಟಿಸ್ ಜಾರಿ ಮಾಡಿ ಫೆಬ್ರವರಿ 13ಕ್ಕೆ ವಿಚಾರಣೆ ಮುಂದೂಡಿದೆ.

ಹೈಕೋರ್ಟ್ ಜಾರಿ ಮಾಡಿರುವ ನೋಟಿಸ್‌ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಉತ್ತರ ನೀಡುವ ಸಲುವಾಗಿ ಈ ಸಂಬಂಧ ಹಲವು ಮಾಹಿತಿ ನೀಡುವಂತೆ ಪ್ರವಾಸೋದ್ಯಮ ಇಲಾಖೆ ಹಾಗೂ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರ ಸೂಚನೆ ನೀಡಿದೆ.

ಯೋಜನೆ ಬಗ್ಗೆ ಮಾಹಿತಿ ನೀಡುವ ಸಂಬಂಧ ಪ್ರವಾಸೋದ್ಯಮ ಇಲಾಖೆ ಹಾಗೂ ಪ್ರಾಧಿಕಾರದ ಅಧಿಕಾರಿಗಳು ದಾಖಲಾತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಹೈಕೋರ್ಟ್ ನೋಟಿಸ್ ಜಾರಿ ಮಾಡಿದ್ದರೂ ಯೋಜನೆಯ ಕಾಮಗಾರಿ ಮಾತ್ರ ಇಂದು ಬೆಳಿಗ್ಗೆಯೂ ಭರದಿಂದ ಸಾಗಿತ್ತು.

ಆದರೆ, ಮಧ್ಯಾಹ್ನದ ನಂತರ ಕಾಮಗಾರಿ ಸ್ಥಳದಲ್ಲಿ ಜಮಾವಣೆಗೊಂಡ ಚಾಮುಂಡಿಬೆಟ್ಟದ ಗ್ರಾಮಸ್ಥರು ಹಾಗೂ ಹಿಂದೂಪರ ಸಾಮಾಜಿಕ ಹೋರಾಟಗಾರರು ಕಾಮಗಾರಿ ತಡೆದರು. ಅಲ್ಲದೆ ಸ್ಥಳದಲ್ಲೇ ಟಾರ್ಪಾಲ್ ಹಾಸಿ ಧರಣಿ ಕುಳಿತರು.

ಭೂಸ್ವಾಧೀನ ಆದೇಶ, ಪ್ರಾಚ್ಯವಸ್ತು ಇಲಾಖೆಯ ಆದೇಶ ಪತ್ರವಿಲ್ಲದೆ ಅಕ್ರಮವಾಗಿ ಕಾಮಗಾರಿ ಮಾಡುತ್ತಿದ್ದೀರಾ. ಇದರಿಂದ ದೇವಸ್ಥಾನದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಯೋಜನೆ ಕಾಮಗಾರಿಗೆ ಸರ್ಕಾರದಿಂದ ಅನುಮತಿ ದೊರೆತಿದೆ ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದರು. ಆದರೆ ಭೂಸ್ವಾಧೀನ ಆದೇಶ, ಪ್ರಾಚ್ಯವಸ್ತು ಇಲಾಖೆಯ ಆದೇಶ ವಿದೆಯೇ, ಕಾನೂನಾತ್ಮಕವಾಗಿ ಕಾಮಗಾರಿ ಕೈಗೊಂಡರೆ ನಮ್ಮ ಅಭ್ಯಂತರವಿಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹಿಂದೂಪರ ಸಾಮಾಜಿಕ ಹೋರಾಟಗಾರರು ಹಾಗೂ ನೂರಾರು ಗ್ರಾಮಸ್ಥರಿಂದ ಧರಣಿ ಮುಂದುವರೆಯಿತು. ವಿಷಯ ತಿಳಿಯುತ್ತಿದ್ದಂತೆ ಮೈಸೂರಿನ ಕೆ.ಆರ್. ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧನರಾಜ್, ಹೆಚ್ಚಿನ ಸಿಬ್ಬಂದಿ ಜೊತೆ ಸ್ಥಳಕ್ಕೆ ಆಗಮಿಸಿದರು.

ನೀವು ಕೇಳಿರುವ ಆದೇಶ ಪತ್ರ ಹಾಗೂ ಇತರೆ ಮಾಹಿತಿಯನ್ನು ನಾಳೆ ನೀಡುತ್ತೇವೆ ಎಂದು ಪ್ರಾಧಿಕಾರದ ಅಧಿಕಾರಿಗಳು ಭರವಸೆ ನೀಡಿದರು. ನೀವು ಸ್ಪಷ್ಟ ಮಾಹಿತಿ ಹಾಗೂ ದಾಖಲಾತಿ ನೀಡುವ ತನಕ ಕಾಮಗಾರಿ ನಡೆಯಲು ಬಿಡುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಚಾಮುಂಡೇಶ್ವರಿ ದೇವಸ್ಥಾನ ಎಡಭಾಗದ ದಸರಾ ಉದ್ಘಾಟನಾ ಸಮಾರಂಭ ನಡೆಯುವ ಸ್ಥಳದಲ್ಲೇ ಕ್ಯೂ ಮಂಟಪ ನಿರ್ಮಿಸುವ ಕಾಮಗಾರಿ ನಡೆಯುತ್ತಿದೆ. ಈ ಸ್ಥಳದಲ್ಲಿ ವೇದಿಕೆ ನಿರ್ಮಿಸಲು ಜೆಸಿಬಿಯಿಂದ ರಸ್ತೆ ಅಗೆದು ಕಂಬಗಳನ್ನು ನಿಲ್ಲಿಸಲು ಮಾರ್ಕ್ ಮಾಡಲಾಗುತ್ತಿತ್ತು. ಆದರೆ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಕಾರಣ ಕಾಮಗಾರಿ ಸ್ಥಗಿತಗೊಳಿಸಲಾಯಿತು. ತರುವಾಯ ಜೆಸಿಬಿ ಯಂತ್ರ ಸೇರಿದಂತೆ ಇತರೆ ಯಂತ್ರೋಪಕರಣಗಳ ಅಲ್ಲಿಂದ ತೆರವುಗೊಳಿಸಲಾಯಿತು.



ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯನ್ನು ಬೆಟ್ಟದ ಗ್ರಾಮಸ್ಥರು ಹಾಗೂ ಹಿಂದೂಪರ ಸಾಮಾಜಿಕ ಹೋರಾಟಗಾರರು ಶುಕ್ರವಾರ ಪ್ರತಿಭಟನೆ ಮೂಲಕ ತಡೆದರು.

ಚಾಮುಂಡೇಶ್ವರಿ ದೇವಸ್ಥಾನದ 100 ಮೀಟರ್ ಸುತ್ತಳತೆಯಲ್ಲಿ ಕಾಮಗಾರಿ ನಡೆಸುವಂತಿಲ್ಲ

ಧಾರ್ಮಿಕ ಶ್ರದ್ಧಾ ಭಕ್ತಿ ಕೇಂದ್ರವಾಗಿರುವ ಚಾಮುಂಡಿಬೆಟ್ಟ ಅತೀ ಸೂಕ್ಷ್ಮ ಸ್ಥಳವಾಗಿದೆ. ಪೌರಾಣಿಕ ಹಿನ್ನೆಲೆ ಇರುವ ಪಾರಂಪರಿಕ ಸ್ಥಳವಾದ ಚಾಮುಂಡೇಶ್ವರಿ ದೇವಸ್ಥಾನದ 100 ಮೀಟರ್ ಸುತ್ತಳತೆಯಲ್ಲಿ ಯಾವುದೇ ಹೊಸ ಕಾಮಗಾರಿ ನಡೆಸದಂತೆ ಪ್ರಾಚ್ಯವಸ್ತು ಇಲಾಖೆ ಆದೇಶವಿದೆ. ಆದರೆ ಇವರು ಕೇವಲ 20 ಅಡಿ ಅನತಿ ದೂರದಲ್ಲಿ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಹಿಂದೂ ಪರ ಸಾಮಾಜಿಕ ಹೋರಾಟಗಾರ ಲೋಹಿತ್ ಅರಸ್ ದೂರಿದ್ದಾರೆ.

ದೇವಸ್ಥಾನದ ಬಳಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಾದರೆ ಕಾನೂನಾತ್ಮಕವಾಗಿ ಕಾಮಗಾರಿ ಸ್ಥಳ ಭೂಸ್ವಾಧೀನವಾಗಿರಬೇಕು. ಪ್ರಾಚ್ಯ ವಸ್ತು ಇಲಾಖೆಯ ಅನುಮತಿ ಪಡೆದಿರಬೇಕು. ಆದರೆ ಇದ್ಯಾವುದೇ ಕ್ಲಿಯರೆನ್ಸ್ ಇಲ್ಲದಿದ್ದರೂ ಕಾನೂನುಬಾಹಿರವಾಗಿ ಕಾಮಗಾರಿ ಕೈಗೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಕಾನೂನಾತ್ಮಕವಾಗಿ ಕಾಮಗಾರಿ ನಡೆಸುವ ಬಗ್ಗೆ ಈಗಲೂ ನಮಗೆ ಸಂಬಂಧಿಸಿದ ಇಲಾಖೆಯ ಆದೇಶ ಪತ್ರ ಸೇರಿದಂತೆ ಇತರೆ ದಾಖಲಾತಿ ತೋರಿಸಲಿ. ಅದು ಬಿಟ್ಟು ಕಾನೂನು ಬಾಹಿರವಾಗಿ ಕಾಮಗಾರಿ ನಡೆಸಲು ಮುಂದಾದರೆ ನಾವು ಅದಕ್ಕೆ ತಡೆಯೊಡ್ಡುತ್ತೇವೆ. ಚಾಮುಂಡೇಶ್ವರಿ ಗೋಪುರದ ಸುತ್ತಲಿನ ಜಾಗ ಅಷ್ಟಾಗಿ ಗಟ್ಟಿಯಾಗಿಲ್ಲವೆಂಬ ಕಾರಣಕ್ಕೆ ಈ ಹಿಂದೆ ಮಣ್ಣು ತುಂಬಿ ಸಮದಟ್ಟು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಸ್ಥಳ ಕಟ್ಟಡ ನಿರ್ಮಾಣಕ್ಕೆ ಸೂಕ್ತವೇ ಎಂಬ ಬಗ್ಗೆ ತಿಳಿದುಕೊಳ್ಳಲು ಸ್ಥಳದ ಮಣ್ಣನ್ನು ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಕೂಡ ಪಡೆದಿಲ್ಲ. ಈ ಯಾವುದೇ ನಿಯಮ ಪಾಲನೆ ಮಾಡದೆ ಕಟ್ಟಡ ನಿರ್ಮಿಸಿದರೆ ದೇವಸ್ಥಾನ ಹಾಗೂ ಗೋಪುರದ ಅಸ್ತಿತ್ವಕ್ಕೆ ಧಕ್ಕೆಯಾದರೆ ಯಾರು ಹೊಣೆ?

ಪ್ರಸಾದ ಯೋಜನೆಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ವಿರೋಧ



ಪ್ರಸಾದ ಯೋಜನೆಯಡಿ ಚಾಮುಂಡಿ ಬೆಟ್ಟದಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾಮಗಾರಿಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ವಿರೋಧ ಮಾಡುತ್ತಿವೆ ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ ಆರೋಪಿಸಿದ್ದಾರೆ. ಪ್ರಸಾದ ಯೋಜನೆ ಕಾಮಗಾರಿ ಕುರಿತಂತೆ ಹೈಕೋರ್ಟ್ ನೀಡಿರುವ ನೋಟಿಸ್‌ಗೆ ಉತ್ತರ ನೀಡುವ ನಿಟ್ಟಿನಲ್ಲಿ ಸರ್ಕಾರ ನಮ್ಮಿಂದ ಮಾಹಿತಿ ಪಡೆಯುತ್ತಿದೆ. ಸರ್ಕಾರ ಆಗಾಗ ಕೇಳುತ್ತಿರುವ ಮಾಹಿತಿಯನ್ನು ನೀಡುತ್ತಲೇ ಇದ್ದೇವೆ.

ಈಗ ಕೈಗೊಂಡಿರುವ ಕಾಮಗಾರಿಯಿಂದ ಗೋಪುರ ಮರೆ ಆಗುತ್ತದೆ, ಗೋಪುರ ಬಿದ್ದೋಗುತ್ತದೆ ಎಂಬೆಲ್ಲಾ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಸ್ವಾರ್ಥ ಸಾಧನೆಗಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಜನರಿಗೆ ಈ ರೀತಿಯ ತಪ್ಪು ಮಾಹಿತಿ ನೀಡುತ್ತಿದ್ದಾರೆ.

ಆಷಾಢ ಶುಕ್ರವಾರ, ದಸರಾ ಮಹೋತ್ಸವ ಸೇರಿದಂತೆ ಹಲವು ವಿಶೇಷ ಸಂದರ್ಭದಲ್ಲಿ ಸಾವಿರಾರು ಜನರು ಬೆಟ್ಟಕ್ಕೆ ಬರುತ್ತಾರೆ. ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವ್ಯವಸ್ಥಿತವಾಗಿ ದರ್ಶನ ಪಡೆಯಲು ಈಗ ಹಲವು ಕಾಮಗಾರಿ ಕೈಗೊಳ್ಳಲಾಗಿದೆ.

ಇದರಲ್ಲಿ ಕ್ಯೂ ಲೈನ್ ಕೂಡ ಒಂದು. ಸಾವಿರಾರು ಜನರು ಯಾವುದೇ ಪ್ರಯಾಸ ವಿಲ್ಲದೆ ದರ್ಶನ ಪಡೆಯುವ ವ್ಯವಸ್ಥೆ ಮಾಡಲಾಗುತ್ತಿದೆ. ಶಿಸ್ತುಬದ್ಧವಾಗಿ ಸರದಿ ಸಾಲಿನಲ್ಲಿ ನಿಲ್ಲಲು, ಕೂರಲು ಅವಕಾಶ ಕಲ್ಪಿಸಲಾಗುತ್ತಿದೆ. ವಯಸ್ಸಾದವರು ಸೇರಿದಂತೆ ಇತರರಿಗೆ ಇದರಿಂದ ಬಹಳಷ್ಟು ಉಪಯೋಗವಾಗುತ್ತದೆ. ಅಲ್ಲದೆ ಸರದಿ ಸಾಲಿನಲ್ಲಿ ಸಾಗುವವರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. ವೇದಿಕೆ ನಿರ್ಮಾಣ ಹಾಗೂ ಕ್ಯೂ ಲೈನ್ ಅನ್ನು ತಾತ್ಕಾಲಿಕವಾಗಿ ನಿರ್ಮಿಸಲಾಗುತ್ತಿದೆ. ಅವಶ್ಯಕತೆ ಬಂದಾಗ ಅದನ್ನು ಅಳವಡಿಸಿಕೊಳ್ಳಬಹುದು. ಉಳಿದ ಸಮಯದಲ್ಲಿ ಸಹಜ ಸ್ಥಿತಿಯಲ್ಲಿ ಇರುತ್ತದೆ ಇದರಿಂದ ಪ್ರಾಧಿಕಾರಕ್ಕೆ ವೆಚ್ಚ ಕೂಡ ಕಡಿಮೆಯಾಗಲಿದೆ.

ವೇದಿಕೆ ನಿರ್ಮಾಣ ಮಾಡಲು ಸಣ್ಣ ಸಣ್ಣ ಅಲಂಕಾರಿಕ ಕಂಬಗಳನ್ನು ಅಳವಡಿಸಲಾಗುತ್ತಿದೆ. ಚಾಮುಂಡಿಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ಮಾಡುವುದಿಲ್ಲ. ಇದು ವಾಸ್ತವ ಸಂಗತಿಯಾಗಿದ್ದು, ಮೈಸೂರು ಜನರು ಕೆಲವರ ತಪ್ಪು ಮಾಹಿತಿ ನಂಬಬಾರದು ಎಂದು ರೂಪಾ ಮನವಿ ಮಾಡಿದ್ದಾರೆ

ವರ್ಕ್ ಆರ್ಡರ್ ನೀಡಿದಂತೆ ನಾವು ಕೆಲಸ ಮಾಡುತ್ತಿದ್ದೇವೆ

ಮೈಸೂರು: ಪ್ರಸಾದ ಯೋಜನೆಯಡಿ ಪ್ರವಾಸೋದ್ಯಮ ಇಲಾಖೆ ನೀಡಿರುವ ವರ್ಕ್ ಆರ್ಡರ್‌ನಂತೆ ನಾವು ಕೆಲಸ ಮುಂದುವರೆಸುತ್ತಿದ್ದೇವೆ. ಟೆಂಡರ್ ಪ್ರಕ್ರಿಯೆಯಂತೆ ನಮ್ಮ ಕೆಲಸ ನಾವು ಮಾಡುತ್ತಿದ್ದೇವೆ ಎಂದು ಕಾಮಗಾರಿ ಟೆಂಡರ್ ಗುತ್ತಿಗೆ ಪಡೆದಿರುವ ಎಸ್‌ಕೆಎಸ್ ಕಾರ್ಕಳ ಇನ್ಫ್ರಾ ಪ್ರೈವೇಟ್ ಲಿಮಿಟೆಡ್‌ನ ಸುಜೇಂದ್ರ ಕುಮಾರ್ ಸ್ಪಷ್ಟಪಡಿಸಿದ್ದಾರೆ. ಕಾಮಗಾರಿ ನಿಲ್ಲಿಸುವಂತೆ ನಮಗೆ ಯಾರಿಂದಲೂ ನೋಟಿಸ್ ಬಂದಿಲ್ಲ. ಒಂದು ವೇಳೆ ಪ್ರವಾಸೋದ್ಯಮ ಇಲಾಖೆ ಕಾಮಗಾರಿ ನಿಲ್ಲಿಸುವಂತೆ ಹೇಳಿದರೆ ಕೆಲಸ ನಿಲ್ಲಿಸುತ್ತೇವೆ ಎಂದು ತಿಳಿಸಿದ್ದಾರೆ.

ಕೆಲವರು ಆರೋಪ ಮಾಡುವಂತೆ ಚಾಮುಂಡಿಬೆಟ್ಟ ಹಾಗೂ ಚಾಮುಂಡೇಶ್ವರಿ ದೇವಸ್ಥಾನದ ಪಾರಂಪರಿಕತೆಗೆ ನಾವು ಯಾವುದೇ ಧಕ್ಕೆ ತರುತ್ತಿಲ್ಲ. ಹಳೆ ಕಟ್ಟಡಗಳನ್ನು ಮುಟ್ಟಿ ಕೂಡ ನೋಡುತ್ತಿಲ್ಲ. ಪಾರಂಪರಿಕತೆ ಹಾಗೂ ಆಧುನಿಕತೆಯ ಸಮ್ಮಿಳತವಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದರು.

ಈಗ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ 11 ಅಡಿ ಎತ್ತರದ ವೇದಿಕೆ ನಿರ್ಮಿಸಲಾಗುವುದು. ಇದರಿಂದ ಗೋಪುರ ಮರೆಯಾಗುವುದಿಲ್ಲ. ಅಲ್ಲದೆ ಪಾರಂಪರಿಕ ಸೌಂದರ್ಯ ಕೂಡ ಹಾಳಾಗುವುದಿಲ್ಲ ಎಂದಿದ್ದಾರೆ.

ನನಗೆ ಜನಸೇವೆ... ಅವರಿಗೆ ಲೂಟಿ ಚಪಲ...!

ಡಿಕೆ ಬ್ರದರ್ಸ್‌ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಚಾಟಿ

ಬೆಂಗಳೂರು, ಜ.16– ಕೆಲವರಿಗೆ ಜನರನ್ನು ಲೂಟಿ ಮಾಡಿ ದುಡ್ಡು ಮಾಡುವ ಚಪಲ. ನನಗೆ ಜನರ ಜತೆಯಲ್ಲಿದ್ದು ಅವರ ಸಹಾಯಕ್ಕೆ ನಿಲ್ಲುವ ಚಪಲ. ಒಬ್ಬೊಬ್ಬರಿಗೆ ಒಂದೊಂದು ಚಪಲ ಇರುತ್ತದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾರ್ಮಿಕವಾಗಿ ಹೇಳಿದರು.

ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿ, ಕುಮಾರಸ್ವಾಮಿ ಅವರಿಗೆ ಮಾತನಾಡುವ ಚಪಲ ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿರುವ ಮಾತಿಗೆ ಹೀಗೆ ತಿರುಗೇಟು ನೀಡಿದರು.

ನಿಮ್ಮದೊಂದು ರೀತಿ ಚಪಲ, ನನ್ನದೊಂದು ರೀತಿ ಚಪಲ. ನಿಮ್ಮದು ಹಣ ಮಾಡುವ ಚಪಲ. ನನ್ನದು ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಬೆಂಬಲ ಪಡೆಯುವ ಚಪಲ. ಅವರಿಗೂ ನನಗೂ ಇರುವ ವ್ಯತ್ಯಾಸ ಇಷ್ಟೇ ಎಂದರು.

ಸ್ವಜಾತಿಯವರಿಂದಲೇ ಅನ್ಯಾಯ ಆಗುತ್ತಿದೆ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ನಾನು ಆ ವರದಿಯನ್ನು ನೋಡಿದ್ದೇನೆ. ಕಷ್ಟ ಬಂದಾಗ ಕ್ಯಾಸ್ಟ್ ಅಂತಾರೆ. ಆದರೆ ಅವರು ಪ್ರತಿನಿಧಿಸುವ ಜಾತಿಗೆ ಏನು ಮಾಡಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೂ ಹಣ ಹೊಡೆಯಬೇಕು ಎನ್ನುವವರು ಅವರು. ಜನರ ಬೆಂಬಲ ಯಾವ ರೀತಿ ಪಡೆಯಬೇಕು ಎನ್ನುವುದಕ್ಕಿಂತ ಕ್ಷಣ ಕ್ಷಣವೂ ರಾಜ್ಯದ ಹಣವನ್ನು ಲೂಟಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಅಂತಹ ವ್ಯಕ್ತಿಗಳಿಗೆ ಜಾತಿ ಹೆಸರಿನಲ್ಲಿ ಬೆಂಬಲ ಕೊಡ್ತಾರಾ ಎಂದು ಟೀಕಿಸಿದರು.



ನಾನು ಬಾಯಿ ಚಪಲಕ್ಕೆ ಮಾತಾಡಲ್ಲ. ಇಂಥವರು ನಡೆಸುವ ಅಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ಕೊಡುತಿದ್ದೇನೆ. ನಾನು ಮಾತನಾಡುವುದು ನನ್ನ ಮತ್ತು ಜನತೆಯ ಸಂಬಂಧ ಬೆಳೆಸಿಕೊಳ್ಳಲು. ಈ ಅಣ್ಣ–ತಮ್ಮಂದಿರದ್ದು ಕಟ್ಟಿಕೊಂಡು ನನಗೇನಾಗಬೇಕು. ದಿನ ಬೆಳಗಾದರೆ ಯಾರ ತಲೆ ಒಡೆಯಬೇಕು, ಯಾರ ಜಮೀನಿಗೆ ಫೆನ್ಸಿಂಗ್ ಹಾಕಬೇಕು, ಯಾವ ರೀತಿ ಅಕ್ರಮವಾಗಿ ಸಂಪಾದನೆ ಮಾಡಬೇಕು ಎನ್ನುವ ಅವರಿಗೆ ಜಾತಿ ಹೆಸರು ಹೇಳಿದಾಕ್ಷಣ ಬೆಂಬಲ ಕೊಡುತ್ತಾರ ಎಂದು ಖಾರವಾಗಿ ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆಗೆ ತಿರುಗೇಟು: ಜೆಡಿಎಸ್ ಪಕ್ಷದ ಅಸ್ತಿತ್ವದ ಬಗ್ಗೆ ಹೇಳಿಕೆ ನೀಡಿದ್ದ ಸಚಿವ ಪ್ರಿಯಾಂಕ್ ಖರ್ಗೆಗೆ ತಿರುಗೇಟು ನೀಡಿ, ನಮ್ಮ ಪಕ್ಷದ್ದು ಹಾಗಿರಲಿ. ಸೋಕಾಲ್ಡ್ ನ್ಯಾಷನಲ್ ಪಾರ್ಟಿ ಕಾಂಗ್ರೆಸ್ ಪಕ್ಷವು ಬಿಹಾರ, ಮಹಾರಾಷ್ಟ್ರದಲ್ಲಿ ಯಾವ ಲೆವೆಲ್ಲಿಗೆ ಬಂದಿದೆ ಎಂಬುದನ್ನು ಮೊದಲು ನೋಡಿಕೊಳ್ಳಿ. ಜೆಡಿಎಸ್ ಬಗ್ಗೆ ಚರ್ಚೆ ಮಾಡಲು ಸಚಿವ ಪ್ರಿಯಾಂಕ್ ಖರ್ಗೆ ಯಾರು. ಅವರ ಸರ್ಟಿಫಿಕೇಟ್ ನಮಗೆ ಬೇಕಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಇರುವ ಮಂತ್ರಿಗಳು ಎಷ್ಟು ಜನ ಜೆಡಿಎಸ್‌ನಿಂದ ಲೀಸ್ ಮೇಲೆ ಹೋಗಿದ್ದಾರೆ ಎನ್ನುವುದನ್ನು ಮೊದಲು ಅವರಪ್ಪನನ್ನು ಕೇಳಿ ತಿಳಿದುಕೊಳ್ಳಲಿ. ಮುಖ್ಯಮಂತ್ರಿಗಳಿಂದ ಹಿಡಿದು ಎಷ್ಟು ಜನ ಮಂತ್ರಿಗಳು ಜೆಡಿಎಸ್ ಮೂಲದವರು ಗೊತ್ತಿದೆಂತಾ ಎಂದು ಕುಮಾರಸ್ವಾಮಿ ಕಿಡಿಕಾರಿದರು.


ಮಿಸ್ಟರ್ ಖರ್ಗೆ ಅವರೇ, ಮೊದಲು ನಿಮ್ಮ ಪಕ್ಷವನ್ನು ಭದ್ರ ಮಾಡಿಕೊಳ್ಳಿ. ನಿಮ್ಮ ಪಕ್ಷದಲ್ಲಿ ಸದ್ಯಕ್ಕೆ ಒಬ್ಬರ ಲೀಸ್ ಅವಧಿ ಮುಗಿದಿದೆ. ನನ್ನನ್ನು ಲೀಸ್ ಮೇಲೆ ಮುಖ್ಯಮಂತ್ರಿ ಮಾಡಿ ಎಂದು ಇನ್ನೊಬ್ಬರು ಟವೆಲ್ ಹಾಕಿದ್ದಾರೆ. ಇತ್ತ ಅವರು ನೋಡಿದರೆ ನನ್ನ ಲೀಸ್ ಅವಧಿ ಇನ್ನೂ ಮುಗಿದಿಲ್ಲ. ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ, ನಾನೇ ಮುಂದುವರಿಯುತ್ತೇನೆ ಎಂದು ಹೇಳುತ್ತಿದ್ದಾರೆ. ಇದೆಲ್ಲಾ ಏನು ಮರಿ ಖರ್ಗೆ ಅವರೇ! ಮೊದಲು ನಿಮ್ಮ ಪಕ್ಷದ ಹಣೆಬರಹ ನೋಡಿಕೊಳ್ಳಿ, ನಂತರ ಬೇರೆಯವರ ಬಗ್ಗೆ ಮಾತನಾಡಿ ಎಂದು ತರಾಟೆಗೆ ತೆಗೆದುಕೊಂಡರು.

ಮಹಾರಾಷ್ಟ್ರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಇಂಡಿಯಾ ಮೈತ್ರಿಕೂಟ ಅಭೂತಪೂರ್ವ ಜಯ ಸಾಧಿಸಿದೆ. ದುರಹಂಕಾರ ಬೆಳೆಸಿಕೊಂಡರೆ ಏನಾಗುತ್ತದೆ ಎಂಬುದಕ್ಕೆ ಈ ಫಲಿತಾಂಶವೇ ಸಾಕ್ಷಿ. ಪ್ರಿಯಾಂಕ್ ಖರ್ಗೆ ಅವರೇ, ಅಭಿವೃದ್ಧಿ ಬಗ್ಗೆ ಚರ್ಚೆ ನಡೆಸಿ. ನಿಮ್ಮ ತಂದೆಯವರು ಪ್ರತಿನಿಧಿಸಿರುವ ಕ್ಷೇತ್ರಗಳ ಪರಿಸ್ಥಿತಿ ಬಗ್ಗೆ ಹೇಳಿ. ಮೈಸೂರು, ಕನಕಪುರ ಮತ್ತು ರಾಮನಗರದಲ್ಲಿ ಆಗಿರುವ ಅಭಿವೃದ್ಧಿ ನಿಮ್ಮ ಕ್ಷೇತ್ರದಲ್ಲಿ ಆಗಿದೆಯೇ, ಹಿರಿಯ ಖರ್ಗೆ ಅವರು 40 ವರ್ಷಕ್ಕೂ ಹೆಚ್ಚು ಕಾಲದಿಂದ ಅಧಿಕಾರದಲ್ಲಿ ಇದ್ದಾರೆ. ನೀವು ಕಳೆದ 8–9 ವರ್ಷದಿಂದ ಮಂತ್ರಿ ಆಗಿದ್ದೀರಿ. ಏನು ಸಾಧನೆ ನಿಮ್ಮದು ಎಂಬುದರ ಪಟ್ಟಿ ಕೊಡಿ ನೋಡೋಣ ಎಂದು ಆಗ್ರಹಿಸಿದರು.

ಜೆಡಿಎಸ್– ಬಿಜೆಪಿ ಮೈತ್ರಿ ಕಾರಣಕ್ಕೆ ನಿಮಗೆ ನಿದ್ದೆ ಬರುತ್ತಿಲ್ಲ. ಕಳೆದ ಲೋಕಸಭೆ ಚುನಾವಣೆಯಲ್ಲಿ ನಮ್ಮ ಮೈತ್ರಿಯಿಂದ ನಿಮ್ಮ ಹಣೆ ಬರಹ 9 ಸೀಟುಗಳಿಗೆ ಬಂದಿದೆ. ನಮ್ಮ ಕೆಲ ದೋಷಗಳಿಂದ ನೀವು 9 ಸೀಟು ಗೆದ್ದಿದ್ದೀರಿ. ಇಲ್ಲದಿದ್ದರೆ ರಾಜ್ಯದಲ್ಲಿ ಅಧಿಕಾರ ಇದ್ದರೂ ನಿಮ್ಮ ನ್ಯಾಷನಲ್ ಪಾರ್ಟಿ 3 ಅಥವಾ 4 ಸೀಟುಗಳಿಗೆ ಇಳಿಯುತ್ತಿತ್ತು ಎಂದು ಛೇಡಿಸಿದ್ದಾರೆ.

ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಬಂದರೆ ಸ್ವಾಗತ

ಬೆಂಗಳೂರು, ಜ. 16(ಕೆಎಂಶಿ)– ರಾಜ್ಯ ರಾಜಕಾರಣಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮರಳಿದರೆ ತಪ್ಪೇನು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಮರಳಿದರೆ ತಪ್ಪೇನಿಲ್ಲ. ಇದು ಅವರ ವೈಯಕ್ತಿಕ ನಿರ್ಧಾರ. ನಾನು ಅದನ್ನು ಮುಕ್ತವಾಗಿ ಸ್ವಾಗತಿಸುತ್ತೇನೆ ಎಂದರು.

ಎರಡು ಬಾರಿ ಮುಖ್ಯಮಂತ್ರಿಯಾಗಿ ನಾಡಿಗೆ ಕೊಡುಗೆ ನೀಡಿದ್ದಾರೆ. ರಾಜ್ಯ ರಾಜಕಾರಣಕ್ಕೆ ಬರುವುದರಲ್ಲಿ ತಪ್ಪು ಹುಡುಕಲು ಏನಿದೆ. ಕಾರ್ಯಕರ್ತರ ಹಾಗೂ ಪಕ್ಷದ ಹಿತದೃಷ್ಟಿಯಿಂದ ಅವರು ಯಾವುದೇ ನಿರ್ಧಾರ ತೆಗೆದುಕೊಳ್ಳಲು ಸಮರ್ಥರು.

ಬಳ್ಳಾರಿ ಪಾದಯಾತ್ರೆ ವಿಷಯ: ಬಳ್ಳಾರಿ ಪಾದಯಾತ್ರೆ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ. ಈ ಹಿಂದೆ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬೆಂಗಳೂರಿನಿಂದ ಮೈಸೂರು ಪಾದಯಾತ್ರೆ ಮಾಡಿದ್ದೆವು. ಯಾವುದೇ ನಿರ್ಧಾರ ತೆಗೆದುಕೊಂಡರೂ ಕೇಂದ್ರದ ವರಿಷ್ಠರ ಗಮನಕ್ಕೆ ತಂದು ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಪಕ್ಷದ ರಾಜ್ಯ ನಾಯಕರ ಜೊತೆ ಚರ್ಚಿಸಿದ್ದೇನೆ. ನಮ್ಮ ಅಭಿಪ್ರಾಯವನ್ನೂ ಕೇಂದ್ರದ ವರಿಷ್ಠರಿಗೆ ತಿಳಿಸಿದ್ದೇನೆ. ಈ ತಿಂಗಳ 19, 20ರಂದು ನೂತನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದ್ದು, ಆ ವೇಳೆ ನಾನು ದೆಹಲಿಯಲ್ಲಿ ಇರುತ್ತೇನೆ. ಅದಾದ ಬಳಿಕ ವರಿಷ್ಠರ ಜೊತೆ ಚರ್ಚಿಸುತ್ತೇನೆ.

ರೆಡ್ಡಿ ಸಹೋದರರಿಗೆ ಬೆಂಬಲ ಕುರಿತು ಎಲ್ಲಿ ಚರ್ಚೆ ಮಾಡಬೇಕೋ ಅಲ್ಲಿ ಮಾಡುತ್ತೇನೆ. ಪಾದಯಾತ್ರೆ ಸೀಮಿತವಾಗಿ ಹೇಳುವುದಾದರೆ, ನನ್ನ ವೈಯಕ್ತಿಕ ವಿರೋಧ ಏನೂ ಇಲ್ಲ. ಇದನ್ನು ಮತ್ತೆ ಸ್ಪಷ್ಟಪಡಿಸುತ್ತಿದ್ದೇನೆ. ಶ್ರೀರಾಮುಲು ಪತ್ರಿಕಾ ಹೇಳಿಕೆ ಗಮನಿಸಿದ್ದೇನೆ, ದೂರವಾಣಿ ಮೂಲಕ ಪಕ್ಷದ ಕೇಂದ್ರ ವರಿಷ್ಠರ ಜೊತೆಗೆ ಮಾತನಾಡಿದ್ದೇನೆ. 19, 20ರಂದು ದೆಹಲಿಗೆ ಬನ್ನಿ ಚರ್ಚೆ ಮಾಡೋಣ ಎಂದಿದ್ದಾರೆ, ಆ ವೇಳೆ ಚರ್ಚಿಸುತ್ತೇನೆ ಎಂದರು.

ಪಾವಿತ್ರ್ಯತೆ ಹಾಳು ಮಾಡುತ್ತಿದ್ದಾರೆ: ವಿಧಾನ ಮಂಡಲದ ವಿಶೇಷ ಅಧಿವೇಶನವನ್ನು ನಾಡಿನ ಜನರ ಒಳಿತಿಗೆ ಬಳಸುವ ಬದಲು ಕೇಂದ್ರ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಬಳಕೆ ಮಾಡುತ್ತಿರುವುದನ್ನು ಬಿಜೆಪಿ ಖಂಡಿಸುತ್ತದೆ. ಶಾಸನ ಸಭೆಯ ಪಾವಿತ್ರ್ಯತೆ ಹಾಳು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರಟಿದ್ದಾರೆ.

ದೇಶದ ಬಡವರು ಮತ್ತು ಕೃಷಿ ಕಾರ್ಮಿಕರಿಗೆ ಅನುಕೂಲ ಆಗಬೇಕೆಂಬ ಉದ್ದೇಶದಿಂದ ವಿಬಿ–ಜಿ–ರಾಮ್–ಜಿ ಕಾಯ್ದೆ ತಂದಿದ್ದಾರೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ದ್ವೇಷ ಸಾಧಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಹೊರಟಿದೆ.

ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುವುದು ಒಂದೆಡೆ ಆದ್ಯತೆಯಾದರೆ, ಮತ್ತೊಂದು ಕಡೆ ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳುವುದಕ್ಕೆ ಕಾಲಹರಣ ಮಾಡುತ್ತಾ, ಡಿ.ಕೆ.ಶಿವಕುಮಾರ್ ಅವರಿಗೆ ಕೈ ಕೊಡುವುದಕ್ಕೆ ವಿಶೇಷ ಅಧಿವೇಶನ ಬಳಸಿಕೊಳ್ಳುತ್ತಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು 3 ವರ್ಷ ಸಮೀಪಿಸುತ್ತಿದೆ, ಏನು ಸಾಧನೆ ಆಗಿದೆ, ಜನಪರ ಯೋಜನೆಗಳೇನು ಕೊಟ್ಟಿದ್ದೀರಿ, ಏನು ಕಡಿದು ಕಟ್ಟೆ ಹಾಕಿದ್ದೀರಿ, ಇದರ ಬಗ್ಗೆ ಚರ್ಚೆ ಮಾಡಿದರೆ ಒಳಿತು ಎಂದು ಹರಿಹಾಯ್ದರು.

ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತ ಪತ್ರ ಹೊರಡಿಸಿ



ಬೆಂಗಳೂರು, ಜ.16(ಕೆಎಂಶಿ)– ಕರ್ನಾಟಕ ದಿವಾಳಿಯಾಗಿಲ್ಲ ಎಂದು ಸುಳ್ಳು ಹೇಳುವುದನ್ನು ನಿಲ್ಲಿಸಿ, ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಶ್ವೇತಪತ್ರ ಹೊರಡಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಪೋಸ್ಟ್ ಮಾಡಿರುವ ಅವರು, ನರ್ಸ್‌ಗಳಿಗೆ ವೇತನ ನೀಡುವುದಕ್ಕೂ ಕಾಂಗ್ರೆಸ್ ಸರ್ಕಾರದ ಬಳಿ ದುಡ್ಡಿಲ್ಲ. ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ 30 ಸಾವಿರ ಒಳಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ 3 ತಿಂಗಳಿಂದ ಸಂಬಳ ನೀಡಿಲ್ಲ. ಸಿದ್ದರಾಮಯ್ಯ ಅವರ ತುಂಬಿ ತುಳುಕುತ್ತಿರುವ ಬೊಕ್ಕಸದ ಅಸಲಿ ಹಣೇಬರಹ ಹಾಗೂ ಸರ್ಕಾರದ ಆರ್ಥಿಕ ಸ್ಥಿತಿಗತಿ ಕುರಿತು ಶ್ವೇತಪತ್ರ ಹೊರಡಿಸಿದರೆ ಬಂಡವಾಳ ಗೊತ್ತಾಗಲಿದೆ ಎಂದಿದ್ದಾರೆ.

ಹೊಲಿಗೆ, ಆರಿ ವರ್ಕ್ಸ್, ಜರ್ದೋಸಿ ತರಬೇತಿ

ಮೈಸೂರು, ಜ.16–ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸೇವಾ ಯಾನ ಟ್ರಸ್ಟ್‌ನ ವತಿಯಿಂದ 3 ತಿಂಗಳ ಹೊಲಿಗೆ, ಆರಿ ವರ್ಕ್ಸ್ ಹಾಗೂ ಜರ್ದೋಸಿ ಕೌಶಲ್ಯಯುತ ತರಬೇತಿ ನೀಡಲಾಗುತ್ತಿದ್ದು, ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ. ಅರ್ಜಿ ಸಲ್ಲಿಸಲು ಜ.18 ಕಡೆ ದಿನ. ಮಾಹಿತಿಗೆ ಮೊ.ಸಂ. 9945599002 / 9513984848 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಅಯ್ಯೋ, ಕರ್ಮ, ಕರ್ಮ ಶಾಂಪೂವನ್ನು ಭುಜಕ್ಕೂ ಹಾಕ್ತಿದ್ದೀರಿ...?

ಗಂಡ : ಅಯ್ಯೋ... ಇದು ಸಾಮಾನ್ಯ ಶಾಂಪೂ ಅಲ್ಲ ಕಣೆ... 'ಹೆಡ್ ಅಂಡ್ ಶೋಲ್ಡರ್' ಶಾಂಪೂ.

ಮೈಸೂರು ಮಿತ್ರ
ಶನಿವಾರ, ಜನವರಿ 17, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಿಮ್ಮಲ್ಲಿ ಬಹಳ ತಾಳ್ಮೆ ಇದೆ ಎಂದರೆ ನೀವು ದುರ್ಬಲರು ಎಂದು ಅರ್ಥವಲ್ಲ. ತಾಳ್ಮೆ ಎಂಬುದು ಒಂದು ಶಕ್ತಿ. ಅದು ಎಲ್ಲರಲ್ಲಿ ಕಾಣ ಸಿಗುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಡ್ಡನಿಗೆ ಹಗಲು ಕಳೆಯುವುದಿಲ್ಲ, ಒಳ್ಳೆಯವನಿಗೆ ರಾತ್ರಿ ಸಾಲುವುದಿಲ್ಲ.

ನಿಮ್ಮ ಪತ್ರಗಳು

ಹೊಟೇಲ್ ಉದ್ಯಮಿ, ಸಮಾಜ ಸೇವಕ ಎಂ.ರಾಜೇಂದ್ರರಿಗೆ ಸಂದ ಗೌರವ, ಶ್ಲಾಘನೀಯ

ಮಾನ್ಯರೆ,



ಹೊಟೇಲ್ ಉದ್ಯಮ ಮತ್ತು ಸಮಾಜ ಸೇವೆಗೆ ಮೆರುಗು ತಂದ ವ್ಯಕ್ತಿ ಎಂದರೆ ಇತ್ತೀಚೆಗಷ್ಟೇ ರಾಜ್ಯ ಹೊಟೇಲ್ ಮಾಲೀಕರ ಸಂಘದ ಗೌರವ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ರಾಜೇಂದ್ರ ಅವರಾಗಿದ್ದಾರೆ.

ಮೈಸೂರಿನಲ್ಲಿ ಹಲವಾರು ಹೊಟೇಲ್‌ಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಮೈಸೂರು ನಗರ ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಮೈಸೂರಿನಲ್ಲಿ ಹೊಟೇಲ್ ಮಾಲೀಕರ ಸಂಘ ಸುಸಜ್ಜಿತ ಭವನವನ್ನು ಹೊಂದಲು ಎಂ. ರಾಜೇಂದ್ರ ಅವರ ಕೊಡುಗೆ ಕೂಡ ಇದೆ. ರಾಜ್ಯ ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಹುಬ್ಬಳ್ಳಿಯಲ್ಲಿ ರಾಜ್ಯ ಹೊಟೇಲ್ ಮಾಲೀಕರ ಸಮ್ಮೇಳನವನ್ನು ನಡೆಸಿ ಹೊಟೇಲ್ ಉದ್ಯಮ ಯಶಸ್ಸಿಗೆ ಶ್ರಮಿಸಿದ್ದಾರೆ. ಕೊರೊನಾ ಸಂದರ್ಭದಲ್ಲಿ ವೈಯಕ್ತಿಕವಾಗಿ ಉಪಹಾರ ಮತ್ತು ಭೋಜನದ ಕಿಟ್‌ಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ವಿತರಿಸಿದ್ದಾರೆ. ಹೊಟೇಲ್ ಮಾಲೀಕರು, ಕಾರ್ಮಿಕರು ಕಷ್ಟಕ್ಕೆ ಒಳಗಾದಾಗ ಅವರ ಕಷ್ಟಗಳಿಗೆ ಸ್ಪಂದಿಸಿದ್ದಾರೆ, ನೆರವು ನೀಡಿದ್ದಾರೆ. ದಸರಾ ಸಂದರ್ಭದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ವರ್ಗದವರಿಗೆ ಔತಣ ಕೂಟಗಳನ್ನು ನಡೆಸಿ, ನೆನಪಿನ ಕಾಣಿಕೆ ನೀಡಿ ಸತ್ಕರಿಸಿದ್ದಾರೆ. ಸರಳತೆ, ಪರೋಪಕಾರಗಳಿಂದ ಎಲ್ಲರ ಮನ ಗೆದ್ದಿದ್ದಾರೆ. ಇವರ ಸಾಧನೆಗೆ ರಾಜ್ಯಾದ್ಯಂತ ವಿಶೇಷವಾಗಿ ಮೈಸೂರು ಹೊಟೇಲ್ ಮಾಲೀಕರು ಸಹಕರಿಸಿದ್ದಾರೆ.

ಎಂ.ರಾಜೇಂದ್ರರವರು ವಿವಿಧ ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಿಜೆಪಿಯ ರಾಜ್ಯ ಉಪಾಧ್ಯಕ್ಷರಾಗಿದ್ದಾರೆ. ಎಂ.ರಾಜೇಂದ್ರರವರು ರಾಜ್ಯ ಹೊಟೇಲ್ ಮಾಲೀಕರ ಸಂಘದ ಗೌರವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು ಅರ್ಹತೆಗೆ ಸಂದ ಗೌರವವಾಗಿದೆ. ಅವರಿಗೆ ಅಭಿನಂದನೆಗಳು.

– ಅಮೋಘ ವರ್ಷ ನಾಗರಾಜ, ಅರವಿಂದನಗರ, ಮೈಸೂರು

ಅಭಿವೃದ್ಧಿ ನೆಪದಲ್ಲಿ ಚಾಮುಂಡಿ ಬೆಟ್ಟಕ್ಕೆ ಸಂಚಕಾರ ತರದಿರಿ

ಮಾನ್ಯರೆ,

ಮೈಸೂರಿನ ಚಾಮುಂಡಿ ಬೆಟ್ಟವು ತನ್ನ ನೈಸರ್ಗಿಕ ಸೌಂದರ್ಯ,ಭಕ್ತಿ ಮತ್ತು ಪರಂಪರೆಗೆ ಹೆಸರುವಾಸಿಯಾಗಿದೆ. ನಾಡಾಳಿದ ಮೈಸೂರು ಅರಸರ ಕುಲದೇವಿಯಾಗಿ, ನಾಡದೇವಿ ಎನಿಸಿಕೊಂಡಿರುವ ಚಾಮುಂಡಿ ಬೆಟ್ಟವು ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬೆಟ್ಟದ ಸೌಂದರ್ಯ ಹಾಗೂ ಪರಂಪರೆಗೆ ಧಕ್ಕೆ ಉಂಟುಮಾಡುವ ಕೆಲಸವಾಗುತ್ತಿದೆ. ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆ ಅಡಿಯಲ್ಲಿ ಚಾಮುಂಡಿ ಬೆಟ್ಟ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರವು ದೇವಾಲಯದ ಪಕ್ಕದಲ್ಲಿ ಪಾರ್ಕಿಂಗ್ ಶೆಲ್ಟರ್ ಹಾಗೂ ವಾಣಿಜ್ಯ ಕಟ್ಟಡ ನಿರ್ಮಿಸಲು ರಸ್ತೆ ಅಗೆದಿದ್ದು ತೀವ್ರ ಆಕ್ರೋಶಕ್ಕೆ ಗುರಿಯಾಗಿದೆ ಈ ಅಭಿವೃದ್ಧಿಯಿಂದ ದೇವಸ್ಥಾನದ ಸುತ್ತಮುತ್ತಲಿನ ಸೌಂದರ್ಯಕ್ಕೆ ಕುತ್ತು ಬರಲಿದೆ. ಚಾಮುಂಡಿ ಬೆಟ್ಟ ಕಾಂಕ್ರೀಟ್ ಮಯವಾಗಿ ಬೆಟ್ಟದ ಪಾವಿತ್ರ್ಯತೆಗೆ ಧಕ್ಕೆ ಉಂಟು ಮಾಡಲಿದೆ ಈಗಾಗಲೇ ಪ್ರಾಧಿಕಾರ ರಚನೆ ವಿರುದ್ಧ ರಾಜವಂಶಸ್ಥರು ಕೋರ್ಟ್ ಮೆಟ್ಟಿಲೇರಿದ್ದು ವಿಚಾರಣೆ ಹಂತದಲ್ಲಿರುವಾಗಲೇ ಏಕಾಏಕಿ ಸಾರ್ವಜನಿಕರು ಹಾಗೂ ರಾಜವಂಶಸ್ಥರ ಗಮನಕ್ಕೆ ತರದೆ ಮನ ಬಂದಂತೆ ಅಭಿವೃದ್ಧಿಯ ನೆಪದಲ್ಲಿ ಚಾಮುಂಡಿ ಬೆಟ್ಟದ ನೈಸರ್ಗಿಕ ಸೌಂದರ್ಯವನ್ನು ಹಾಳು ಮಾಡುತ್ತಿರುವುದು ಸರಿಯಲ್ಲ. ಈ ಕೂಡಲೆ ಎಲ್ಲವನ್ನು ನಿಲ್ಲಿಸಬೇಕೆಂದು ಮೈಸೂರಿನ ನಾಗರೀಕರ ಆಗ್ರಹ.

–ಲಕ್ಷ್ಮಿ ಕಿಶೋರ್ ಅರಸ್, ಲೇಖಕ ಹಾಗೂ ಉಪನ್ಯಾಸಕ, ಮೈಸೂರು

ಮಹಿಳಾ ಅಧಿಕಾರಿ ಪರ ನಿಲ್ಲಬೇಕಾದ ಸರ್ಕಾರಿ ನೌಕರರ ಸಂಘ ಏನು ಮಾಡುತ್ತಿದೆ?

ಮಾನ್ಯರೆ,

ಸರ್ಕಾರಿ ನೌಕರರ ಹಿತ ಕಾಯಬೇಕಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಅಸ್ತಿತ್ವದಲ್ಲಿ ಇದೆಯೋ ಅಥವಾ ಯಾವುದಾದರೂ ರಾಜಕೀಯ ಪಕ್ಷದೊಂದಿಗೆ ವಿಲೀನ ಆಗಿದೆಯೋ ಎಂಬ ಗುಮಾನಿ ಕಾಡುತ್ತಿದೆ. ಏಕೆಂದರೆ ಅಧಿಕಾರಿಗಳ ಮೇಲೆ ರಾಜಕೀಯ ಪುಡಾರಿಗಳು ನಡೆಸುತ್ತಿರುವ ದಬ್ಬಾಳಿಕೆ ಹಾಗೂ ಗೂಂಡಾವರ್ತನೆ ವಿರುದ್ಧ ಧ್ವನಿ ಎತ್ತಬೇಕಾದ ಸಂಘ ಎಲ್ಲೋ ಬೆಚ್ಚಗೆ ಹೊದ್ದು ಮಲಗಿದಂತೆ ಕಂಡುಬರುತ್ತಿದೆ.

ಈ ಸರ್ಕಾರದ ಇತ್ತೀಚಿನ ಅವಧಿಯಲ್ಲಿ ನಿಷ್ಠಾವಂತ ಮಹಿಳಾ ಅಧಿಕಾರಿಗಳಿಗೆ ಅವಾಚ್ಯ ಪದ ಬಳಸಿ ನಿಂದಿಸಿ ಬೆದರಿಕೆ ಹಾಕುತ್ತಿರುವ ಪುಡಿ ರಾಜಕಾರಣಿಗಳ ವರ್ತನೆಯನ್ನು ಖಂಡಿಸಿ ನೊಂದ ಅಧಿಕಾರಿಗಳ ಪರ ನೆರವಿಗೆ ಧಾವಿಸಬೇಕಾದ ಸಂಘದ ಪದಾಧಿಕಾರಿಗಳು ಈ ಬಗ್ಗೆ ಚಕಾರವೆತ್ತದೇ ಮೌನವಾಗಿರುವುದನ್ನು ಗಮನಿಸಿದರೇ ಹಲವಾರು ಸಂಶಯಗಳು ಮೂಡುತ್ತದೆ. ಈ ಹಿಂದೆ ಭದ್ರಾವತಿಯ ಶಾಸಕರ ಮಗ ಮರಳು ಮಾಫಿಯದ ವಿರುದ್ಧ ಕ್ರಮಕ್ಕೆ ಮುಂದಾಗಿದ್ದ ಮಹಿಳಾ ಅಧಿಕಾರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಮೊನ್ನೆ ಶಿಡ್ಲಘಟ್ಟದ ಪುರಸಭೆಯ ಮಹಿಳಾ ಆಯುಕ್ತರಿಗೆ ಅಯೋಗ್ಯ ರಾಜಕಾರಣಿ ಒಬ್ಬ ಮನ ಬಂದಂತೆ ನಿಂದಿಸಿ ಅವಾಚ್ಯ ಶಬ್ದ ಪ್ರಯೋಗಿಸಿ ಗೂಂಡಾವರ್ತನೆ ಪ್ರದರ್ಶಿಸಿದ್ದಾನೆ. ಈ ಸಂದರ್ಭದಲ್ಲಿ ಮಹಿಳಾ ಅಧಿಕಾರಿ ಪರ ನಿಲ್ಲಬೇಕಾದ ಸಂಘ ಏನು ಮಾಡುತ್ತಿತ್ತು? ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಕೇವಲ ವೇತನ, ಭತ್ಯೆ ಮತ್ತಿತರ ಸವಲತ್ತುಗಳಿಗಾಗಿ ಸೀಮಿತಗೊಂಡಿರುವ ರಾಜ್ಯ ಸರ್ಕಾರಿ ನೌಕರರ ಸಂಘ ತನ್ನ ನೌಕರರ ಹಿತ ಕಾಯುವಲ್ಲಿ ಸಂಪೂರ್ಣ ವಿಫಲವಾಗಿದೆ ಎನ್ನಬಹುದು. ರಾಜ್ಯದ ಮುಖ್ಯಮಂತ್ರಿಗಳೇ ಅಧಿಕಾರಿಗಳ ವಿರುದ್ಧ ಹರಿಹಾಯುತ್ತಾರೆ. ಐಪಿಎಸ್ ಅಧಿಕಾರಿ ಓರ್ವರಿಗೆ ಬಹಿರಂಗವಾಗೇ ಕೈ ಎತ್ತಲು ಮುಂದಾಗುತ್ತಾರೆ. ಹಿರಿಯ ಅಧಿಕಾರಿಗಳನ್ನು ಏಕ ವಚನದಲ್ಲೆ ಮಾತನಾಡುತ್ತಾರೆ. ಹೀಗಿರುವಾಗ ಹಿರಿಯಣ್ಣನ ಚಾಳಿ ಮನೆ ಮಂದಿಗೆಲ್ಲಾ ಎಂಬಂತೆ ಇಂತಹ ಘಟನೆಗಳು ನಡೆಯುತ್ತಿರುವುದು ದುರಾದೃಷ್ಟಕರ ಸಂಗತಿ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು,

ಆಸ್ಪತ್ರೆ, ಜೈಲು, ಸ್ಮಶಾನದಲ್ಲಿ ಜೀವನ ದರ್ಶನ!





ರಾಕೇಶ್ ರಾದೇಶ್ಯಾಮ್ ಜುಂಜುನ್ವಾಲಾ, ವಾರೆನ್ ಎಡ್ವರ್ಡ್ ಬಫೆಟ್

> "ಸಿರಿವಂತನಾಗಲು ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಡಿ, ಅವರಿಗೆ ಸಂತೋಷವಾಗಿರುವುದನ್ನು ಕಲಿಸಿ. ದೊಡ್ಡವರಾದ ಮೇಲೆ ಜೀವನದ ಬೆಲೆಗಿಂತ ವಸ್ತುವಿನ ಬೆಲೆ ಅವರಿಗೆ ತಿಳಿಯುತ್ತದೆ. ಜೀವನವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಆಸ್ಪತ್ರೆ, ಜೈಲು ಮತ್ತು ಸ್ಮಶಾನ–ಈ ಮೂರು ಸ್ಥಳಗಳಿಗೆ ಭೇಟಿ ನೀಡುವುದು ಒಳಿತು. ಆಸ್ಪತ್ರೆಯಲ್ಲಿ ಆರೋಗ್ಯಕ್ಕಿಂತ ಉತ್ತಮವಾದುದ್ದು ಯಾವುದೂ ಇಲ್ಲವೆನಿಸುತ್ತದೆ, ಜೈಲಿನಲ್ಲಿ ಸ್ವಾತಂತ್ರ್ಯ ಎಷ್ಟು ಅಮೂಲ್ಯವಾದುದ್ದೆಂದು ತಿಳಿಯುವುದು ಹಾಗೂ ಸ್ಮಶಾನದಲ್ಲಿ ಜೀವನ ಏನೂ ಅಲ್ಲ ಎಂಬುದನ್ನು ಅರಿತುಕೊಳ್ಳುತ್ತಿರಿ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಜೀವನದಲ್ಲಿ ಸಾಧನೆ ಮಾಡಿ ಹೆಸರು ಗಳಿಸಬೇಕು, ಹಣ–ಆಸ್ತಿಗಳನ್ನು ಯಥೇಚ್ಛವಾಗಿ ಸಂಪಾದಿಸುತ್ತಾ ಶ್ರೀಮಂತನಾಗಿ ಸಮಾಜದಲ್ಲಿ ಮೆರೆಯಬೇಕು ಎಂಬ ಆಸೆಗಳು ಮನುಷ್ಯನಾದವರಿಗೆ ಇರುವಂತಹದ್ದೆ. ಅದಕ್ಕಾಗಿ ದುಡಿಯುವ ವಯಸ್ಸಿಗೆ ಬಂದಾಗ, ಸಂಪಾದನೆಗೆ ಯಾವೆಲ್ಲಾ ಮಾರ್ಗಗಳು ಇವೆಯೋ, ಅವುಗಳೆಲ್ಲವನ್ನು ಹುಡುಕಿ ವಿರಮಿಸದೆ ಹಗಲಿರುಳು ದುಡಿಯುತ್ತಾನೆ. ಸೋಮಾರಿಯಾಗದೆ ದುಡಿಯುವ ಕಾಲಕ್ಕೆ ದುಡಿಯಲೇಬೇಕು. ತಲೆಯಲ್ಲಿ ಇರುವುದೊಂದೇ ನಾನು ಸಾಧನೆ ಮಾಡಬೇಕು, ಶ್ರೀಮಂತನಾಗಬೇಕು ಎನ್ನುವುದು. ಗುರಿ, ಶ್ರದ್ಧೆ, ಶ್ರಮ ಮನಸ್ಸು ಇದ್ದವನು ಸಾಧಿಸಿಯೇ ಸಾಧಿಸುತ್ತಾನೆ ಎನ್ನುವುದಕ್ಕೆ ಗುರಿ ಮುಟ್ಟಿದ ಇಬ್ಬರನ್ನು ನಿಮಗೆ ಪರಿಚಯಿಸುತ್ತಿದ್ದೇನೆ. ಅವರೇ ರಾಕೇಶ್ ರಾದೇಶ್ಯಾಮ್ ಜುಂಜುನ್ವಾಲಾ ಎಂಬ ಭಾರತೀಯ ಬಿಲಿಯನೇರ್, ಷೇರು ಮಾರುಕಟ್ಟೆಯ ಹೂಡಿಕೆದಾರ, ವ್ಯಾಪಾರಿ ಮತ್ತು ಚಾರ್ಟರ್ಡ್ ಅಕೌಂಟೆಂಟ್. ಅವರನ್ನು ಭಾರತದ ಬಿಗ್‌ಬುಲ್ ಎಂದು ಕರೆಯುತ್ತಾರೆ. ಇವರನ್ನು ಮತ್ತೊಬ್ಬ ಅಮೆರಿಕಾದ ಪ್ರಸಿದ್ಧ ಹೂಡಿಕೆದಾರ ವಾರೆನ್ ಬಫೆಟ್‌ಗೆ ಹೋಲಿಸಲಾಗುತ್ತದೆ. ಜುಂಜುನ್ವಾಲಾ ಆಯ್ತು ಇವನ್ಯಾರಪ್ಪ ಬಫೆಟ್ ಎಂಬ ಅಚ್ಚರಿಯಾ... ಅವನ ಬಗ್ಗೆಯೂ ತಿಳಿಯೋಣ. ಇವರುಗಳ ಜೀವನದ ಪಯಣ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡುತ್ತದೆ.

ಭಾರತ ಸರ್ಕಾರವು ಕೊಡುವ ಅತ್ಯುತ್ತಮ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪಡೆದಿದ್ದ ರಾಕೇಶ್ ಜುಂಜುನ್ವಾಲಾರವರು ತಮ್ಮ 62ನೇ ವಯಸ್ಸಿಗೆ ಬದುಕಿಗೆ ವಿರಾಮ ಕೊಟ್ಟು ನಡೆದೇಬಿಟ್ಟರು, ಇದ್ದಿದ್ದರೆ ಇನ್ನೆಷ್ಟು ದುಡಿಯುತ್ತಿದ್ದರೋ...! ಅವರ ಜೀವಿತದ ಕಡೆಯಲ್ಲಿ ಅಂದಾಜು 5.80 ಬಿಲಿಯನ್ ಯುಎಸ್ ಡಾಲರ್ (48,140 ಕೋಟಿ ರೂ.ಗಳು) ಮೌಲ್ಯವನ್ನು ಹೊಂದಿದ್ದರು. ವಿಶ್ವದ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ 438ನೇ ಸ್ಥಾನ ಇವರದಾಗಿತ್ತು. ಅವರ ಮರಣಾನಂತರ 2024ರಲ್ಲಿ ಅವರ ಪತ್ನಿ ರೇಖಾರವರು ಫೋರ್ಬ್ಸ್ ಪ್ರಕಟಿಸಿದ ಶ್ರೀಮಂತರ ಪಟ್ಟಿಯಲ್ಲಿ ಭಾರತದ 100 ಶ್ರೀಮಂತ ಉದ್ಯಮಿಗಳಲ್ಲಿ 28ನೇ ಸ್ಥಾನದಲ್ಲಿದ್ದರು.

ಮಾರ್ವಾಡಿ ಕುಟುಂಬದಲ್ಲಿ 5, ಜುಲೈ 1960 ರಂದು ಜನಿಸಿದ ಇವರು ರಾಜಾಸ್ಥಾನದ ಜುಂಜುವಿಗೆ ಸೇರಿದವರಾಗಿದ್ದರಿಂದ ಹೆಸರಿನಲ್ಲಿ ಜುಂಜು ಇದೆ. ಪದವಿಯ ನಂತರ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾದಿಂದ ಪದವಿ ಪಡೆದರು. ಮಾರ್ವಾಡಿಗಳು ವ್ಯಾಪಾರವಹಿವಾಟುಗಳಲ್ಲಿ ಮುಂದು, ತನ್ನ ತಂದೆಯವರು ಷೇರು ಮಾರುಕಟ್ಟೆಯ ಬಗ್ಗೆ ಗೆಳೆಯರೊಟ್ಟಿಗೆ ಚರ್ಚಿಸುವುದನ್ನು ಕೇಳಿ ಆಸಕ್ತಿ ಬೆಳೆಸಿಕೊಂಡರು, ಇದನ್ನು ಗಮನಿಸಿದ ತಂದೆಯು ಮಗನಿಗೆ ಮಾರ್ಗದರ್ಶನ ನೀಡುತ್ತಾ ಬಂದರು, ಆದರೆ ಅವರು ಹೂಡಿಕೆ ಮಾಡಲು ಹಣ ಕೊಡಲಿಲ್ಲ ಹಾಗೂ ಸ್ನೇಹಿತರ ಬಳಿ ಹಣ ಕೇಳುವುದನ್ನೂ ತಡೆದಿದ್ದರು. ನಾವುಗಳಾಗಿದ್ದರೆ ಮಗ ಬುದ್ಧಿವಂತನಿದ್ದಾನೆ, ಚಾರ್ಟಡ್ ಅಕೌಂಟೆಂಟ್ ಪದವಿ ಮಾಡಿದ್ದಾನೆ ಎಂದು ಹೊಲಗದ್ದೆಗಳನ್ನಾದರೂ ಮಾರಿ ಕೇಳಿದಷ್ಟು ಹಣ ಕೊಡುತ್ತಿದ್ದೆವು, ಇಲ್ಲಿ ಬಿಡಿಗಾಸನ್ನೂ ಕೊಡದೆ ಮಗನೇ ಸಂಪಾದಿಸಲಿ ಎಂದು ಗೆಳೆಯರು ಸಹ ಹಣ ನೀಡದಂತೆ ನಿರ್ಬಂಧ ಹೇರಿದ್ದರು.

ಜುಂಜುನ್ವಾಲಾರವರು ಕಾಲೇಜಿನಲ್ಲಿ ಓದುತ್ತಿರುವಾಗಲೇ ಉಳಿತಾಯ ಮಾಡಿದ ಹಣವನ್ನು ಷೇರು ವ್ಯವಹಾರಕ್ಕೆ ಹೂಡಿಕೆ ಮಾಡಿದರು. 1985ರಲ್ಲಿ ಹೂಡಿದ ರೂ.5000 ಮೊತ್ತದ ಬಂಡವಾಳದಿಂದ ಒಂದೇ ವರ್ಷದಲ್ಲಿ ರೂ.5.00 ಲಕ್ಷಗಳ ದೊಡ್ಡ ಮೊತ್ತವನ್ನು ಗಳಿಸಿದರು. 1989ರ ಹೊತ್ತಿಗೆ ರೂ. 25 ಲಕ್ಷಗಳವರೆಗೆ ಲಾಭ ಗಳಿಸಿದರು. ಹಣಕಾಸು ವ್ಯವಹಾರದಲ್ಲಿ ಚಾಣಾಕ್ಷರಾಗಿದ್ದ ಇವರು, 2022ರಲ್ಲಿ ಹೂಡಿಕೆ ರೂ.11,000 ಕೋಟಿಗೆ ಏರುವಂತೆ ಮಾಡಿದರು. ಭಾರತದ ಶ್ರೀಮಂತ ಟ್ರೇಡರ್‌ಗಳಲ್ಲಿ ಮೂರನೇ ಸ್ಥಾನದಲ್ಲಿದ್ದರು. ಅಜೀಂ ಪ್ರೇಮ್‌ಜಿ ನಂತರದ ಸ್ಥಾನ ಇವರದಾಗಿತ್ತು.

ಟೈಟಾನ್ ಕಂಪನಿ ಒಂದರಲ್ಲೇ 7294.80 ಕೋಟಿ ಮೌಲ್ಯದ ಹೂಡಿಕೆ ಇವರದ್ದಾಗಿತ್ತು, ಹಲವಾರು ಉದ್ಯಮಗಳಲ್ಲಿ ಹಾಗೂ ದೊಡ್ಡ ಹೊಟೇಲ್‌ಗಳ ನಿರ್ದೇಶಕರ ಮಂಡಳಿಗಳಲ್ಲಿ ಇವರಿದ್ದರು.

ಮರಣದ ಸಮಯದಲ್ಲಿ ರೂ.5.80 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯ ಹೊಂದಿದ್ದ ಜುಂಜುನ್ವಾಲಾ ರವರು, ತಮ್ಮೆಲ್ಲಾ ಸಂಪತ್ತಿನ ಶೇ.25 ಭಾಗವನ್ನು ಆರೋಗ್ಯ, ರಕ್ಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿತ ಯೋಜನೆಗಳಿಗೆ ದಾನ ಮಾಡಲು ನಿರ್ಣಯಿಸಿದರು. ಆಗಸ್ಟ್ 14, 2022ರಂದು ಅನಾರೋಗ್ಯಕ್ಕೆ ತುತ್ತಾಗಿ ಮೂತ್ರಪಿಂಡ ಸಂಬಂಧಿತ ಸಮಸ್ಯೆಗಳು ಮತ್ತು ತೀವ್ರವಾದ ಬಹು ಅಂಗಾಂಗ ವೈಫಲ್ಯದಿಂದ ನಿಧನರಾದರು. ಭಾರತದ ಆರ್ಥಿಕ ಪ್ರಪಂಚಕ್ಕೆ ಅಳಿಸಲಾಗದ ಕೊಡುಗೆಯನ್ನು ನೀಡಿದ್ದಾರೆ, ದೇಶದ ಆರ್ಥಿಕ ಪ್ರಗತಿಯ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದರು ಎಂಬ ಹೇಳಿಕೆಯನ್ನು ಪ್ರಧಾನಿಗಳು ಇವರ ಸಾವಿನ ಕುರಿತಾಗಿ ಮಾತನಾಡಿ ತಮ್ಮ ದುಃಖವನ್ನು ವ್ಯಕ್ತಪಡಿಸಿದ್ದರು.

1987, ಫೆಬ್ರವರಿ 22ರಂದು ರೇಖಾರವರನ್ನು ಮದುವೆಯಾದರು, ಇವರಿಗೆ ಮೂವರು ಮಕ್ಕಳು ಮಗಳು ನಿಶ್ತಾ, ಅವಳಿ ಪುತ್ರರಾದ ಆರ್ಯಮಾನ್ ಮತ್ತು ಆರ್ಯವೀರ್.

ಇಬ್ಬರು ಬಿಗ್‌ಬುಲ್‌ಗಳಲ್ಲಿ ಭಾರತದ ವಾರೆನ್ ಬಫೆಟ್ ಎನಿಸಿಕೊಂಡಿದ್ದ ಜುಂಜುನ್ವಾಲಾ ಕಾಲವಾಗಿದ್ದಾರೆ, ಜೀವಂತ ಉಳಿದಿರುವ 95 ವರ್ಷ ವಯಸ್ಸಿನ ವಾರೆನ್ ಎಡ್ವರ್ಡ್ ಬಫೆಟ್, ಅಮೆರಿಕಾದವರು, ಅತ್ಯಂತ ಯಶಸ್ವೀ ಹೂಡಿಕೆದಾರ, ಉದ್ಯಮಿ, ವಿಶ್ವದ ಇದುವರೆಗಿನ ಅತ್ಯಂತ ಯಶಸ್ವಿ ಹೂಡಿಕೆದಾರರು. ವಂಶಪರಂಪರೆಯ ಐಶ್ವರ್ಯದಲ್ಲಿ ನನಗೆ ನಂಬಿಕೆ ಇಲ್ಲವೆಂದು ಹೇಳುತ್ತಿದ್ದ ಬಫೆಟ್ ಸ್ವಂತ ದುಡಿಮೆಯ ಮೇಲೆ ನಿಂತವರು. ಅವರ ಮಕ್ಕಳು ಬಹುಪಾಲು ಆಸ್ತಿಗಳಿಗೆ ಹಕ್ಕುದಾರರಾಗಿರಲಿಲ್ಲ, ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದನ್ನು ವಿರೋಧಿಸುತ್ತಾ ಬಂದವರು. ಜೂನ್ 2019ರವರೆಗೆ ಅವರು ದಾನ ಮಾಡಿದ ಮೊತ್ತ 2,72,000 ಕೋಟಿ ರೂಪಾಯಿಗಳು, ಗಳಿಸಿದ ಹಣದಲ್ಲಿ ಬಹುಪಾಲು ಸಮಾಜಕ್ಕೆ ದಾನ ಮಾಡುತ್ತಾ ಬಂದಿದ್ದಾರೆ, ಇವರಲ್ಲಿ ದಾನ ಎನ್ನುವುದು ಸಂಪಾದನೆಯ ದೊಡ್ಡ ಭಾಗವಾಗಿತ್ತು. ಫೋರ್ಬ್ಸ್ ಪ್ರಕಟಿಸಿರುವ 2025ರ ಶ್ರೀಮಂತರ ಪಟ್ಟಿಯಲ್ಲಿ 154 ಬಿಲಿಯನ್ ಡಾಲರ್ ನಿವ್ವಳ ಮೊತ್ತವನ್ನು ಹೊಂದುವ ಮೂಲಕ 6ನೇ ಸ್ಥಾನದಲ್ಲಿ ಇದ್ದಾರೆ, ಅಮೆರಿಕಾದವರೇ ಆಗಿರುವ ಎಲನ್ ಮಾಸ್ಕ್ 342 ಬಿಲಿಯನ್ ಡಾಲರ್ ನಿವ್ವಳ ಇರುವ ವಿಶ್ವದ ಮೊದಲ ಶ್ರೀಮಂತನಾಗಿದ್ದರೂ ವಯಸ್ಸನ್ನು ಪರಿಗಣಿಸಿದರೆ, 95ರ ಹರೆಯ ಬಫೆಟ್‌ರವರೇ ಮೊದಲಿಗರು.

ಹಣ, ಆಸ್ತಿ, ಹೆಸರು ಗಳಿಸಿದಷ್ಟೂ ಮತ್ತಷ್ಟು ಸಂಪಾದಿಸಬೇಕೆನ್ನುವ ತುಡಿತ ಶ್ರೀಮಂತರಲ್ಲಿ ಸಹಜ, ಆದರೆ ಬಡವನಲ್ಲಿ ಆ ಹೊತ್ತಿನ ತುತ್ತಿಗೆ ಆಗುವಷ್ಟು ಸಿಕ್ಕರೆ ಅದೇ ಆನಂದ. ಸಂಪಾದನೆಯು ಹೆಚ್ಚಿದಂತೆ ಅದಕ್ಕೂ ಒಂದು ಮಿತಿ ಎನ್ನುವುದೊಂದು ಇರುತ್ತದೆ, ಮನಸ್ಸು ಆಧ್ಯಾತ್ಮದ ಕಡೆಗೆ ತಿರುಗಿ ಕೂಡಿಟ್ಟ ಸಂಪತ್ತನ್ನೆಲ್ಲಾ ದತ್ತಿ ನಿಧಿಗಳಿಗೆ ದಾನ ಮಾಡಿ ಶೂನ್ಯದ ಕಡೆಗೆ ನಡೆದುಬಿಡುತ್ತಾರೆ. ಕೆಲವು ದಿನಗಳ ಹಿಂದೆ ಅವಿವಾಹಿತರಾಗಿಯೇ ಉಳಿದಿದ್ದ ಹೆಸರಾಂತ ಬಹುಭಾಷಾ ಸಿನಿಮಾ ನಟಿ ಕಾಂಚನಾ ರವರು ತಾವು ಗಳಿಸಿದ್ದ ಅಂದಾಜು 100 ಕೋಟಿ ಮೊತ್ತದ ಆಸ್ತಿಯನ್ನು ತಿರುಪತಿ ತಿರುಮಲ ದೇವಸ್ಥಾನಕ್ಕೆ ದಾನ ಮಾಡಿ 86 ವರ್ಷ ವಯಸ್ಸಿನ ವೃದ್ಧೆ ಮಂದಸ್ಮಿತರಾಗಿ ಊರುಗೋಲು ಹಿಡಿದು ಸಾಮಾನ್ಯ ಮಹಿಳೆಯಂತೆ ನಡೆಯುತ್ತಾ ಹೋಗಿ ಆಟೋದಲ್ಲಿ ಕುಳಿತು ಹೊರಡುವ ದೃಶ್ಯವು ನೋಡುಗರ ಮನಸ್ಸನ್ನು ಕಲಕುವಂತಿತ್ತು.

ಜುಂಜುನ್ವಾಲಾ ಮತ್ತು ವಾರೆನ್ ಬಫೆಟ್ ಅವರು ತಾವು ಗಳಿಸಿದ ಆಸ್ತಿಯಲ್ಲಿ ಪ್ರತಿಶತ 85ರವರೆಗೆ ದಾನ ಮಾಡಿ ಲೋಕೋಪಕಾರಿಗಳೆಂದು ಹೆಸರು ಪಡೆದರು. ಇವರುಗಳು ನಡೆದು ಬಂದ ದಾರಿಯನ್ನು ತಿಳಿದುಕೊಂಡಲ್ಲಿ ಎಂಥಹವರಿಗೂ ನಾವೂ ಕೂಡ ಜೀವನದಲ್ಲಿ ಸಾಧಿಸಬೇಕೆನ್ನುವ ಮನಸ್ಸು ಚಿಗುರದೇ ಇರದು. ಮಕ್ಕಳಿಗೆ ಪ್ರೇರಣೆ ಆಗುವಂತೆ ಇಂತಹ ಮಹಾನ್ ಸಾಧಕರ ಬದುಕಿನ ಪರಿಚಯ ಮಾಡಿಸಬೇಕು. ಸಾಧನೆಗೈದವರು ಹಣ ಮಾತ್ರದಿಂದಲೇ ಹೆಸರು ಮಾಡಿದವರಲ್ಲ, ಅವರು ಬಿಟ್ಟು ಹೋಗುವ ಜೀವನದ ಸತ್ಯಾರ್ಥಗಳು ಅವರುಗಳನ್ನು ಉತ್ತುಂಗಕ್ಕೆ ಏರಿಸುತ್ತವೆ.

ರಾಕೇಶ್ ಜುಂಜುನ್‌ವಾಲಾ 45,000 ಕೋಟಿಗೂ ಹೆಚ್ಚು ನಿವ್ವಳ ಮೌಲ್ಯದೊಂದಿಗೆ ನಿಧನರಾಗುವ ಮೊದಲು ಅವರಾಡಿರುವ ಮಾತುಗಳು ಬದುಕಿನ ನಿಜವಾದ ಸತ್ಯದ ಅರಿವಿನಿಂದ ಕೂಡಿವೆ, ಇವು ಹೊಸ ಪೀಳಿಗೆಗೆ ಹೊಸ ದಾರಿಯನ್ನು ತೋರಿಸುತ್ತವೆ.

ನಾನು ವ್ಯಾಪಾರ ಕ್ಷೇತ್ರದಲ್ಲಿ ಜಗತ್ತಿನಲ್ಲೇ ಯಶಸ್ಸಿನ ಶಿಖರವನ್ನು ತಲುಪಿಯಾಗಿದೆ, ಸಮಾಜದ ದೃಷ್ಟಿಯಲ್ಲಿ ನನ್ನ ಜೀವನವೇ ಸಾಧನೆ. ಆದರೆ, ನನಗೆ ಕೆಲಸ ಬಿಟ್ಟರೆ ಯಾವ ಸುಖವೂ ಇರಲಿಲ್ಲ. ಹಣವು ನಾನು ಬಳಸುವ ಸತ್ಯ ಮಾತ್ರವಾಗಿತ್ತು. ಅನಾರೋಗ್ಯದಿಂದ ಆಸ್ಪತ್ರೆಯ ಬೆಡ್ ಮೇಲೆ ಮಲಗಿ ಇಡೀ ಜೀವನವನ್ನು ಹಿಂತಿರುಗಿ ನೋಡಿದೆ ನಾನು ಹೆಮ್ಮೆ ಪಡುತ್ತಿದ್ದ ಹೆಸರು ಮತ್ತು ಹಣವು ಸಾಯುವ ಮೊದಲೇ ಮರೆಯಾಯಿತು ಮತ್ತು ನಿಷ್ಪ್ರಯೋಜಕ ಎಂದು ಅರಿತುಕೊಂಡೆ. ಕಾರನ್ನು ಓಡಿಸಲು ಇಲ್ಲವೇ ಹಣ ಸಂಪಾದಿಸಲು ಯಾರನ್ನಾದರೂ ನೇಮಿಸಿಕೊಳ್ಳಬಹುದು. ಆದರೆ, ರೋಗದಿಂದ ನರಳಲು ಮತ್ತು ಸಾಯುವುದಕ್ಕೆ ಬೇರೆ ಯಾರನ್ನೂ ನಿಯೋಜಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಸತ್ಯದ ಅರಿವಾಯಿತು. ಕಳೆದುಹೋದ ಭೌತಿಕ ವಸ್ತುಗಳನ್ನು ಮತ್ತೆ ವಾಪಸ್ಸು ಪಡೆಯಬಹುದು, ಆದರೆ ಜೀವನ ಎಂಬುದು ಕಳೆದುಹೋದರೆ ಎಂದಿಗೂ ಸಿಗುವುದಿಲ್ಲ. ಬದುಕಿನ ಯಾವುದೇ ಹಂತದಲ್ಲಿ ಇದ್ದರೂ ಯಾವ ಕ್ಷಣದಲ್ಲಿ ಹೃದಯ ನಿಲ್ಲುವುದನ್ನು ಎದುರಿಸಬಹುದು. ಕುಟುಂಬ, ಸಂಗಾತಿ ಮತ್ತು ಸ್ನೇಹಿತರನ್ನು ಪ್ರೀತಿಸಿ, ಅವರಿಗೆ ಮೋಸ ಮಾಡಕೂಡದು, ಎಂದಿಗೂ ಅಪ್ರಾಮಾಣಿಕ ಅಥವಾ ವಿಶ್ವಾಸಘಾತುಕರಾಗಬೇಡಿರೆಂದು ವಿನಂತಿಸುತ್ತೇನೆ.

ನಮಗೆ ವಯಸ್ಸು ಆಗುತ್ತಿದ್ದಂತೆ ಬುದ್ಧಿವಂತರಾಗುತ್ತಿರುತ್ತೇವೆ, ನಮಗೆ ತಿಳಿಯುತ್ತದೆ ಗಡಿಯಾರದ ಬೆಲೆ ಎಷ್ಟೇ ಇರಲಿ ಅದು ತೋರಿಸುವ ಸಮಯ ಮಾತ್ರ ಒಂದೇ ಇರುತ್ತದೆ ಎಂಬುದನ್ನು. ನಮ್ಮಲ್ಲಿರುವ ವ್ಯಾಲೆಟ್ ಬೆಲೆ 100 ಅಥವಾ 500 ಇರಲಿ ಆದರೆ ಅದರೊಳಗಿನ ಮೌಲ್ಯ ಒಂದೇ ಆಗಿರುತ್ತದೆ. ಗುರಿ ಮುಟ್ಟುವ ದಾರಿ ಮತ್ತು ದೂರ ಒಂದೇ ಆದರೂ ಓಡಿಸುವ ಕಾರಿನ ಬೆಲೆ 5 ರಿಂದ 50 ಲಕ್ಷಗಳ ಮೊತ್ತಗಳಾಗಿರುತ್ತದೆ, ಗುರಿ ತಲುಪುವುದು ಮುಖ್ಯ. ಒಂಟಿತನ ಎಂಬುದು ನಾವು ವಾಸಿಸುವ ಮನೆಯ ಚದರ ಅಳತೆಯ ಮೇಲೆ ನಿಂತಿರುವುದಿಲ್ಲ. ನಿಜವಾದ ಆಂತರಿಕ ಸಂತೋಷವು ಪ್ರಪಂಚದ ಭೌತಿಕ ವಸ್ತುಗಳಿಂದ ಬರುವುದಿಲ್ಲ ಎಂದು ತಿಳಿದುಕೊಳ್ಳುತ್ತೀರಿ. ವಿಮಾನದಲ್ಲಿ ಯಾವುದೇ ಕ್ಲಾಸ್‌ನಲ್ಲಿ ಕುಳಿತು ಪ್ರಯಾಣ ಮಾಡಿದರೂ ಅದು ಬಿದ್ದಾಗ ಎಲ್ಲರೂ ಮೇಲಕ್ಕೆ ಹೋಗಲೇಬೇಕು.

ಸಿರಿವಂತನಾಗಲು ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಡಿ, ಅವರಿಗೆ ಸಂತೋಷವಾಗಿರುವುದನ್ನು ಕಲಿಸಿ. ದೊಡ್ಡವರಾದ ಮೇಲೆ ಜೀವನದ ಬೆಲೆಗಿಂತ ವಸ್ತುವಿನ ಬೆಲೆ ಅವರಿಗೆ ತಿಳಿಯುತ್ತದೆ. ಜೀವನವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಆಸ್ಪತ್ರೆ, ಜೈಲು ಮತ್ತು ಸ್ಮಶಾನ, ಈ ಮೂರು ಸ್ಥಳಗಳಿಗೆ ಬೇಟಿ ನೀಡಿದರೆ ಆಸ್ಪತ್ರೆಯಲ್ಲಿ ಆರೋಗ್ಯಕ್ಕಿಂತ ಉತ್ತಮವಾದುದ್ದು ಯಾವುದೂ ಇಲ್ಲವೆನಿಸುತ್ತದೆ, ಜೈಲಿನಲ್ಲಿ ಸ್ವಾತಂತ್ರ್ಯ ಎಷ್ಟು ಅಮೂಲ್ಯವಾದುದ್ದೆಂದು ತಿಳಿಯುವುದು ಹಾಗೂ ಸ್ಮಶಾನದಲ್ಲಿ ಜೀವನವೂ ಏನೂ ಅಲ್ಲ ಎಂಬುದನ್ನು ಅರಿತುಕೊಳ್ಳುತ್ತೀರಿ. ಇಂದು ನಾವು ನಡೆಯುತ್ತಿರುವ ನೆಲ ನಾಳೆಗೆ ನಮ್ಮದಲ್ಲ. ಇಂಥ ಜೀವನದ ನಿರ್ವಿವಾದ ಸತ್ಯಗಳನ್ನು ಬದುಕಿನ ಕೊನೆಯಲ್ಲಿ ರಾಕೇಶ್ ರಾದೇಕೃಷ್ಣ ಜುಂಜುನ್ವಾಲಾ ಅವರು ಸಂಪತ್ತಿನ ಜೊತೆ ಜೀವನದ ನೈಜ ಸಂಪತ್ತನ್ನು ನಮಗೆಲ್ಲಾ ಬಿಟ್ಟು ಹೋಗಿದ್ದಾರೆ.

ನಾಲ್ವರು ಸಾಧಕರಿಗೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ

ಸಂಕ್ರಾಂತಿ ಸಂಭ್ರಮ ಅಂಗವಾಗಿ ಗಾಯನ ವೈಭವ



ರವಿ ಪಾಂಡವಪುರ, ಕೆ. ರಘುರಾಂ ವಾಜಪೇಯಿ, ಬಿ.ಎಂ. ರಾಮಚಂದ್ರ ಹಾಗೂ ಧರ್ಮಾಪುರ ನಾರಾಯಣ್ ಅವರಿಗೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ವೇಳೆ ಯುವ ಪರ್ವತಾರೋಹಿ ಸೂರ್ಯಕೃಷ್ಣ ಹಾಗೂ ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ. 16– ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನ ಹಾಗೂ ಗಾನ ನಂದನ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ 11ನೇ ವರ್ಷದ ರಾಜ್ಯಮಟ್ಟದ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿಯನ್ನು ನಾಲ್ವರು ಸಾಧಕರಿಗೆ ಪ್ರದಾನ ಮಾಡಲಾಯಿತು.

ಸಂಸ್ಕೃತಿ ಚಿಂತಕ ಕೆ. ರಘುರಾಂ ವಾಜಪೇಯಿ, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಶ್ರೀ ರಾಜರಾಜೇಶ್ವರಿ ವಸ್ತ್ರಾಲಂಕಾರದ ಸಂಸ್ಥಾಪಕ ಬಿ.ಎಂ. ರಾಮಚಂದ್ರು, ದೃಶ್ಯ ಮಾಧ್ಯಮ ವರದಿಗಾರ ರವಿ ಪಾಂಡವಪುರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು ಹಾಗೂ ಯುವ ಪರ್ವತಾರೋಹಿ ಸೂರ್ಯಕೃಷ್ಣ ಅವರನ್ನು ಅಭಿನಂದಿಸಲಾಯಿತು.

ಸಂಕ್ರಾಂತಿ ಹಬ್ಬದ ಪ್ರಯುಕ್ತವಾಗಿ ಸಂಕ್ರಾಂತಿ ಸಂಭ್ರಮ – ಸಂಗೀತ ಸಂಜೆ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಉದ್ಘಾಟಿಸಿದರು. ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜ್ ವಿ. ಭೈರಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ಮೈಸೂರು ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು ಅಲೆಯನ್ಸ್ ಜಿಲ್ಲಾ ರಾಜ್ಯಪಾಲ ಎಸ್. ವೆಂಕಟೇಶ್, ಜನಹಿತ ವಿವಿದೊದ್ದೇಶ ಸಹಕಾರ ಸಂಘದ ಅಧ್ಯಕ್ಷ ಪಡುವಾರ ಹಳ್ಳಿಯ ಭೈರಪ್ಪ, ಪಡುವಾರಹಳ್ಳಿ ಗ್ರಾಮೋಭ್ಯುದಯ ಸಂಘದ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ ಮುಖ್ಯ ಅತಿಥಿಗಳಾಗಿದ್ದರು. ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠನ ಹಾಗೂ ಗಾನನಂದನ ಅಧ್ಯಕ್ಷ ಎನ್. ಬೆಟ್ಟೇಗೌಡ ಸ್ವಾಗತಿಸಿದರು. ಡಾ.ವೈ.ಡಿ. ರಾಜಣ್ಣ ಪ್ರಾಸ್ತಾವಿಕ ಭಾಷಣ ಮಾಡಿದರು.

ನಂತರ ಎನ್. ಬೆಟ್ಟೇಗೌಡರ ಸಾರಥ್ಯದಲ್ಲಿ ಡಾ. ವೈ.ಡಿ. ರಾಜಣ್ಣ, ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ.ಎಸ್. ವಾಣಿ, ಶ್ವೇತಾ, ನಾಗೇಂದ್ರ, ಚಿನ್ನನಾಗಪ್ಪ ಹಾಗೂ ಶ್ರೇಯಾ ಪಿ. ಸಾರಥಿ ಗಾಯನ ಪ್ರಸ್ತುತಪಡಿಸಿದರು. ರೇವತಿ ಕೃಷ್ಣಪ್ಪ ಕಾರ್ಯಕ್ರಮ ನಿರೂಪಿಸಿದರು.

ಜ.17, ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಜ.16– ಮೈಸೂರಿನ ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಜ.17ರಂದು ಸಂಜೆ 4.30ರಿಂದ 5.30ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಥೆ ಹೇಳುವವರು: ಶ್ರೀಮತಿ ಸುಮಾ ಎಂ ನಾಗೇಂದ್ರ, ಕನ್ನಡ ಉಪನ್ಯಾಸಕರು, ಗೋಪಾಲಸ್ವಾಮಿ ಪದವಿ ಪೂರ್ವ ಕಾಲೇಜು, ಲಕ್ಷ್ಮೀಪುರಂ, ಮೈಸೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9243581097, 9945943115,

ಬಿಜೆಪಿಯಿಂದ ಸಂಕ್ರಾಂತಿ ಕಿಚ್ಚು

ಮೈಸೂರು, ಜ.16– ಸಂಕ್ರಾಂತಿ ಹಬ್ಬದ ಪ್ರಯುಕ್ತ ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ರೈತ ಮೋರ್ಚಾ ವತಿಯಿಂದ ರಾಮಕೃಷ್ಣನಗರದ ಜಿ.ಬ್ಲಾಕಿನಲ್ಲಿ ಸಾರ್ವಜನಿಕರಿಗೆ ಎಳ್ಳು–ಬೆಲ್ಲ ಹಂಚಿ, ಗೋಪೂಜೆ ಮಾಡಿ, ಗೋಗ್ರಾಸ ನೀಡಿ ರಂಗುರಂಗಾಗಿ ಸಿಂಗಾರಗೊಂಡಿದ್ದ ದನಗಳನ್ನು ಕಿಚ್ಚು ಹಾಯಿಸಲಾಯಿತು. ಗೋಮಾತೆಗೆ ಜೈಕಾರ ಹಾಕುತ್ತಾ ವಂದೇ ಗೋಮಾತರಮ್ ಘೋಷಣೆ ಮೊಳಗಿಸಲಾಯಿತು.

ರಾಮಕೃಷ್ಣನಗರ ಹಾಗೂ ಕುವೆಂಪುನಗರದ ಗೋಪಾಲಕರ ಹಳ್ಳಿಕಾರ್ ಹಾಗೂ ಗೀರ್ ತಳಿಯ ದನಗಳ ಜೊತೆ ಯಡಹಳ್ಳಿ, ಕೇರ್ಗಳ್ಳಿ ಸೇರಿದಂತೆ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮೀಣ ಭಾಗದ ಜೋಡೆತ್ತುಗಳು ಜನ ಮೆಚ್ಚುಗೆಗೆ ಪಾತ್ರವಾದವು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ರುದ್ರಮೂರ್ತಿ, ಹಿರಿಯ ಮುಖಂಡರಾದ ಎಸ್.ಆರ್. ಗೋಪಾಲ್ ರಾವ್, ಶಿವಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ರೈತ ಮೋರ್ಚಾ ನಗರ ಅಧ್ಯಕ್ಷ ದೇವರಾಜ್, ಮಂಡಲದ ಮೋರ್ಚಾ ಅಧ್ಯಕ್ಷ ಚಂದ್ರಶೇಖರಸ್ವಾಮಿ, ಮೋರ್ಚಾದ ನಗರ ಪ್ರಧಾನ ಕಾರ್ಯದರ್ಶಿ ಈರಪ್ಪ ಕಡಕೊಳ, ಮಂಡಲದ ಪ್ರಧಾನ ಕಾರ್ಯದರ್ಶಿ ಆರ್.ಸೋಮಶೇಖರ್, ಈರೇಗೌಡ, ಮೋರ್ಚಾದ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಎ. ರಾಘವೇಂದ್ರ ದೇವರಾಜ್, ಪದಾಧಿಕಾರಿಗಳಾದ ಮಂಜುನಾಥ್ ಅರಸ್, ಎನ್.ಶುಭಶ್ರೀ, ಗೋಪಾಲ್ ಅಯ್ಯಂಗಾರ್, ರಾಮಕೃಷ್ಣಪ್ಪ, ಎಸ್‌ಟಿ ಮೋರ್ಚಾ ನಗರ ಉಪಾಧ್ಯಕ್ಷರಾದ ಎಸ್ ತ್ಯಾಗರಾಜ್, ಪದಾಧಿಕಾರಿಗಳಾದ ವಿಜಯಾ ಮಂಜುನಾಥ್, ಶಿವು ಪಟೇಲ್, ನಾಗರಾಜ್ ಜನ್ನು, ಕಾಂತರಾಜ ಅರಸ್, ರಾಚಪ್ಪಾಜಿ, ತುಳಸಿ, ವಿವಿಧ ಮೋರ್ಚಾಗಳ ಪದಾಧಿಕಾರಿಗಳಾದ ಮಧು ಸೋಮಶೇಖರ್, ರಂಗೇಶ್, ಲಕ್ಷ್ಮಿ ಜಯಶಂಕರ್, ಚಂದನ್ ಗೌಡ, ಸಾಗರ್ ಸಿಂಗ್, ಸಿ.ರಾಘವೇಂದ್ರ, ಅವಿನಾಶ್, ಮಂಜುಳಾ, ಪುಟ್ಟಮ್ಮಣ್ಣಿ, ವಸುಮತಿ, ಮೈಸೂರು ಹನುಮಂತೋತ್ಸವ ಸಮಿತಿಯ ಸಂಜಯ್, ಸಾಮಾಜಿಕ ಕಾರ್ಯಕರ್ತರಾದ ಜಯಸಿಂಹ, ಅಪೂರ್ವ ಸುರೇಶ್, ದಯಾನಂದ್, ಮಿರ್ಲೆ ಫಣೀಶ್ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ನೂರಾರು ಸಾರ್ವಜನಿಕರು ಭಾಗವಹಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜನಪದ ಹಾಡಲ್ಲಿ ಡಾ. ಅಂಬೇಡ್ಕರ್ ಪೂರ್ಣ ಜೀವನ ಕಟ್ಟಿಕೊಡುವ ಯಶಸ್ವಿ ಸಾಹಸ

ಮೈಸೂರು ಗುರುರಾಜರ ಪ್ರಯತ್ನಕ್ಕೆ ಅತೀವ ಮೆಚ್ಚುಗೆ



ಮೈಸೂರು ಗುರುರಾಜ್ ಮತ್ತು ತಂಡದವರಿಂದ 'ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆ ಜಾನಪದ ಗಾಯನ ಪ್ರಸ್ತುತಪಡಿಸಲಾಯಿತು.

ಮೈಸೂರು, ಜ.16(ವಿವಿಹೆಚ್)– ಚಿಕ್ಕ ವಯಸ್ಸಿನಲ್ಲಿಯೇ ನೋವು, ಅವಮಾನ, ಶೋಷಣೆ, ಹಿಂಸೆ, ಅಸ್ಪೃಶ್ಯತೆಗಳೆಂಬ ಕಂಟಕಗಳಿಂದ ಬಂಧಿಯಾಗಿ, ಸಮ ಸಮಾಜ ನಿರ್ಮಾಣದ ಜೊತೆಗೆ ಸಮಾನತೆಯ ಸಾರಿದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಜಾನಪದ ಕಥಾ ಹಂದರ ರಂಗಾಯಣದ ಮೂಲೆ–ಮೂಲೆಗಳಲ್ಲಿ ಮಾರ್ಧನಿಸುತ್ತಿದೆ..

ಕಲಾಮಂದಿರದ ಆವರಣದ ಕಿಂದರಿ ಜೋಗಿ ಆವರಣದಲ್ಲಿ ನಡೆದ ಜನಪದೋತ್ಸವದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಖ್ಯಾತ ಜಾನಪದ ಗಾಯಕ ಮೈಸೂರು ಗುರುರಾಜ್ ನೀಲಗಾರರ ಕಂಚಿನ ಕಂಠದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆ ಪ್ರಸ್ತುತಿಗೆ ಪ್ರೇಕ್ಷಕರು ಮೂಕ ಸ್ತಬ್ಧರಾಗಿ ಕಣ್ಣೀರ ಜಿನುಗಿಸಿದರು.

ಸಿದ್ದಪ್ಪಾಜಿ, ಮಂಟೇಸ್ವಾಮಿ, ಬಿಳಿಗಿರಿರಂಗನಾಥ, ಮಲೆ ಮಹದೇಶ್ವರ, ಚಾಮುಂಡೇಶ್ವರಿ, ನಂಜುಂಡೇಶ್ವರ ಜೀವನ ಚರಿತ್ರೆಯನ್ನು ರಾಜ್ಯಾದ್ಯಂತ ವಿಸ್ತರಿಸಿದ ಜಾನಪದ ಗಾಯಕ ಮೈಸೂರು ಗುರುರಾಜ್ ಇದೇ ಮೊದಲ ಬಾರಿಗೆ ಬಾಬಾ ಸಾಹೇಬರ ಜೀವನ ಚರಿತ್ರೆಯನ್ನು ನೀಲಗಾರರ ಹಾಡಿನ ಶೈಲಿಯಲ್ಲಿ ಹಾಡುವ ಮೂಲಕ ಎಲ್ಲರ ಮನ ಮುಟ್ಟಿಸುವಲ್ಲಿ ಯಶಸ್ವಿಯಾದರು. ಆ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ನೀಲಗಾರರ ಶೈಲಿಯಲ್ಲಿ ಹಾಡುವ ಹೊಸ ಪ್ರಯೋಗಕ್ಕೆ ಬಾಬಾ ಸಾಹೇಬ್ ಆಶಯದ ಬಹುರೂಪಿ ಸಾಕ್ಷಿಯಾಯಿತು.



ರಾಣೆಬೆನ್ನೂರಿನ ಬಸವರಾಜ್ ಮತ್ತು ತಂಡ ಪ್ರಸ್ತುತ ಪಡಿಸಿದ 'ನಂದಿ ಕೋಲು' ನೃತ್ಯ ಪ್ರದರ್ಶನ

ಗುರುರಾಜ್ ಮತ್ತು ತಂಡ ಮುದ್ದು ಭೀಮ ರಾಯನಿಗೆ ಜೋ.. ಎನ್ನಿರಿ.. ಜೋ... ಜೋ.. ಜೋ.. ಜೋ.. ಜೋ ಎನ್ನಿರಿ... ಹಾಡು ಹಾಡುವ ಮೂಲಕ ಪ್ರಾರಂಭಿಸಿ, ಅವರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ದಾಂಪತ್ಯದ ಬದುಕು, ಸಂವಿಧಾನ ಬರೆದ ಬಗೆಗೆ ಹಾಡಿದ ಹಾಡುಗಳಿಗೆ ನೆರೆದಿದ್ದವರು ತಲೆದೂಗಿದರು.

'ಭೀಮರು ಬಂದರು ಸಂವಿಧಾನ ಹೊತ್ತು ತಂದರು....', 'ಸತ್ಯವಂತರ ಕಥೆಯ ಉತ್ತಮ ಉತ್ತಮರು ಕೇಳಿ' ಹೀಗೆ ಹಲವಾರು ಗೀತೆಗಳನ್ನು ಹಾಡುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆಗೆ ಜಾನಪದ ಲೇಪನ ಹಚ್ಚಿ ನೂತನ ಪ್ರಯೋಗದಲ್ಲಿ ಯಶಸ್ವಿಯಾದರು.

ಗೀಗಿ ಪದ ಮೋಡಿ: ಇದಕ್ಕೂ ಮುನ್ನ ವೀರಣ್ಣ ಮತ್ತು ತಂಡ ಮೈಸೂರಿನ ಬಹುರೂಪಿ ನಾಟಕೋತ್ಸವ ಕುರಿತು ಗೀಗಿ ಪದ ಹಾಡಿ ಮೆಚ್ಚುಗೆ ಪಡೆದರು. 'ಜನಪದ ಉತ್ಸವ ಆಯ್ತಿ, ಕರಕುಶಲದ ಮಳಿಗೆಯು ನಿಮ್ಮ ಕರೆತವ ಕೈ ಹಿಡಿದು', 'ವಿಚಾರ ಸಂಕಿರಣದಲ್ಲಿ ವಿಚಾರ ಮಾಡಿ ಬುದ್ಧಿ ಹೇಳುತ್ತಾರೆ ನಮಗೆ', 'ಬಹು ರೂಪಿ ರಾಷ್ಟ್ರೀಯ ಉತ್ಸವದ ಬೆಳ್ಳಿಹಬ್ಬದ ಸಂಭ್ರಮ', 'ಬಾಬಾ ಸಾಹೇಬರ ಸುದೈವಕ್ಕೆ ಹಾಡಲ್ಲಿ ನಮ್ಮ ಭಾವ' ಎಂದು ಗೀಗಿ ಪದ ಕಟ್ಟಿ ಹಾಡಿದರು. ಕಂಸಾಳೆ, ತಂಬೂರಿ ತಮಟೆ ಏಟಿಕೆ ಮನಸೋತ ಪ್ರೇಕ್ಷಕ ಮಹೋದಯರು ಶಿಳ್ಳೆ, ಚಪ್ಪಾಳೆ ಮೂಲಕ ಹುರಿದುಂಬಿಸಿದರು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಬಸವರಾಜ್ ಮತ್ತು ತಂಡ ಪ್ರಸ್ತುತಪಡಿಸಿದ 'ನಂದಿ ಕೋಲು' ನೃತ್ಯ ಪ್ರದರ್ಶನ ನೆರೆದಿದ್ದವರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು.

ಗಮನಸೆಳೆದ ನಾಟಕಗಳು: ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕ ತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಜನಪದೋತ್ಸವ ಗೀತಾ ಅವರು ಕಲಾವಿದರಿಗೆ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಿದರು.

ವನರಂಗದಲ್ಲಿ ಮೈಸೂರಿನ ನಾಲ್ವಡಿ ಸೋಶಿಯಲ್ ಕಲ್ಚರಲ್ & ಎಜುಕೇಷನಲ್ ಟ್ರಸ್ಟ್ ವತಿಯಿಂದ ಕನ್ನಡ ಭಾಷೆಯ 'ಆಳಿದ ಮಹಾಸ್ವಾಮಿಗಳು', ಕಿರುರಂಗ ಮಂದಿರದಲ್ಲಿ ಶಬ್ದ್ ಥಿಯೇಟರ್ ತಂಡದಿಂದ ಹಿಂದಿ ಭಾಷೆಯ 'ಸಿಫಾರ್', ಕಲಾಮಂದಿರದಲ್ಲಿ ಉಜ್ಜೈನ್ ಅಂಕೂರ್ ರಂಗಮಂಚ್ ಸಮಿತಿಯ ಹಿಂದಿ ಭಾಷೆಯ 'ಅಂಬೇಡ್ಕರ್ ಕ ಬಚ್ಪನ್', ಭೂಮಿಗೀತದಲ್ಲಿ ಚಂದ್ರಾಪುರ ಲೋಕ್‌ಜಾಗೃತಿ ನಾಟ್ಯ ಸಂಸ್ಥೆ ತಂಡದಿಂದ ಮರಾಠಿ ಭಾಷೆಯ ತೃತೀಯ ರತ್ನ ನಾಟಕವನ್ನು ಪ್ರಸ್ತುತ ಪಡಿಸಲಾಯಿತು.

ಜನಮನ ಗೆದ್ದ ಚಿತ್ರೋತ್ಸವ: ಬಹುರೂಪಿ ಚಲನಚಿತ್ರೋತ್ಸವದಲ್ಲಿ ರಂಗಾಯಣದ ಶ್ರೀರಂಗ ರಂಗಮಂದಿರದಲ್ಲಿ ಸಾಮಾಜಿಕ ಮೌಲ್ಯ ಬಿತ್ತುವ ಚಿತ್ರಗಳು ಜನಮನ ಗಳಿಸಿದವು. ಕನ್ನಡ ಭಾಷೆಯ 'ಕರ್ನಾಟಕದಲ್ಲಿ ಅಂಬೇಡ್ಕರ್ ಹೆಜ್ಜೆಗಳು', 'ಋತುಮತಿ', ಹಾಗೂ 'ಪಲ್ಲಟ' ಚಿತ್ರಗಳು ಪ್ರದರ್ಶನಗೊಳ್ಳುವ ಮೂಲಕ ಜನಮನ ಗೆದ್ದವು.

ಸಾರಾ–ಸಿದ್ದೇಗೌಡರ ಭೇಟಿ



ಜೆಡಿಎಸ್ ತೊರೆದು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾದ ಮೈಮುಲ್ ಮಾಜಿ ಅಧ್ಯಕ್ಷರೂ ಆದ ಮಾವಿನಹಳ್ಳಿ ಸಿದ್ದೇಗೌಡರ ತೋಟದ ಮನೆಗೆ ಜೆಡಿಎಸ್ ನಾಯಕ ಸಾ.ರಾ.ಮಹೇಶ್ ಗುರುವಾರ ಭೇಟಿ ನೀಡಿ, ಮಕರ ಸಂಕ್ರಾಂತಿ ಶುಭಾಶಯ ಕೋರಿದರು. ಈ ವೇಳೆ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಸುಮಾರು ಒಂದೂವರೆ ಗಂಟೆ ಚರ್ಚೆ ನಡೆಸಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಉಪಸ್ಥಿತರಿದ್ದರು. ಸಾ.ರಾ.ಮಹೇಶ್ ಮುಂದಿನ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆಂಬ ಸಿ.ಎನ್.ಮಂಜೇಗೌಡರ ಹೇಳಿಕೆ ಬೆನ್ನಲ್ಲೇ ಈ ಭೇಟಿ ಮಹತ್ವ ಪಡೆದಿದೆ.

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿವಿ ಪ್ರವೇಶಕ್ಕೆ ಆಹ್ವಾನ


ಮೈಸೂರು, ಜ.16(ಜಿಎ)–ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾನಿಲಯದಲ್ಲಿ ನೂತನ ಸಾಲಿಗೆ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ 2026 ರ ಅವಧಿಗೆ ಪ್ರವೇಶ ಪಡೆಯಬಯಸುವವರು ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿನ ಘಟಕವನ್ನು ಸಂಪರ್ಕಿಸುವಂತೆ ಎಂದು ಅಧ್ಯಯನ ಕೇಂದ್ರದ ಸಂಯೋಜಕ ಡಾ.ಬಿ.ಎಸ್.ಶ್ರೀಹರ್ಷ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಬಿಎಎಂ, ಬಿಸಿಕೊಎಂಎಫ್, ಬಿಎಸ್‌ಸಿಎಂ ಕಾರ್ಯಕ್ರಮಗಳಿಗೆ ವಾರ್ಷಿಕ ಆದಾಯ 2.5 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ಶೇ.50 ವಿನಾಯಿತಿ ಇದೆ ಎಂದರು.

ಪ್ರಾದೇಶಿಕ ಸಹಾಯಕ ನಿರ್ದೇಶಕರಾದ ಡಾ.ಹೆಚ್.ಸಿ. ಹೇಮಾ ಮಾಲಿನಿ ಮಾತನಾಡಿ, ವಿವಿಯ ಬೆಂಗಳೂರು ಪ್ರಾದೇಶಿಕ ಕೇಂದ್ರದ ವೆಬ್‌ಸೈಟ್‌ನಲ್ಲಿ ಅಧ್ಯಯನ ಕೇಂದ್ರಗಳ ವಿವರ ಲಭ್ಯವಿವೆ. ಎಂಬಿಎಗೆ ವಿವಿಯಲ್ಲಿ ನೇರ ಪ್ರವೇಶ ಒದಗಿಸುತ್ತಿದೆ. ಪ್ರವೇಶಾತಿ ಸಂದರ್ಭದಲ್ಲಿ ಗೊಂದಲವುಂಟಾದಲ್ಲಿ ವಾಟ್ಸಪ್ ಸಂಖ್ಯೆ 944933 7272ಕ್ಕೆ ಕರೆ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ 0821– 2423374 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಹ ಸಂಯೋಜಕ ಪ್ರೊ. ಸಿದ್ದರಾಜು ಉಪಸ್ಥಿತರಿದ್ದರು.

ಮೈಸೂರಲ್ಲಿ ಹೊರ ರಾಜ್ಯದ ಭಿಕ್ಷುಕರ ಹಾವಳಿ

● ಭಿಕ್ಷಾಟನೆ ಮುಕ್ತ ನಗರ ಯೋಜನೆಗೆ ತೀವ್ರ ಹಿನ್ನಡೆ ● ವ್ಯಾಪಾರಕ್ಕೆ ಬಂದ ಹೊರ ರಾಜ್ಯದ ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳಿಂದ ಭಿಕ್ಷಾಟನೆ ● ಸಿಗ್ನಲ್‌ಗಳೇ ಇವರ ಸಂಪಾದನೆ ಸ್ಥಳ ● ವಾಹನ ಚಾಲಕರು, ಸವಾರರಿಗೆ ಕಿರಿಕಿರಿ; ಅಪಘಾತದ ಆತಂಕ





ಮೈಸೂರಿನ ಪಡುವಾರಹಳ್ಳಿ ವೃತ್ತದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಹೊರ ರಾಜ್ಯದ ಮಹಿಳೆಯರು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ವ್ಹೀಲ್ ಚೇರ್‌ನಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಹಿಳೆಯನ್ನು ಕಾಣಬಹುದು.

ಮೈಸೂರು, ಜ.16(ಎಂಟಿವೈ)–ಮೈಸೂರನ್ನು ಭಿಕ್ಷುಕರ ಮುಕ್ತ ನಗರವಾಗಿಸಲು ಈ ಹಿಂದೆ ರೂಪಿಸಿದ್ದ ಯೋಜನೆ ಫಲಪ್ರದವಾಗುವ ನಿರೀಕ್ಷೆಯಲ್ಲಿದ್ದಾಗಲೇ ಇದೀಗ ಅನ್ಯ ರಾಜ್ಯದ ಭಿಕ್ಷುಕರು ಪ್ರಮುಖ ರಸ್ತೆ, ವೃತ್ತಗಳಲ್ಲಿ ಭಿಕ್ಷಾಟನೆಗಿಳಿದು ಮೈಸೂರಿನ ಘನತೆ–ಗೌರವ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದ ವೇಳೆ ವಿವಿಧ ಆಟಿಕೆ ಸೇರಿದಂತೆ ನಾನಾ ವಸ್ತುಗಳನ್ನು ಮಾರಾಟ ಮಾಡಲು ಉತ್ತರ ಭಾರತದ ಕೆಲ ರಾಜ್ಯಗಳಿಂದ ಮೈಸೂರಿಗೆ ಬಂದಿದ್ದವರಲ್ಲಿ ಹಲವರು ಇಂದಿಗೂ ಮೈಸೂರಲ್ಲೇ ವಾಸ್ತವ್ಯ ಹೂಡಿದ್ದು, ರಿಂಗ್ ರಸ್ತೆ ಜಂಕ್ಷನ್ ಸೇರಿದಂತೆ ಮೈಸೂರಿನ ವಿವಿಧ ಸರ್ಕಲ್‌ಗಳಲ್ಲಿ ನಾನಾ ವಸ್ತುಗಳ ಮಾರಾಟದಲ್ಲಿ ತೊಡಗಿದ್ದಾರೆ. ಅವರಲ್ಲಿ ಹಿರಿಯ ನಾಗರಿಕರು, ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ. ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮುಜುಗರ ಉಂಟಾಗುತ್ತಿದ್ದು, ಸಾಂಸ್ಕೃತಿಕ ನಗರಿಯಲ್ಲಿ ಭಿಕ್ಷುಕರ ಹಾವಳಿ ಹೆಚ್ಚಾಗಿದೆ ಎಂಬ ಸಂದೇಶ ರವಾನೆಯಾಗುವ ಆತಂಕವಿದೆ.

ಭಿಕ್ಷುಕರ ಪುನರ್ವಸತಿ ಕೇಂದ್ರ ಮೈಸೂರು ನಗರವನ್ನು ಭಿಕ್ಷುಕರ ಮುಕ್ತ ನಗರವನ್ನಾಗಿಸಲು ಜಿಲ್ಲಾಡಳಿತ ಯೋಜನೆ ರೂಪಿಸಿ, ಜ್ಯೋತಿನಗರದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರ ಸ್ಥಾಪಿಸಿ, ಆ ಮೂಲಕ ಕಾರ್ಯಾಚರಣೆ ನಡೆಸಿ, ಮೈಸೂರಿನಲ್ಲಿ ಭಿಕ್ಷೆ ಬೇಡುತ್ತಿದ್ದವರ ರಕ್ಷಣೆ ಮಾಡಿ, ಪುನರ್ವಸತಿ ಕೇಂದ್ರಕ್ಕೆ ಕರೆದೊಯ್ದು, ಬಳಿಕ ಅವರ ಕುಟುಂಬ ಸದಸ್ಯರನ್ನು ಸಂಪರ್ಕಿಸಿ ಮರಳಿ ಮನೆ ಸೇರಿಸುವ ಪ್ರಯತ್ನ ಮಾಡಲಾಗುತ್ತಿತ್ತು. ನಿರ್ಗತಿಕರಾಗಿದ್ದರೆ ಅಂತಹವರನ್ನು ಪುನರ್ವಸತಿ ಕೇಂದ್ರದಲ್ಲಿಯೇ ಪಾಲನೆ ಮಾಡಲಾಗುತ್ತಿತ್ತು. ಹಾಗಾಗಿ ಮೈಸೂರಲ್ಲಿ ಭಿಕ್ಷುಕರ ಹಾವಳಿ ಸಂಪೂರ್ಣ ನಿಯಂತ್ರಣಕ್ಕೆ ಬಂದಿತ್ತು.

ಮೈಸೂರಿನ ಸುರಕ್ಷತೆಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು

ಮೈಸೂರಿನ ಸುರಕ್ಷತೆಯ ಹಿತದೃಷ್ಟಿಯಿಂದ ಜಿಲ್ಲಾಡಳಿತ ಮತ್ತು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಬೇಕು. ಭಿಕ್ಷಾಟನೆ ತಡೆಗಟ್ಟದಿದ್ದರೆ, ವಿದೇಶ, ಹೊರ ರಾಜ್ಯಗಳಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮುಜುಗರವಾಗುತ್ತದೆ. ಮೈಸೂರು ಭಿಕ್ಷುಕರಿಂದಲೇ ತುಂಬಿದೆ ಎಂಬ ತಪ್ಪು ಸಂದೇಶ ರವಾನೆಯಾಗುತ್ತದೆ. ಈ ನಿಟ್ಟಿನಲ್ಲಿ ಮೈಸೂರಿನ ಪಾರಂಪರಿಕತೆ ಹಾಗೂ ಪ್ರಖ್ಯಾತಿಗೆ ಧಕ್ಕೆಯಾಗುವಂತಹ ಯಾವುದೇ ಪ್ರವೃತ್ತಿಯನ್ನು ಪ್ರೋತ್ಸಾಹಿಸಬಾರದು.

– ಎಂ.ಎಸ್.ಗುರುರಾಜ ಶೆಟ್ಟಿ, ಪ್ರಮೋದ್‌ಗೌಡ, ಮೈಸೂರು ರಕ್ಷಣಾ ವೇದಿಕೆ

ವ್ಯಾಪಾರದ ಸೋಗು: ಹೊರ ರಾಜ್ಯಗಳಿಂದ ವ್ಯಾಪಾರ ಮಾಡಲು ಬಂದಿರುವ ಕೆಲವರು ಸುಲಭ ಸಂಪಾದನೆಯತ್ತ ಮುಖ ಮಾಡಿದ್ದಾರೆ. ಭಿಕ್ಷಾಟನೆಗೆ ಆಕ್ಷೇಪ ವ್ಯಕ್ತವಾಗಬಹುದೆಂಬ ಕಾರಣದಿಂದ ಕೆಲವರು ಕೈಯ್ಯಲ್ಲಿ ಪೆನ್ನು, ಬಟ್ಸ್ ಮಾರಾಟದ ನೆಪದಲ್ಲಿ ಸಿಗ್ನಲ್‌ಗಳಲ್ಲಿ ನಿಂತಿರುತ್ತಾರೆ. ವಾಹನ ಸವಾರರು ಅವರಿಂದ ಯಾವುದೇ ವಸ್ತು ಖರೀದಿಸದಿದ್ದರೆ, ಊಟ ಮಾಡಿಲ್ಲ, ಔಷಧಿ ಬೇಕು ಎಂದು ಹಣಕ್ಕೆ ಪೀಡಿಸುತ್ತಿದ್ದಾರೆ.

ಅಪಘಾತದ ಆತಂಕ: ಕೆ.ಆರ್.ವೃತ್ತ, ಜೆ.ಕೆ. ಮೈದಾನದ ಬಳಿಯಿರುವ ಸಿಗ್ನಲ್, ಬಂಬೂಬಜಾರ್ ಸಿಗ್ನಲ್, ಮೆಟ್ರೋಪೋಲ್ ಸಿಗ್ನಲ್, ಪಾಠಶಾಲೆ ಸಿಗ್ನಲ್, ಪಡುವಾರಹಳ್ಳಿ ಸರ್ಕಲ್, ಹೂಟಗಳ್ಳಿ ಸರ್ಕಲ್, ಬಿ.ಸಿ.ಲಿಂಗಯ್ಯ ವೃತ್ತ ಸೇರಿದಂತೆ ವಿವಿಧೆಡೆ ವ್ಹೀಲ್ ಚೇರ್‌ನಲ್ಲಿ ವೃದ್ಧೆಯೊಬ್ಬರನ್ನು ಕೂರಿಸಿಕೊಂಡು ರಸ್ತೆ ಮಧ್ಯೆ ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ. ಅಲ್ಲದೆ, ಊರುಗೋಲು ಹಿಡಿದು ವೃದ್ಧರು ಸಿಗ್ನಲ್‌ನಲ್ಲಿ ಭಿಕ್ಷೆ ಬೇಡುವುದರಿಂದ ಹಸಿರು ಸಿಗ್ನಲ್ ಬರುತ್ತಿದ್ದಂತೆ ವಾಹನ ಚಲಿಸಲಾರಂಭಿಸುತ್ತವೆ. ಹಿಂದೆ ಇರುವ ವಾಹನ ಸವಾರರಿಗೆ ರಸ್ತೆ ಮಧ್ಯೆ ನಿಂತಿರುವ ಭಿಕ್ಷುಕರು ಕಾಣಿಸದೆ ಅಪಘಾತ ಸಂಭವಿಸುವ ಆತಂಕವಿದೆ. ಹಲವು ಸಂದರ್ಭದಲ್ಲಿ ಕೂದಲೆಳೆ ಅಂತರದಲ್ಲಿ ಅಪಘಾತ ತಪ್ಪಿವೆ. ಕೂಡಲೇ ಪೊಲೀಸರು ಹಾಗೂ ಸಂಬಂಧಪಟ್ಟವರು ಸಿಗ್ನಲ್‌ಗಳಲ್ಲಿ ಭಿಕ್ಷಾಟನೆ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವಾಹನ ಸವಾರರು ಒತ್ತಾಯಿಸಿದ್ದಾರೆ.

ಗ್ಲಾಸ್ ಒರೆಸುವ ಕಾಯಕ: ಕೆಲವರು ಸಿಗ್ನಲ್‌ಗಳಲ್ಲಿ ನಿಂತಿರುವ ಕಾರ್‌ಗಳ ಮುಂಭಾಗದ ಗ್ಲಾಸ್‌ಗೆ ಏಕಾಏಕಿ ಸೋಪ್ ಮಿಶ್ರಿತ ನೀರನ್ನು ಚಿಮುಕಿಸಿ, ಗ್ಲಾಸ್ ಒರೆಸಲು ಆರಂಭಿಸುತ್ತಾರೆ. ಬಳಿಕ ಹಣಕ್ಕೆ ಪೀಡಿಸುತ್ತಿದ್ದಾರೆ. ಒಬ್ಬೊಬ್ಬರು ಬೆಳಗ್ಗಿನಿಂದ ರಾತ್ರಿವರೆಗೆ 50 ರಿಂದ 100 ಕಾರ್‌ಗಳ ಕ್ಲೀನ್ ಮಾಡುವ ಮೂಲಕ ನೂರಾರು ರೂ. ಗಿಟ್ಟಿಸುತ್ತಾರೆ. ಆದರೆ ಸಂಚಾರಕ್ಕೆ ಇದರಿಂದ ಸಮಸ್ಯೆ ಎದುರಾಗುತ್ತಿದೆ. ಸುಲಭ ಮಾರ್ಗದಲ್ಲಿ ಹಣ ಸಂಪಾದಿಸುವ ಮಾರ್ಗ ಕಂಡುಕೊಂಡಿರುವ ಹೊರ ರಾಜ್ಯದವರು ಸರ್ಕಲ್‌ಗಳಲ್ಲಿ ಈ ಕಾಯಕವನ್ನೇ ಖಾಯಂ ಮಾಡಿಕೊಂಡಂತಿದೆ.

ಬಹುರೂಪಿಗೆ ಬಹುವಾದ್ಯಗಳ ಮೆರುಗು



ಬಹುರೂಪಿಯಲ್ಲಿ ಜನರನ್ನು ಆಕರ್ಷಿಸುತ್ತಿರುವ ಬಹುವಾದ್ಯಗಳ ಮಳಿಗೆ.

ಮೈಸೂರು, ಜ.16– ಮೈಸೂರು ರಂಗಾಯಣದಲ್ಲಿ ಕಳೆಗಟ್ಟಿರುವ 'ಬಹುರೂಪಿ ಬಾಬಾ ಸಾಹೇಬ ರಾಷ್ಟ್ರೀಯ ನಾಟಕೋತ್ಸವ' ನಾಟಕ ಪ್ರದರ್ಶನದೊಂದಿಗೆ ಜಾನಪದ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನೊಳಗೊಂಡ ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುತ್ತಿದೆ.

ಹಾಗೆಯೇ ಜನಪದ ಕಲೆಗಳಲ್ಲಿ ಬಳಸುವಂತಹ ದಮ್ಮಡಿ, ಜಂಟಿ, ತಮಟೆ, ಚರ್ಮ ತಮಟೆ, ಚಂಡ, ನಗು, ಡೊಳ್ಳು, ಪಟ, ತಾಳ, ಕಂಸಾಳೆ ಸೇರಿದಂತೆ ಅನೇಕ ಜಾನಪದ ಕಲಾ ವಸ್ತುಗಳನ್ನು ಜನಪ್ರಿಯ ಜನಪದ ಕಲಾವಿದರಾದ ಸಿ.ಸುಂದರೇಶ್ ಒಂದೇ ಸೂರಿನಡಿ ಅನಾವರಣಗೊಳಿಸಿದ್ದಾರೆ.

ನಾಟಕೋತ್ಸವಕ್ಕೆ ಆಗಮಿಸಿದ ಜಾನಪದ ಕಲಾವಿದರು ಈ ವಾದ್ಯಗಳ ಬಗ್ಗೆ ಕುತೂಹಲದಿಂದ ಮಾಹಿತಿ ಪಡೆದು, ತಮಗೆ ಇಷ್ಟವಾಗಿದ್ದನ್ನು ಖರೀದಿಸುತ್ತಿದ್ದಾರೆ. ಕಲಾವಿದರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿರುವುದು ಜನಪದ ಕಲೆಗಳ ಸಂರಕ್ಷಣೆಗೆ ಸಹಕಾರಿಯಾಗಲಿವೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಗ್ರಾಮೀಣ ಬದುಕಿನ ಭಾಗವಾಗಿರುವ ಜಾನಪದ ವಾದ್ಯಗಳು ನಮ್ಮ ಸಂಸ್ಕೃತಿಯ ಜೀವಂತ ಸಾಕ್ಷಿಯಾಗಿದೆ. ಶತಮಾನಗಳಿಂದ ಜನಪದ ಕಲೆಗಳೊಂದಿಗೆ ಬೆಸೆದುಕೊಂಡಿರುವ ಈ ವಾದ್ಯಗಳು ಹಬ್ಬ, ಜಾತ್ರೆ, ದೇವರ ಉತ್ಸವ ಮತ್ತು ಜನಪದ ನಾಟಕಗಳಲ್ಲಿ ತಮ್ಮದೇ ಮಹತ್ವ ಪಡೆದಿವೆ. ಇಂತಹ ಪಾರಂಪರಿಕ ವಾದ್ಯಗಳನ್ನು ಬಹುರೂಪಿಯಂತಹ ದೊಡ್ಡ ನಾಟಕೋತ್ಸವದಲ್ಲಿ ಪರಿಚಯಿಸಿರುವುದು, ಜನಪದ ಪರಂಪರೆಯ ಉಳಿವಿಗೆ ಸಹಕಾರಿಯಾಗಿದೆ.

ನಾಟಕೋತ್ಸವಕ್ಕೆ ಆಗಮಿಸಿರುವ ವಿವಿಧ ರಾಜ್ಯಗಳ ಕಲಾವಿದರು, ಸಂಶೋಧಕರು ಹಾಗೂ ಕಲಾಸಕ್ತರು ವೈವಿಧ್ಯಮಯ ವಾದ್ಯಗಳ ಬಗ್ಗೆ ಕುತೂಹಲದಿಂದ ಮಾಹಿತಿ ಪಡೆಯುತ್ತಿದ್ದಾರೆ. ತಮ್ಮ ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೊಸದಾಗಿ ಬಳಸುವ ಉದ್ದೇಶದಿಂದ ವಾದ್ಯಗಳನ್ನು ಖರೀದಿಸುತ್ತಿದ್ದಾರೆ. ಅಪರೂಪದ ವಸ್ತುಗಳನ್ನು ಸಂಗ್ರಹಿಸುವ ಆಸಕ್ತರೂ ಕೊಂಡೊಯ್ಯುತ್ತಿದ್ದಾರೆ. ಈ ಜಾನಪದ ವಾದ್ಯಗಳು ನಾಟಕೋತ್ಸವದ ಮೆರಗು ಹೆಚ್ಚಿಸಿವೆ. ಜನಪದ ಕಲೆಗಳ ಉತ್ತೇಜನಕ್ಕೂ ನೆರವಾಗಿದೆ.

ಬೃಹನ್ ಮುಂಬೈ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಮೈತ್ರಿ ಜಯಭೇರಿ: ಮೈಸೂರಲ್ಲಿ ವಿಜಯೋತ್ಸವ



ಮಹಾರಾಷ್ಟ್ರದ ಬೃಹನ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಮಿತ್ರ ಪಕ್ಷಗಳ ಭರ್ಜರಿ ಜಯಭೇರಿ ಹಿನ್ನೆಲೆ ಮೈಸೂರಿನ ಬಿಜೆಪಿ ಕಚೇರಿ ಎದುರು ವಿಜಯೋತ್ಸವ ಆಚರಿಸಲಾಯಿತು.

ಮೈಸೂರು, ಜ.16(ಎಂಕೆ)– ಮಹಾರಾಷ್ಟ್ರದ ಬೃಹತ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಮಿತ್ರ ಪಕ್ಷಗಳ ಜಯಭೇರಿ ಹಿನ್ನೆಲೆ ಮೈಸೂರಿನಲ್ಲಿ ಬಿಜೆಪಿ ವತಿಯಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿ ಎದುರು ಜಮಾವಣೆಗೊಂಡ ಮುಖಂಡರು, ಕಾರ್ಯಕರ್ತರು ಬಿಜೆಪಿ ಬಾವುಟಗಳನ್ನಿಡಿದು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಜಯಘೋಷಣೆ ಕೂಗುತ್ತಾ ಸಿಹಿ ವಿತರಿಸುವ ಮೂಲಕ ವಿಜಯೋತ್ಸವ ಆಚರಿಸಿದರು.

ಬಳಿಕ ಬಿಜೆಪಿ ನಗರಾಧ್ಯಕ್ಷ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಳೆದ 30 ವರ್ಷದ ನಂತರ ಇಡೀ ಮಹಾರಾಷ್ಟ್ರ ರಾಜ್ಯದಲ್ಲಿ ಬಿಜೆಪಿ ಅಲೆ ಎದ್ದಿದೆ. ಮುಂಬೈ ಮಹಾನಗರ ಪಾಲಿಕೆ ಚುನಾವಣೆ ಮಾತ್ರವಲ್ಲದೆ ಅಲ್ಲಿ ಜಿಪಂ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ರಾಜ್ಯ ಸರ್ಕಾರದ ಕಾರ್ಯಕ್ರಮಗಳಿಗೆ ಒಲಿದ ಜಯ ಇದಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಬೆಂಗಳೂರು ನಗರ ಪಾಲಿಕೆ, ಮೈಸೂರು ನಗರಪಾಲಿಕೆ ಚುನಾವಣೆಯಲ್ಲೂ ಬಿಜೆಪಿ ಜಯ ನಿಶ್ಚಿತವಾಗಿದ್ದು, ಮುಂಬೈ ಮಹಾನಗರ ಪಾಲಿಕೆಯ ಗೆಲುವಿಗೆ ಕಾರಣರಾದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇವೆ ಎಂದರು. ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಿ.ಕೆ.ರುದ್ರಮೂರ್ತಿ, ಬಿ.ಎಂ.ರಘು, ಸೋಮಸುಂದರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಮುಖಂಡರಾದ ಬಾಬಣ್ಣ, ಗುರುವಿನಾಯಕ, ಪುನೀತ್ ಮರಿಸ್ವಾಮಿ ನಾಯಕ, ಅನಿಲ್, ಗೋವಿಂದ ರಾಜಬಾಬು, ದಿನೇಶ್, ಆರ್.ಸೋಮಣ್ಣ, ಶಾಂತ, ಶಿವರಾಜ್, ನಂದಕುಮಾರ್, ಮಾದು, ಮಹೇಶ್ ಕುಮಾರ್ ಮತ್ತಿತರಿದ್ದರು

ಕಾಲಮಿತಿಯಲ್ಲಿ ಆರ್‌ಟಿಸಿಗಳಿಗೆ ಆಧಾರ್ ಜೋಡಣೆ ಮಾಡಿ

● ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಎಡಿಸಿ ಸಲಹೆ
● ಭೂಸುರಕ್ಷಾ ಯೋಜನೆಯಡಿ ಭೂ ದಾಖಲೆಗಳ ಸ್ಕ್ಯಾನ್ ಮಾಡಿ ಅಪ್‌ಲೋಡ್ ಆಗಲಿ



ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಡಿಸಿ ಕಚೇರಿ ಸಭಾಂಗಣದಲ್ಲಿ ಬುಧವಾರ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು,ಜ.16(ಎಂಟಿವೈ)–ಭೂ ಸುರಕ್ಷಾ ಯೋಜನೆ, ಆರ್‌ಟಿಸಿಗಳಿಗೆ ಆಧಾರ್ ಜೋಡಣೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ ಕಂದಾಯ ಇಲಾಖೆ ಪ್ರಗತಿಯಲ್ಲಿ ಮೈಸೂರು ಜಿಲ್ಲೆ ರಾಜ್ಯದಲ್ಲೇ ಮೊದಲ ಸ್ಥಾನಕ್ಕೆ ಕೊಂಡೊಯ್ಯಲು ಶ್ರಮಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸಲಹೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ತಹಸೀಲ್ದಾರ್, ಎಡಿಎಲ್‌ಆರ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ, ಕಂದಾಯ ಇಲಾಖೆ ಮೇಲೆ ಹೆಚ್ಚಿನ ಗಮನಹರಿಸುತ್ತಿದೆ. ಜನಸಾಮಾನ್ಯರಿಗೆ ಹತ್ತಿರವಾಗಿರುವ ಹಾಗೂ ಕಂದಾಯ ಇಲಾಖೆ, ಮಾತೃ ಇಲಾಖೆ ಆಗಿದ್ದು, ಯಾವುದೇ ಕೆಲಸವನ್ನು ವಿಳಂಬ ಮಾಡಬಾರದು. ಭೌತಿಕವಾಗಿ ಜಮೀನು ಸರ್ವೆ, ಅಳತೆ, ಖಾತೆಗಳನ್ನು ಮಾಡಿದ್ದರೂ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದರೆ ಮಾತ್ರ ಪ್ರಗತಿ ಸಾಧಿಸಿದಂತಾಗುತ್ತದೆ ಎಂದರು.

ಭೂ ಸುರಕ್ಷಾ ಯೋಜನೆಯಡಿ ಮೈಸೂರು ಜಿಲ್ಲೆ ಮೊದಲ ಸ್ಥಾನಕ್ಕೆ ತಲುಪಲು ಜಿಲ್ಲೆಯ ಎಲ್ಲಾ ತಹಸೀಲ್ದಾರ್‌ಗಳು ಶ್ರಮಿಸಬೇಕು. ಜಿಲ್ಲೆಯಲ್ಲಿ 2,74,31435 ದಾಖಲೆಗಳು ಇದ್ದು, ಈಗಾಗಲೇ 8,91525 ಪುಟಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲಾಗಿದೆ. ಪ್ರತಿ ತಾಲೂಕಿಗೂ ಒಂದು ವಾರಕ್ಕೆ 12 ಸಾವಿರ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಗುರಿ ನೀಡಲಾಗುತ್ತಿದೆ. ಇನ್ನೂ ಮೂರು ತಿಂಗಳೊಳಗೆ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಕಾರ್ಯ ಮುಗಿಸಬೇಕು ಎಂದು ಹೇಳಿದರು.

ಇಲವಾಲ ಹೋಬಳಿಯನ್ನು ಪೈಲಟ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡು ಎಲ್ಲಾ ದಾಖಲೆಗಳನ್ನು ಆನ್‌ಲೈನ್ ಮೂಲಕವೇ ಕೊಡಲಾಗುತ್ತಿದೆ. ಈಗ ರಾವಂದೂರು, ಚಿಕ್ಕಯ್ಯನಛತ್ರ, ಮಿರ್ಲೆ ಹೋಬಳಿಗಳನ್ನು ಪೈಲಟ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಲಾಗಿದೆ. ಮುಂದೆ ಎಲ್ಲಾ ಹೋಬಳಿಗಳಲ್ಲೂ ಜನರಿಗೆ ಲಭ್ಯವಿರುವ ದಾಖಲೆಗಳನ್ನು ಗಣಕೀಕೃತವಾಗಿಯೇ ನೀಡಬೇಕಾಗಿದೆ. ಪೌತಿ ಖಾತೆಗಳನ್ನು ಗುರುತಿಸಿ ಬೇಗನೆ ಖಾತೆ ಮಾಡಿಕೊಡಬೇಕು. ಪೋಡಿ, ದುರಸ್ತಿ, ಅಳತೆ ಮಾಡುವುದು ಮುಗಿದ ಬಳಿಕ ಖಾತೆ ಮಾಡಬೇಕು. ಪ್ರತಿವಾರ ತಹಶೀಲ್ದಾರ್, ಎಡಿಎಲ್‌ಆರ್‌ಗಳು, ರಾಜಸ್ವ ನಿರೀಕ್ಷರು, ಗ್ರಾಮ ಆಡಳಿತಾಧಿಕಾರಿಗಳು ಸಭೆ ನಡೆಸಿ ಸಮನ್ವಯತೆಯಿಂದ ಕೆಲಸ ಮಾಡಿದರೆ ಪ್ರಗತಿ ಸಾಧಿಸಬಹುದು. ಅಳತೆ, ದುರಸ್ತಿ ಮಾಡಿ ಅಪ್‌ಲೋಡ್ ಮಾಡದಿದ್ದರೆ ಬಾಕಿ ರೀತಿಯಲ್ಲಿ ಕಾಣುತ್ತದೆ. ಎಲ್ಲವನ್ನೂ ಕಾಲಮಿತಿಯೊಳಗೆ ಅಪ್‌ಲೋಡ್ ಮಾಡಿ ಮುಗಿಸಬೇಕು ಎಂದು ಸೂಚಿಸಿದರು.

ಏಕವ್ಯಕ್ತಿ ಪ್ರಕರಣಗಳನ್ನು ನಿಲ್ಲಿಸಿ ಸಮೂಹವಾಗಿ ಸರ್ವೆ ಮಾಡುವಂತೆ ಹೇಳಲಾಗಿದೆ. ಹೀಗಿದ್ದರೂ, ಹಳೆಯ ದಿನಾಂಕಗಳನ್ನು ನಮೂದಿಸಿ ಏಕವ್ಯಕ್ತಿ ಪ್ರಕರಣಗಳನ್ನು ಕಳುಹಿಸಲಾಗುತ್ತಿದೆ ಎಂದು ಡಿಡಿಎಲ್‌ಆರ್ ರಮ್ಯಾ ಅವರ ಎಡಿಸಿ ಅವರ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಎಡಿಸಿ, ಹಳೆಯ ದಿನಾಂಕ ನಮೂದಿಸಿ ಕಳುಹಿಸಿದರೆ ಅದನ್ನು ಸ್ವೀಕರಿಸಬಾರದು. ಒಂದು ವೇಳೆ ಸ್ವೀಕರಿಸಿದರೆ ಜಿಲ್ಲಾಧಿಕಾರಿಗಳ ಕಚೇರಿಗೆ ಕಳುಹಿಸಿ ಕೊಡಿ. ಅಂತಹವರಿಗೆ ನೋಟಿಸ್ ಜಾರಿಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸರ್ವೆಯರ್‌ಗಳು ನಿಗದಿತ ದಿನಾಂಕದೊಳಗೆ ಬಗರ್ ಹುಕ್ಕುಂ ಜಮೀನುಗಳನ್ನು ಸರ್ವೆ ಮಾಡಿ ಹದ್ದುಬಸ್ತು ಮಾಡಬೇಕು. ಅದೇ ರೀತಿ ಬೇರೆ ಪ್ರಕರಣಗಳಲ್ಲಿ ಬರುವ ಅರ್ಜಿಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸಬೇಕು. ಒಂದು ವೇಳೆ ವಿಳಂಬ ಮಾಡಿದರೆ ಅಂತಹವರಿಗೆ ನೋಟಿಸ್ ಜಾರಿಗೊಳಿಸುವ, ಇಲಾಖಾ ಆಯುಕ್ತರಿಗೆ ಪತ್ರ ಬರೆಯಲಾಗುವುದು ಎಂದರು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. 90 ದಿನಗಳ ನಂತರದ ದಿನಗಳಿಗೆ ಉಳಿಸಿಕೊಂಡರೆ ಪರಿಣಾಮ ಎದುರಿಸಬೇಕಾಗುತ್ತದೆ. ಬಗರ್ ಹುಕುಂ ಅರ್ಜಿಗಳನ್ನು ತಹಸೀಲ್ದಾರ್ ನ್ಯಾಯಾಲಯದಲ್ಲಿ ತಿರಸ್ಕರಿಸಿದ್ದನ್ನು ಎಸಿ ಕೋರ್ಟ್‌ನಲ್ಲಿ ಪರಿಶೀಲಿಸಿ ತಿರಸ್ಕರಿಸಬೇಕು. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳದೆ ಮರು ಪರಿಶೀಲನೆಗೆ ಕಳುಹಿಸಿದರೆ ಮತ್ತಷ್ಟು ವಿಳಂಬವಾಗುತ್ತದೆ. ಈ ರೀತಿಯಲ್ಲಿ ಮರು ಪರಿಶೀಲನೆಗೆ ಕಳುಹಿಸಿರುವ ಕಡತಗಳ ವಿವರ ಕೊಡುವಂತೆ ತಿಳಿಸಿದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ಕಾವ್ಯಾರಾಣಿ, ಡಿಡಿಎಲ್‌ಆರ್ ರಮ್ಯಾ, ಎಡಿಎಲ್‌ಆರ್ ಚಿಕ್ಕಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಸ್ತಾವನೆ ಸಲ್ಲಿಸಿ...

"ಮೈಸೂರು ಜಿಲ್ಲೆಯಲ್ಲಿರುವ ಎರಡು ಉಪವಿಭಾಗಾಧಿಕಾರಿಗಳು, ತಹಸಿಲ್ದಾರ್, ಕಂದಾಯ ಇಲಾಖೆ ಸಿಬ್ಬಂದಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಕುರಿತು ಸರ್ಕಾರಿ ಜಾಗವನ್ನು ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಬೇಕು. ಎರಡು–ಮೂರು ದಿನಗಳಲ್ಲಿ ಸೂಕ್ತ ಜಾಗ ಗುರುತಿಸಿ ಪ್ರಸ್ತಾವನೆ ಸಲ್ಲಿಸಬೇಕು .ಮಂಡ್ಯ ಅಥವಾ ಬೇರೆ ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಸ್ಥಳ ಗುರುತಿಸಲಾಗಿದೆ ಎಂಬುದನ್ನು ಒಮ್ಮೆ ಪರಿಶೀಲಿಸಿಕೊಳ್ಳಬೇಕು. ಅಗತ್ಯವಿರುವ ವಸತಿಗೃಹಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

–ಡಾ.ಪಿ.ಶಿವರಾಜು, ಅಪರ ಜಿಲ್ಲಾಧಿಕಾರಿ

ಮೈಸೂರು ಮಿತ್ರ ಶನಿವಾರ 17 ಜನವರಿ 2026

ಮನರೇಗಾ ಹೆಸರು ಬದಲಾವಣೆ: ಗ್ರಾಪಂ ಅಧಿಕಾರ ಮೊಟಕು

ರಾಜ್ಯ ಸರ್ಕಾರಗಳ ಅಭಿಪ್ರಾಯ ಸಂಗ್ರಹಿಸದೆ ಹೆಸರು ಬದಲಾವಣೆ: ಚಲುವರಾಯಸ್ವಾಮಿ

ಮಂಡ್ಯ, ಜ.16– ಯುಪಿಎ ಸರ್ಕಾರ ಜಾರಿಗೊಳಿಸಿದ್ದ ಮನರೇಗಾ ಯೋಜನೆ ಹೆಸರು ಬದಲಾವಣೆಯಿಂದ ಸ್ಥಳೀಯ ಗ್ರಾಪಂಗಳ ಅಧಿಕಾರ ಮೊಟಕುಗೊಳಿಸಿದಂತಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು.

ಸಂಸತ್ತಿನಲ್ಲಿ ಸುದೀರ್ಘ ಚರ್ಚೆ ಮಾಡದೆ, ದೇಶದ ಎಲ್ಲಾ ರಾಜ್ಯ ಸರ್ಕಾರ ಹಾಗೂ ಗ್ರಾಪಂಗಳ ಅಭಿಪ್ರಾಯ ಸಂಗ್ರಹಿಸದೆ ಏಕಪಕ್ಷೀಯವಾಗಿ ತರಾತುರಿಯಲ್ಲಿ ಯೋಜನೆ ಹೆಸರನ್ನು ಬದಲಾವಣೆ ಮಾಡಿರುವುದರಿಂದ ದೇಶದ 140 ಕೋಟಿ ಜನರ ಹಿತವನ್ನು ಬಲಿಕೊಟ್ಟಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಯೋಜನೆ ಹೆಸರು ಬದಲಾಯಿಸಿರುವುದರಿಂದ ರಾಜ್ಯೀಯ ಪ್ರದೇಶ ಕಾಂಗ್ರೆಸ್ ಸಮಿತಿ ದೊಡ್ಡ ಆಂದೋಲನ ನಡೆಸುತ್ತಿದ್ದು, ಮನರೇಗಾ ಬಚಾವ್ ಸಂಗ್ರಾಮ ಹಮ್ಮಿಕೊಂಡಿದೆ. ನಮ್ಮ ಬೇಡಿಕೆ ಯೋಜನೆಯ ಯಥಾಸ್ಥಿತಿ ಕಾಪಾಡಬೇಕು. ಹೆಸರು ಬದಲಾವಣೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಯೋಜನೆ ಹೆಸರು ಬದಲಾವಣೆಯಿಂದ ಕೆಲಸದ ದಿನಗಳು 100 ರಿಂದ 125 ದಿನಕ್ಕೆ ಏರಿಕೆಯಾಗುತ್ತದೆ ಎನ್ನುತ್ತಾರೆ. ಆದರೆ ಇವರು ಐದುಗಡೆ ಮಾಡುವ ಹಣಕ್ಕೆ ನೂರು ದಿನದ ಕೂಲಿಯೂ ಸಿಗುವುದಿಲ್ಲ. ಇನ್ನೂ 125 ದಿನದ ಕೂಲಿ ಹೇಗೆ ಸಿಗುತ್ತದೆ ಎಂದು ಪ್ರಶ್ನಿಸಿದರು.

ಯಾವುದೇ ರಾಜ್ಯ ಸರ್ಕಾರದ ವಿಶ್ವಾಸ ಪಡೆಯದೇ ಸರ್ವಾಧಿಕಾರಿಯಂತೆ ಯೋಜನೆ ಹೆಸರು ಬದಲಾವಣೆ ಮಾಡಿದ್ದಾರೆ. ಸ್ಥಳೀಯ ಗ್ರಾಪಂಗಳ ಅಧಿಕಾರ ಕಿತ್ತುಕೊಂಡು ಕೇಂದ್ರವೇ ಯೋಜನೆಗೆ ಸಂಬಂಧಿಸಿದಂತೆ ಅಧಿಕಾರ ನಿರ್ವಹಣೆ ಮಾಡುತ್ತದೆ. ಹೀಗಾದಾಗ ಜಿಲ್ಲೆಯ 230 ಗ್ರಾಪಂಗಳ ಪೈಕಿ ಕನಿಷ್ಠ 100 ಗ್ರಾಪಂಗಳನ್ನು ಈ ಯೋಜನೆಯಿಂದ ಕೈ ಬಿಡುವ ಸಾಧ್ಯತೆ ಇದೆ ಎಂದು ಉದಾಹರಣೆ ನೀಡಿದರು. ಈ ನಿರ್ಧಾರವನ್ನು ಕಾಂಗ್ರೆಸ್ ಮತ್ತು ರಾಜ್ಯ ಸರ್ಕಾರ ವಿರೋಧಿಸಲಿದೆ. ಇದನ್ನು ಖಂಡಿಸಿ ಪ್ರತಿಭಟನೆ, ಉಪವಾಸ ಸತ್ಯಾಗ್ರಹ, ಪಾದಯಾತ್ರೆ ಮಾಡುತ್ತೇವೆ. ಗಾಂಧೀಜಿಯವರ ಹೆಸರು ಬದಲಾವಣೆ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಕಿಡಿಕಾರಿದರು.

ಕೃಷಿ ಕಾಯ್ದೆ ಜಾರಿಗೆ ತಂದಾಗ ಪಂಜಾಬ್‌ನಲ್ಲಿ ವರ್ಷಗಟ್ಟಲೇ ಹೋರಾಟ ನಡೆಯಿತು. ಅದೇ ಮಾದರಿ ಹೋರಾಟ ರೂಪಿಸಬೇಕು. ಕೇಂದ್ರ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ಮನಮೋಹನ್ ಸಿಂಗ್ ನೇತೃತ್ವದಲ್ಲಿ 53 ಲಕ್ಷ ಕೋಟಿ ಇದ್ದ ದೇಶದ ಸಾಲ ಕಳೆದ 11 ವರ್ಷಗಳ ಮೋದಿ ಸರ್ಕಾರದಲ್ಲಿ 300 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ರೈತರ ವಿರೋಧಿ ನೀತಿ ತಾಳಿರುವ ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತಲು ರಾಜ್ಯದ ಬಿಜೆಪಿ ಸಂಸದರು ವಿಫಲರಾಗಿದ್ದಾರೆ. ಮೋದಿ ಸಂಪುಟದ ಮಂತ್ರಿಗಳು ಗ್ರಾಮೀಣ ಪ್ರದೇಶಕ್ಕೆ ಭೇಟಿ ನೀಡಲು ನಾಚಿಕೆಯಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು. ಮನರೇಗಾ ಹೆಸರು ಬದಲಾವಣೆ ಖಂಡಿಸಿ ಬಿಜೆಪಿ ಅಧಿಕಾರದಲ್ಲಿರುವ ಹರಿಯಾಣ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದಿದೆ. ಅದರಂತೆ ಬಿಜೆಪಿ ಜೊತೆಗಿನ ಮೈತ್ರಿ ಸರ್ಕಾರವಾದ ಆಂಧ್ರ ಪ್ರದೇಶ ಸರ್ಕಾರ ಪತ್ರ ಬರೆದರೆ, ಕಾಂಗ್ರೆಸ್ ಅಧಿಕಾರದಲ್ಲಿರುವ ತೆಲಂಗಾಣ ಅಧಿವೇಶನದಲ್ಲಿ ಯೋಜನೆ ವಿರೋಧಿಸಿ ನಿರ್ಣಯ ಕೈಗೊಂಡಿದೆ. ಇದೇ ಮಾದರಿ ತಮಿಳುನಾಡು, ಕರ್ನಾಟಕ ಸೇರಿದಂತೆ ಹಲವು ಸರ್ಕಾರಗಳು ಧ್ವನಿ ಎತ್ತುತ್ತಿವೆ. ಬಿಜೆಪಿ ಸರ್ಕಾರವಿರುವ ಹಲವು ರಾಜ್ಯಗಳು ಯೋಜನೆಗಳ ವಿರುದ್ಧ ಮಾತನಾಡಲಾಗದೆ ಪತ್ರ ಬರೆದು ಆಗ್ರಹಿಸಿವೆ ಎಂದರು.

ಗೋಷ್ಠಿಯಲ್ಲಿ ಶಾಸಕ ಪಿ.ರವಿಕುಮಾರ್‌ಗಣಿಗ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಮೈಶುಗರ್ ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ವಿಜಯಲಕ್ಷ್ಮಿ, ರಾಜ್ಯ ಕೃಷಿಕರ ಅಭಿವೃದ್ಧಿ ನಿಗಮದ ನಾಗೇಂದ್ರಕುಮಾರ್, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಯುವ ಘಟಕದ ಅಧ್ಯಕ್ಷ ಶೈಲೇಂದ್ರ ಮುಖಂಡರಾದ ಸಿ.ಎಂ.ದ್ಯಾವಪ್ಪ, ಚಂದಗಾಲು ವಿಜಯಕುಮಾರ್ ಇದ್ದರು.


ಸುದ್ದಿಗೋಷ್ಠಿಯಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ವಿಜೃಂಭಣೆಯ ಶ್ರೀಗವಿರಂಗನಾಥಸ್ವಾಮಿ ಬ್ರಹ್ಮರಥೋತ್ಸವ

ಕೆ.ಆರ್.ಪೇಟೆ, ಜ.16– ಜಾನುವಾರುಗಳ ರಕ್ಷಕ ದೇವರಾದ ತಾಲೂಕಿನ ಬಿಲ್ಲೇನಹಳ್ಳಿ ಶ್ರೀಗವಿರಂಗನಾಥಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಹೆಚ್.ಟಿ.ಮಂಜು, ಎಡಿಸಿ ಶಿವಾನಂದಮೂರ್ತಿ, ಪಾಂಡವಪುರ ಎಸಿ ಡಾ.ಕೆ.ಶ್ರೀನಿವಾಸ್, ತಹಸೀಲ್ದಾರ್ ಎಸ್.ಯು.ಅಶೋಕ್ ಹಾಗೂ ಗಣ್ಯರು ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನಾಡಿನ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣುಜವನ ಎಸೆದು ಶ್ರೀರಂಗನಾಥಸ್ವಾಮಿಗೆ ಉಘೇ... ಉಘೇ... ಎಂದು ಜೈಕಾರ ಕೂಗಿ ರಥ ಎಳೆದು ತಮ್ಮ ಭಕ್ತಿ ಭಾವ ಸಮರ್ಪಿಸಿದರು. ಇದೇ ವೇಳೆ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಿರುವ ಕಲ್ಯಾಣಿಯನ್ನು ಗಣ್ಯರು ಉದ್ಘಾಟಿಸಿದರು.

ರಥೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವ ಚಲುವರಾಯಸ್ವಾಮಿ ಜಾತ್ರೆ ಹಬ್ಬ ಹರಿದಿನಗಳು ನಮ್ಮ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿವೆ. ನಮ್ಮ ಹಿರಿಯರು ಗ್ರಾಮದೇವತೆ ಹಬ್ಬ, ರಥೋತ್ಸವ, ಜಾತ್ರೆಗಳನ್ನು ಪ್ರತಿ ವರ್ಷ ಆಚರಿಸಿಕೊಂಡು ಬರುತ್ತಿದ್ದಾರೆ. ಅದನ್ನು ನಾವು ಮುಂದುವರೆಸಿಕೊಂಡು ಹೋಗಬೇಕಿದೆ ಗವಿರಂಗನಾಥಸ್ವಾಮಿ ರಥೋತ್ಸವದಲ್ಲಿ ಭಾಗವಹಿಸಿದ್ದು ನನ್ನ ಪುಣ್ಯವಾಗಿದೆ.

ಕ್ಷೇತ್ರಕ್ಕೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಯಾತ್ರಿ ನಿವಾಸ್ ನಿರ್ಮಿಸಲು, ನೂತನವಾಗಿ ನಿರ್ಮಿಸಿರುವ ಕಲ್ಯಾಣಿ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸಲು ಸೂಕ್ತ ಅನುದಾನ ಕೊಡಿಸುವೆ. ಗವಿರಂಗನಾಥಸ್ವಾಮಿ ದೇವಾಲಯದ ಭೂಮಿಯಲ್ಲಿ ಅರಣ್ಯ ಎಂದು ನಮೂದಾಗಿದ್ದು ಕೂಡಲೇ ದೇವಾಲಯಕ್ಕೆ ಸೇರಿಸಲು ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿದರು. ರಥೋತ್ಸವದಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ತಾಪಂ ಮಾಜಿ ಸದಸ್ಯ ಬಿ.ಆರ್.ಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್, ದಿಲೀಪ್ ಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಅಂಬರೀಶ್, ಮನ್‌ಮುಲ್ ನಿರ್ದೇಶಕ ಎಂ.ಬಿ.ಹರೀಶ್, ಜೆಡಿಎಸ್ ಮುಖಂಡ ಕುವಾರ್, ಪುರಸಭಾ ಸದಸ್ಯ ರವೀಂದ್ರಬಾಬು, ಡಿ.ಪ್ರೇಮಕುಮಾರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರವೀಶ್, ನಿರ್ದೇಶಕ ಜಗದೀಶ್, ಗೋವಿಂದಕುಮಾರ್, ಜಿಲ್ಲಾ ಗ್ಯಾರಂಟಿ ಸಮಿತಿ ನಿರ್ದೇಶಕಿ ಮೀನಾಕ್ಷಿ, ತಾಲೂಕು ಕೆಡಿಪಿ ಸದಸ್ಯ ಆಕಾಶ್, ಇಲ್ಯಾಸ್ ಅಹಮದ್, ಸಣ್ಣ ನೀರಾವರಿ ಇಲಾಖೆ ಎಇಇ ನಿರ್ಮಲೇಶ್, ಸಂತೇಬಾಚಹಳ್ಳಿ ನಾಡಕಚೇರಿ ಉಪ ತಹಸೀಲ್ದಾರ್ ಗೌರಮ್ಮ, ರಾಜಸ್ವ ನಿರೀಕ್ಷಕ ಹರೀಶ್, ಜ್ಞಾನೇಶ್, ಚಂದ್ರಕಲಾ, ಶಾಸಕರ ಆಪ್ತ ಸಹಾಯಕ ಪ್ರಶಾಂತ್ ಸೇರಿದಂತೆ ಸಾವಿರಾರು ಭಕ್ತರಿದ್ದರು.


ಶ್ರೀಗವಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಮನೆ ಕಳೆದುಕೊಂಡ ಮಹಿಳೆಗೆ ಧನಸಹಾಯ


ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಬಲಮುರಿ ರಸ್ತೆಯಲ್ಲಿ ಗ್ಯಾಸ್ ಸೋರಿಕೆಯಿಂದಾಗಿ ಸಂಪೂರ್ಣ ಸುಟ್ಟು ಹೋಗಿ ಮನೆ ಕಳೆದುಕೊಂಡಿದ್ದ ಗೌರಮ್ಮ ಅವರಿಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಧನಸಹಾಯ ಮಾಡಿದರು. ಗ್ರಾಮದ ಮುಖಂಡರಾದ ಬಿ.ವಿ.ಲೋಕೇಶ್, ವಾಸು, ಸಂತೋಷ್, ಗ್ರಾಪಂ ಸದಸ್ಯ ಪ್ರಕಾಶ್, ದೇವರಾಜ, ಗಣಿ, ಹೇಮಂತ್, ನಂದೀಶ್ ಇತರರಿದ್ದರು.

ಅರ್ಜಿ ಅಹ್ವಾನ

ಮಂಡ್ಯ, ಜ.16– ಪ್ರಧಾನ ಮಂತ್ರಿಗಳ ವಿಶ್ವಕರ್ಮ ಯೋಜನೆಯಡಿ ಭಾರತ ಸರ್ಕಾರದ ಎಂಎಸ್‌ಎಂಇ ಡಿಎಫ್‌ಒ, ಬೆಂಗಳೂರು ಕಚೇರಿ ವತಿಯಿಂದ ಜ.22 ರಿಂದ 24 ರವರೆಗೆ ನಂಜರಾಜ ಬಹದ್ದೂರು ಛತ್ರ ಮೈಸೂರಿನಲ್ಲಿ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ.ಆಸಕ್ತ ಕುಶಲಕರ್ಮಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ದೂ:08232 200964/221358 ಸಂಪರ್ಕಿಸಿ.

ಡಿಂಕಾ ಡೇರಿಗೆ ಮಹೇಶ್ ನೂತನ ಅಧ್ಯಕ್ಷ

ಚಿನಕುರಳಿ, ಜ.16– ಇಲ್ಲಿಗೆ ಸಮೀಪದ ಡಿಂಕಾ ಡೇರಿ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಡಿ.ಇ.ಕಲಿಗಣೇಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಮಹೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಡೇರಿ ಕಾರ್ಯದರ್ಶಿ ಡಿ.ಎಂ.ಶಿವಪ್ಪ ಘೋಷಿಸಿದರು.

ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಡೇರಿ ಆವರಣದಲ್ಲಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ನೂತನ ಅಧ್ಯಕ್ಷ ಮಹೇಶ್ ಅವರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸೇರಿದಂತೆ ಮುಖಂಡರು, ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಡಿಂಕಾ ಡೇರಿ ತಾಲೂಕು ಹಾಗೂ ಜಿಲ್ಲೆಗೆ ಮಾದರಿಯಾಗಿ ಕೆಲಸ ಮಾಡುತ್ತಿದೆ. ತಾಲೂಕಿನಲ್ಲೇ ಹೆಚ್ಚು ಹಾಲು ಉತ್ಪಾದನೆಯ ಸಂಘವಾಗಿದೆ. ಇಲ್ಲಿನ ಮಹಿಳೆಯರು ಅಧಿಕ ಹಾಲು ಉತ್ಪಾದಿಸುವ ಮೂಲಕ ದಕ್ಷಿಣ ಭಾರತದಲ್ಲಿಯೇ ಅಧಿಕ ಹಾಲು ಉತ್ಪಾದನೆ ಮಾಡಿದ ಹೆಗ್ಗಳಿಕೆ ಪಡೆದು ಪ್ರಶಸ್ತಿ ಪಡೆದಿದ್ದಾರೆ. ಇಂತಹ ಮಾದರಿ ಸಂಘಕ್ಕೆ ಮಹೇಶ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಸಂಘವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು. ಡಿಂಕಾ ಡೇರಿಗೆ 3 ಸಾವಿರ ಸಾಮರ್ಥ್ಯದ ಮತ್ತೊಂದು ಬಿಎಂಸಿ ಘಟಕ ಕೇಳಿದ್ದಾರೆ. ಈ ಬಗ್ಗೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದ್ದು, ಶೀಘ್ರವೇ ಮಂಜೂರು ಮಾಡಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ನೂತನ ಅಧ್ಯಕ್ಷ ಮಹೇಶ್ ಮಾತನಾಡಿದರು. ಈ ವೇಳೆ ಉಪಾಧ್ಯಕ್ಷೆ ಸೌಮ್ಯ, ಮಾಜಿ ಅಧ್ಯಕ್ಷ ಡಿ.ಇ.ಕಲಿ ಗಣೇಶ್, ಜೆಸಿಬಿ ಗಿರೀಶ್, ಡಿ.ವಿ.ಶಿವಣ್ಣ ನಿರ್ದೇಶಕ ಮಹದೇವಪ್ಪ, ಡಿ.ಎಂ.ಇಂದ್ರೇಶ್, ಶಿವಲಿಂಗಪ್ಪ, ಪ್ರೇಮ, ಕೃಷ್ಣಶೆಟ್ಟಿ, ಡಿ.ಎಂ.ಮುತ್ತೇಗೌಡ, ಡಿ.ಐ.ಶ್ರೀನಿವಾಸಯ್ಯ, ರಮಾದೇವಿ, ಕಾರ್ಯದರ್ಶಿ ಡಿ.ಎಂ.ಶಿವಪ್ಪ ಹಾಲು ಪರೀಕ್ಷಕ ಜೆ.ಕೇಶವ ಚಾರಿ, ಸಹಾಯಕರಾದ ಡಿ.ಎಸ್.ಈರಪ್ಪ, ಡಿ.ಎಸ್.ಶೇಖರಪ್ಪ, ಮಾದಯ್ಯ ಸೇರಿದಂತೆ ಇತರರಿದ್ದರು.


ನೂತನ ಅಧ್ಯಕ್ಷರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅಭಿನಂದಿಸಿದರು.

ನಾಳೆ ಅಕ್ಷರ ಜಾತ್ರೆ, ವಿವಿಧ ಪ್ರಶಸ್ತಿ ಪ್ರದಾನ

ಮಂಡ್ಯ, ಜ.16– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ, ಮಂಡ್ಯ ವತಿಯಿಂದ ಸಂಕ್ರಾಂತಿ ಅಂಗವಾಗಿ ಸುಗ್ಗಿ– ಸಂಭ್ರಮ, 15ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜ.18ರಂದು ಬೆಳಗ್ಗೆ 10.30ಕ್ಕೆ ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.


ಡಾ.ಹೆಚ್.ಶ್ರೀಧರ

ಸಮ್ಮೇಳನಾಧ್ಯಕ್ಷರಾಗಿ ಮೈಸೂರಿನ ಮಹಾಜನ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಹೆಚ್.ಶ್ರೀಧರ ಆಯ್ಕೆಯಾಗಿದ್ದು, ಅಕ್ಷರ ಜಾತ್ರೆ ಉದ್ಘಾಟನೆಯನ್ನು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಕೆ.ಸಿ.ನಿಂಗರಾಜೇಗೌಡ ನೆರವೇರಿಸುವರು. ಸುಗ್ಗಿ–ಸಂಭ್ರಮ: ಕುರಿತು ಪ್ರಧಾನ ಭಾಷಣವನ್ನು ಖ್ಯಾತ ವೈದ್ಯ ಡಾ.ಚಂದ್ರಶೇಖರ್ ಮಾಡಲಿದ್ದು, ಕನ್ನಡ ರತ್ನ ಪ್ರಶಸ್ತಿಯನ್ನು ರಂಗಭೂಮಿ ನಿರ್ದೇಶಕ ಸಿದ್ದೇಗೌಡ, ಸಮಾಜಸಾಧಕ ಗೌರವವನ್ನು ವೇದಿಕೆ ಉಪಾಧ್ಯಕ್ಷ ಸಿದ್ದಲಿಂಗಯ್ಯ, ಕರ್ನಾಟಕ ಸೇವಾ ಭೂಷಣ ಪ್ರಶಸ್ತಿ ಪ್ರದಾನವನ್ನು ವೇದಿಕೆಯ ಪೋಷಕ ನರೇಶ್ ವಿತರಣೆ ಮಾಡಲಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ವಿವಿಧ ಪ್ರಶಸ್ತಿಗಳು, ಕವಿಗಳಿಗೆ ಕಾವ್ಯಶ್ರೀ ಪ್ರಶಸ್ತಿ ವಿತರಣೆ ಮತ್ತು ಕವಿಕಾವ್ಯ ಮೇಳ ಜರುಗಲಿದೆ.

ಒಂದನೇ ಪುಟದಿಂದ

ಜೀವನಕ್ಕೆ ಕಾಲಿಟ್ಟ 135 ಜೋಡಿಗಳು

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತಿರುವನಂತಪುರದ ಮೆಟ್ರೋಪಾಲಿಯನ್ ಇಂಡಿಯನ್ ಆರ್ಥೋಡೆಕ್ಸ್ ಚರ್ಚಿನ ಬಿಷಪ್ ಡಾ.ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಮೈಸೂರಿನ ಫ್ರಾನ್ಸಿಸ್ ಸೆರಾವ್, ಸೇರಿದಂತೆ ಹರ ಗುರುಚರ ಮೂರ್ತಿಗಳ ಸಮ್ಮುಖದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ ಮಾಜಿ ಸಚಿವ ಹಾಗೂ ಶಾಸಕ ಆರ್.ವಿ.ದೇಶಪಾಂಡೆ ಮಾಂಗಲ್ಯ ವಿತರಣೆ ಮಾಡಿದರು. ನೂತನ ವಧು–ವರರಿಗೆ ಮಾಂಗಲ್ಯ, ವಸ್ತ್ರ, ಸೀರೆ ಕುಪ್ಪಸವನ್ನು ನೀಡಲಾಯಿತು, ಮಂಗಳಸೂತ್ರ ಇದ್ದ ತಟ್ಟೆಯನ್ನು ಹಲವಾರು ಸ್ವಾಮೀಜಿಗಳು ಮತ್ತು ಗಣ್ಯರು ಸ್ಪರ್ಶಿಸಿ ನೂತನ ವರರಿಗೆ ವಿತರಿಸಿದರು. ನಂತರ ಗಟ್ಟಿಮೇಳದ ಸದ್ದಿನಲ್ಲಿ ಪಂಡಿತರ ಮಂತ್ರ ಘೋಷಗಳ ಮಧ್ಯೆ ವರ ವಧುವಿಗೆ ಮಾಂಗಲ್ಯ ಧಾರಣೆ ನಡೆಸಿದರು.

ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ ನೂತನ ವಧು ವರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಸುತ್ತೂರು ಶ್ರೀಮಠದಿಂದ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ನೂತನ ವಧು–ವರರನ್ನು ಛತ್ರಿ–ಚಾಮರಗಳೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ ಮಾತನಾಡಿ, ರಾಜ್ಯದಲ್ಲಿ ಮಠಮಾನ್ಯಗಳು ಅನ್ನ ದಾಸೋಹದ ಜೊತೆಗೆ ಶಿಕ್ಷಣವನ್ನು ನೀಡಿ ನಾಡಿನ ಅಭಿವೃದ್ಧಿಗಾಗಿ ಅಪಾರ ಸೇವೆ ಸಲ್ಲಿಸುತ್ತಿವೆ. ಸುತ್ತೂರಿನ ಜಾತ್ರೆಯು ಕೂಡ ಸಾಂಪ್ರದಾಯಿಕ ಪರಂಪರೆಯನ್ನು ಸಂರಕ್ಷಿಸುವ ಜೊತೆಗೆ ಕೃಷಿ ವಿಷಯದಲ್ಲಿ ರೈತರಿಗೆ ಮಾರ್ಗದರ್ಶನ ನೀಡುವಂತಹ ಕೆಲಸ ಮಾಡುತ್ತಿದೆ ಅಲ್ಲದೆ ಸರಳ ಸಾಮೂಹಿಕ ವಿವಾಹವನ್ನು ನಡೆಸುವ ಮೂಲಕ ಎಸ್‌ಸಿ, ಎಸ್ ಟಿ, ಹಿಂದು ಳಿದ ವರ್ಗದವರಿಗೆ ನೆರವಾಗುತ್ತಿದೆ. ಈ ವರ್ಷ ವಿವಾಹವಾದ ಜೋಡಿಗಳಲ್ಲಿ ಎಸ್ಸಿ ಎಸ್ಟಿ ಮತ್ತು ಹಿಂದುಳಿದ ವರ್ಗದವರು ಹೆಚ್ಚಿನ ಲಾಭ ಪಡೆದಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ತಿರುವನಂತಪುರದ ಆರ್ಥೋಡೆಕ್ಸ್ ಚರ್ಚಿನ ಬಿಷಪ್ ಡಾ.ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಮೈಸೂರಿನ ಬಿಷಪ್ ರೆ.ಫಾ. ಫ್ರಾನ್ಸಿಸ್ ಸೆರಾವ್ ಧರ್ಮ ಸಂದೇಶ ನೀಡಿದರು. ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ಕೋಮುಲ್ ಅಧ್ಯಕ್ಷ ಹಾಗೂ ಶಾಸಕ ಕೆ.ವೈ.ನಂಜೇಗೌಡ, ಮಾತನಾಡಿದರು. ದಿವ್ಯ ಆಲೂರು ನಿರೂಪಿಸಿದರು, ಗುಡಿಗಾಲ ಕುಮಾರ ಎಲ್ಲರನ್ನೂ ಸ್ವಾಗತಿಸಿದರು.

ತಮ್ಮನ 28 ಬಾರಿ ಇರಿದು ಹತ್ಯೆ

ದಾಖಲಿಸಿ, ಜಾನುವಾರುಗಳ ನೋಡಿಕೊಳ್ಳಲು ಊರಿಗೆ ಬಂದಿದ್ದ, ಅಣ್ಣ– ತಮ್ಮಂದಿರ ಮನೆಗೆ ಒಂದೇ ಗೋಡೆ ಇದ್ದು, ಕೊಟ್ಟಿಗೆಯಲ್ಲಿ ಹಸುಗಳಿಗೆ ಮೇವು ಹಾಕುವಾಗ ಹೊಂಚು ಹಾಕಿ ಕುಳಿತಿದ್ದ ಲಿಂಗರಾಜು ದಾಳಿ ನಡೆಸಿ, ಹತ್ಯೆ ಮಾಡಿದ್ದಾನೆ.

ಆಸ್ತಿ ಆಸೆ: ಮಾಯಪ್ಪನಹಳ್ಳಿ ಗ್ರಾಮದ ಚಿಕ್ಕಮರೀಗೌಡರು ಕಳೆದ 20 ವರ್ಷಗಳ ಹಿಂದೆ ಮೃತಪಟ್ಟಿದ್ದರು. ಇವರಿಗೆ ಜಯಮ್ಮ, ಲಿಂಗರಾಜು, ಕೆಂಪೇಗೌಡ, ತಾಯಮ್ಮ, ಯೋಗೇಶ್ ಸೇರಿದಂತೆ ಐವರು ಮಕ್ಕಳಿದ್ದರು. ಈ ಪೈಕಿ ಕಡೆ ಮಗ ಯೋಗೇಶ್ ವಿದ್ಯಾವಂತನಾಗಿದ್ದು ಕಾನೂನು ಅರಿವು ಹೊಂದಿದ್ದ, ಈತ ಮದುವೆಯಾದರೆ ಪತ್ನಿ ಮತ್ತು ಮಕ್ಕಳು ಬಂದು ಆಸ್ತಿ ಮೇಲೆ ಮತ್ತಷ್ಟು ಹಿಡಿತ ಸಾಧಿಸುತ್ತಾನೆ ಎಂಬ ಹಿನ್ನೆಲೆಯಲ್ಲಿ ಹತ್ಯೆ ಮಾಡಿದ್ದಾನೆಂದು ಸಂಬಂಧಿಕರು ದೂರಿದ್ದಾರೆ.

ತಂದೆ ನಿಧನದ ಬಳಿಕ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದ ಲಿಂಗರಾಜು, ಸಂಪೂರ್ಣ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದ. ಆದರೆ, ಮೋಸ ಮಾಡಿದ್ದ ಅಣ್ಣನ ವಿರುದ್ಧ ಯೋಗೇಶ್ ಕಾನೂನು ಹೋರಾಟ ಮಾಡುತ್ತಿದ್ದ. ಸಹೋದರರು, ಸಹೋದರಿಯರಿಗೆ ಪಾಲು ನೀಡದೆ 19 ಎಕರೆ ಜಮೀನನ್ನು ತಾನೊಬ್ಬನೆ ಅನುಭವಿಸುತ್ತಿದ್ದ ಆರೋಪವಿತ್ತು. ಅದರಲ್ಲಿ ಪಿತ್ರಾರ್ಜಿತ ಆಸ್ತಿ 12 ಎಕರೆ ಹಾಗೂ ತಾಯಿ ಹೆಸರಿನಲ್ಲಿ ಖರೀದಿ ಮಾಡಿದ್ದ 6 ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದನಂತೆ ಲಿಂಗರಾಜು, ಜೊತೆಗೆ ಮೈಸೂರು, ಮಂಡ್ಯದಲ್ಲಿದ್ದ 4 ನಿವೇಶನಗಳನ್ನೂ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದನಂತೆ.

ಬಳಿಕ ಎಲ್ಲಾ ಆಸ್ತಿಯನ್ನು ತನ್ನ ಪತ್ನಿ ಹೆಸರಿಗೆ ವರ್ಗಾವಣೆ ಮಾಡಿದ್ದನಂತೆ ಲಿಂಗರಾಜು, ಈ ವಿಚಾರ ತಿಳಿದು ಪ್ರಶ್ನೆ ಮಾಡಿದ ಸಹೋದರರು, ಸಹೋದರಿಯರ ವಿರುದ್ಧ ತಿರುಗಿಬಿದ್ದಿದ್ದ ಎನ್ನಲಾಗಿದೆ. ಆಸ್ತಿ ವಿಚಾರವಾಗಿ ಎರಡ್ಮೂರು ಬಾರಿ ಗಲಾಟೆ ನಡೆದಿದ್ದು, ಲಿಂಗರಾಜು ವಿರುದ್ಧ ಯೋಗೇಶ್ ನ್ಯಾಯಾಲಯದ ಮೆಟ್ಟಿಲೇರಿದ್ದ. ಬೆಳಗ್ಗೆ ಯೋಗೇಶ್ ಕೊಲೆಗೈದು ಪರಾರಿಯಾಗಿರುವ ಲಿಂಗರಾಜು ಮತ್ತು ಆತನ ಮಕ್ಕಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಮನೆಯಲ್ಲಿದ್ದ ವಸ್ತು ಧ್ವಂಸ: ಯೋಗೇಶ್ ಕೊಲೆಯಿಂದ ರೊಚ್ಚಿಗೆದ್ದ ಗ್ರಾಮಸ್ಥರು ಲಿಂಗರಾಜು ಮನೆಯಲ್ಲಿದ್ದ ಗೃಹ ಬಳಕೆ ವಸ್ತುಗಳನ್ನು ಧ್ವಂಸ ಮಾಡಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೊಲೆ ಸಂಬಂಧ ಕೆರಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡು ಪಾವತಿ ಬಂದ್

ಜಾಗತಿಕ ತಾಂತ್ರಿಕ ಮಾನದಂಡಗಳನ್ನು ಪರಿಶೀಲಿಸಲಾಗುತ್ತಿದೆ. 'ನೋ–ಸ್ಟಾಪ್' ವ್ಯವಸ್ಥೆಯ ಪೈಲಟ್ ಯೋಜನೆಯನ್ನು ಈಗಾಗಲೇ ಭಾರತದಾದ್ಯಂತ 25 ಟೋಲ್ ಪ್ಲಾಜಾಗಳಲ್ಲಿ ಪರೀಕ್ಷಿಸಲಾಗುತ್ತಿದೆ.

ಮಾಡುವುದೇನು: ಪ್ರಯಾಣಿಕರು ತಮ್ಮ ಫಾಸ್ಟ್ಯಾಗ್ ಖಾತೆಗಳನ್ನು ತಕ್ಷಣವೇ ಪರಿಶೀಲಿಸಬೇಕು. ನಿಮ್ಮ ಟ್ಯಾಗ್ ಸಕ್ರಿಯವಾಗಿದೆಯೇ ಮತ್ತು ಸಾಕಷ್ಟು ಬ್ಯಾಲೆನ್ಸ್ ಹೊಂದಿದೆಯೇ ಎಂದು ಖಚಿತಪಡಿಸಿಕೊಳ್ಳಿ. ನೀವು ಫಾಸ್ಟ್ಯಾಗ್ ಬಳಸದಿದ್ದರೆ, ಪ್ಲಾಜಾದಲ್ಲಿ ನಿಮ್ಮನ್ನು ವಾಪಸ್ ಕಳುಹಿಸುವುದನ್ನು ಅಥವಾ ದಂಡ ವಿಧಿಸುವುದನ್ನು ತಪ್ಪಿಸಲು ನಿಮ್ಮ ಸ್ಮಾರ್ಟ್‌ಫೋನ್ ಯುಪಿಐ ಪಾವತಿಗಳಿಗೆ ಸಿದ್ಧವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ.

ಮನವೊಲಿಕೆ ಕಸರತ್ತು

ಅವರನ್ನು ದೆಹಲಿಗೆ ಕರೆಸುವುದಾಗಿ ಹೇಳಿದ್ದರು. ಎಐಸಿಸಿ ಸಭೆ ಕಾರಣಕ್ಕೆ ದೆಹಲಿಗೆ ತೆರಳುವ ಅವಕಾಶ ದೊರೆತಿರುವುದರಿಂದ ಇದೇ ವೇಳೆ ಅಧಿಕಾರ ಹಸ್ತಾಂತರ ವಿಷಯವನ್ನೂ ಇತ್ಯರ್ಥಪಡಿಸಿಕೊಳ್ಳುವ ಉದ್ದೇಶದಿಂದ ಹಲವು ನಾಯಕರನ್ನು ಭೇಟಿ ಮಾಡಲಿದ್ದಾರೆ.

ಈ ಮಧ್ಯೆ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಭೇಟಿ ಹೊರತಾಗಿಯೂ ದೆಹಲಿಯಲ್ಲಿ ಎಲ್ಲಾ ನಾಯಕರು ಇರುತ್ತಾರೆ. ಭೇಟಿ ಮಾಡುತ್ತೇನೆ ಎಂದರು.

ರಾಹುಲ್ ಗಾಂಧಿ ನಮ್ಮ ಪಕ್ಷದ ನಾಯಕರು, ಪಕ್ಷದ ನಾಯಕರು ಹಾಗೂ ಅಧ್ಯಕ್ಷರ ಭೇಟಿ ಚರ್ಚೆ ಸಹಜ ಪ್ರಕ್ರಿಯೆ. ಏನು ಮಾತುಕತೆ ನಡೆಯಿತೆಂಬುದನ್ನು ಸಾರ್ವಜನಿಕವಾಗಿ ಚರ್ಚೆ ಮಾಡಲಾಗದು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬ ನನ್ನ ಟ್ವೀಟ್ ಅನ್ನು ಕೆಲವು ಮಾಧ್ಯಮಗಳು ವಿವಿಧ ರೀತಿ ವ್ಯಾಖ್ಯಾನ ಮಾಡಿವೆ ಎಂದರು.

ಪ್ರಧಾನಿ ಮೋದಿ ಟ್ವೀಟ್

ಮತ್ತು ರಾಜ್ಯದ ಶ್ರೀಮಂತ ಸಂಸ್ಕೃತಿಯ ಆಚರಣೆಯಾಗಿದೆ. 'ಮಹಾರಾಷ್ಟ್ರದಾದ್ಯಂತ ಜನರ ನಡುವೆ ಅವಿಶ್ರಾಂತವಾಗಿ ಕೆಲಸ ಮಾಡಿದ ಪ್ರತಿಯೊಬ್ಬ ಎನ್‌ಡಿಎ ಕಾರ್ಯಕರ್ತರ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ಅವರು ನಮ್ಮ ಮೈತ್ರಿಕೂಟದ ಸಾಧನೆಯ ಬಗ್ಗೆ ಮಾತನಾಡಿದರು, ಭವಿಷ್ಯದ ಬಗ್ಗೆ ನಮ್ಮ ದೃಷ್ಟಿಕೋನವನ್ನು ವಿವರಿಸಿದರು ಮತ್ತು ವಿರೋಧ' ಪಕ್ಷದ ಸುಳ್ಳುಗಳನ್ನು ಪರಿಣಾಮಕಾರಿಯಾಗಿ ಎದುರಿಸಿದರು. ಅವರಿಗೆ ನನ್ನ ಶುಭಾಶಯಗಳು' ಎಂದು ಪ್ರಧಾನಿ ಮೋದಿ ಬರೆದಿದ್ದಾರೆ.

ಮುಸಲ್ಮಾನ್, ಕ್ರಿಶ್ಚಿಯನ್, ಜೈನ್ ಬಾಂಧವರಿಗೆ ಎಳ್ಳು ಬೆಲ್ಲ ಹಂಚುವ ಮೂಲಕ ಭಾವೈಕ್ಯತೆ ಸಂದೇಶ ಸಾರಿದ ಶಾಸಕ ಹರೀಶ್ ಗೌಡ

ಮೈಸೂರು, ಜ. 16– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಯುವ ಬಳಗದ ವತಿಯಿಂದ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಮುಸಲ್ಮಾನ್, ಕ್ರೈಸ್ತರು, ಜೈನ, ಪೊಲೀಸ್, ಪೌರ ಕಾರ್ಮಿಕರು, ಆಶಾ ಕಾರ್ಯಕರ್ತರು ಭಾವೈಕ್ಯತೆ ಬೆಸೆಯುವ ನಿಟ್ಟಿನಲ್ಲಿ ಶಾಸಕ ಹರೀಶ್‌ಗೌಡರು ಗೋಪೂಜೆ ನೆರವೇರಿಸಿ ಆನಂತರ ಎಲ್ಲಾ ಬಾಂಧವರಿಗೆ ಎಳ್ಳು, ಬೆಲ್ಲ, ಕಬ್ಬು, ಸೀರೆ ವಿತರಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಹರೀಶ್ ಗೌಡ, ಇತಿಹಾಸದಲ್ಲಿ ಎಲ್ಲಾ ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ದವಾಗಿ ಆಚರಣೆ ಮಾಡುವ ಪದ್ಧತಿ ನಮ್ಮ ನಾಡಿನಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದ ಸಮಾಜದಲ್ಲಿ ಶಾಂತಿಯನ್ನು ಕದಡುವ ಯತ್ನಗಳು ನಡೆಯುತ್ತಿದ್ದು, ಅದ್ದರಿಂದ ಎಲ್ಲಾ ಸಮುದಾಯದ ಮುಖಂಡರು ಈ ಬಗ್ಗೆ ಲಕ್ಷ್ಯ ವಹಿಸಿ ಹಬ್ಬಗಳನ್ನು ಆಚರಣೆ ಮಾಡಲು ಮುಂದಾಗಬೇಕು. ಈ ದಿನ ಈ ಯುವಕರು ಒಟ್ಟಾಗಿ ಸೌಹಾರ್ದತೆ ಯಿಂದ ಹಬ್ಬವನ್ನು ಆಚರಿಸುತ್ತಿರುವುದು ಬಹಳ ಸಂತಸದ ವಿಚಾರ. ಇದೇ ಥರ ಸೌಹಾರ್ದತೆ ಆಚರಣೆ ಪ್ರತಿ ಜಿಲ್ಲೆಯಲ್ಲಿ ಆದರೆ ಬಹಳ ಉತ್ತಮ ಬೆಳವಣಿಗೆ ರಾಜ್ಯದಲ್ಲಿ ಕಾಣಲು ಸಾಧ್ಯವಿದೆ ಎಂದರು.

ಹಿರಿಯ ಮುಖಂಡರಾದ ಕಾಂತಿಲಾಲ್ ಜೈನ್, ಮಹದೇವ್, ಕನಕದಾಸ ಪತ್ರಿನ ಸಹಕಾರ ಸಂಘದ ನಿರ್ದೇಶಕರಾದ ರವಿಚಂದ್ರ ನವೀನ್, ಗುರುರಾಜ್, ನಂಜುಂಡಸ್ವಾಮಿ, ಸಂತೋಷ, ಇಮ್ರಾನ್ ಖಾನ, ಫಾತಿಮಾ, ಮುನ್ನಿ, ಇಸ್ರಾಮ, ಮಂಗಳ, ಶ್ರೀನಿವಾಸ, ಶೆಟ್ಟಿ, ಸುಬ್ರಹ್ಮಣ್ಯ, ಲೋಕೇಶ್, ಚೇತನ, ಬೆಲು ಮಂಜುನಾಥ, ರಾಣಿ, ಜಗದೀಶ್, ಹೇಮಂತ್, ಚೆಲುವರಾಜು, ಮತ್ತಿತರರು ಉಪಸ್ಥಿತರಿದ್ದರು.


ಶಾಸಕ ಹರೀಶ್‌ಗೌಡರು ಮೈಸೂರಲ್ಲಿ ಸರ್ವಧರ್ಮದವರಿಗೂ ಎಳ್ಳು-ಬೆಲ್ಲ ಹಂಚಿ ಸಂಕ್ರಾಂತಿ ಶುಭಕೋರಿದರು.

ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕಾನ್ಸ್‌ಟೇಬಲ್ ಹುದ್ದೆಗೆ ಜ್ಞಾನಬುತ್ತಿಯಿಂದ ತರಬೇತಿ

ಮೈಸೂರು, ಜ.16(ಐಎಲ್‌ಯು)– ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಲಿಖಿತ ಪರೀಕ್ಷೆ ಬರೆಯುವವರಿಗೆ ಮೈಸೂರಿನ ಜ್ಞಾನಬುತ್ತಿ ಸಂಸ್ಥೆ ತರಬೇತಿ ನೀಡಲಿದೆ.

ಸಂಸ್ಥೆಯಲ್ಲಿ ಈಗಾಗಲೇ ತರಬೇತಿ ಪಡೆದಿರುವ ನೂರಾರು ಅಭ್ಯರ್ಥಿಗಳು ಪೊಲೀಸ್ ಇಲಾಖೆಯ ವಿವಿಧ ಹುದ್ದೆಗೆ ನೇಮಕಗೊಂಡಿದ್ದಾರೆ. ಈ ಬಾರಿ ಕೂಡ ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಗೆ ಗುಣಮಟ್ಟದ ಮಾರ್ಗದರ್ಶನ ನೀಡಲು ಸಂಸ್ಥೆ ಸಜ್ಜಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ತಿಳಿಸಿದ್ದಾರೆ. ಆಸಕ್ತ ಅಭ್ಯರ್ಥಿಗಳು ಜನವರಿ 23ರೊಳಗೆ ಸಂಜೆ 5.30ರಿಂದ ರಾತ್ರಿ 7.30 ಗಂಟೆ ಯೊಳಗೆ ತಮ್ಮ ಹೆಸರು ನೋಂದಾಯಿಸಿ ಕೊಳ್ಳಬಹುದು ಎಂದು ಹೇಳಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಯೋಜಕರಾದ ಸಿ.ಕಿರಣ್ ಕೌಶಿಕ್ (9972830857) ಮತ್ತು ಕೆ.ವೈ.ನಾಗೇಂದ್ರ (8296788251) ಅಥವಾ ಹೆಚ್.ಬಾಲಕೃಷ್ಣ (9448117455) ಅವರನ್ನು ಸಂಪರ್ಕಿಸ ಬಹುದು ಎಂದು ತಿಳಿಸಿದ್ದಾರೆ.

ಬಿಜೆಪಿ ನೇತೃತ್ವದ ಮಹಾಯುತಿ

ಬಹುತೇಕ ಅನೇಕ ಕಡೆ ಬಿಜೆಪಿ ಈ ಬಾರಿ ಗೆಲುವಿನ ನಗು ಬೀರಿರುವುದು ವಿಶೇಷ. ಇದು ಮಹಾರಾಷ್ಟ್ರದಲ್ಲಿ ಶಿವಸೇನೆಯ ಪತನದ ಸಂಕೇತವಾಗಿದೆ. ವಾರ್ಷಿಕ ಬಜೆಟ್ 74,400 ಕೋಟಿ ರೂ. ಮೀರಿರುವ ಬಿಎಂಸಿ ಯಲ್ಲಿ 9 ವರ್ಷಗಳ ವಿಳಂಬದ ನಂತರ ನಡೆದ ಚುನಾವಣೆಯಲ್ಲಿ 227 ಸ್ಥಾನಗಳಿಗೆ 1,700 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. 2017ರಲ್ಲಿ ನಡೆದ ಕೊನೆಯ ಚುನಾವಣೆಯಲ್ಲಿ, ಏಕನಾಥ್ ಶಿಂಧೆ ಮತ್ತು ಉದ್ಧವ್ ಠಾಕ್ರೆ ಒಂದಾಗಿದ್ದ ಸಂಯುಕ್ತ ಶಿವಸೇನೆ ದಶಕಗಳಿಂದ ನಿಯಂತ್ರಿಸುತ್ತಿದ್ದ ಬಿಎಂಸಿಯ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಂಡಿತ್ತು. ಈ ಬಾರಿಯ ಚುನಾವಣೆಯಲ್ಲಿ ಅವಿಭಜಿತ ಶಿವಸೇನೆ ಬೇರೆ ಬೇರೆಯಾಗಿ ಚುನಾವಣೆಗೆ ಇಳಿದಿತ್ತು.

ಬಿಎಂಸಿ ಚುನಾವಣೆಯಲ್ಲಿ ಬಿಜೆಪಿ–ಶಿವಸೇನೆ ಮೈತ್ರಿಕೂಟವು ವಿಜಯಶಾಲಿಯಾಗಿ ಹೊರಹೊಮ್ಮಿದೆ. ಮುಂಬೈ ಮಹಾನಗರ ಪಾಲಿಕೆಯಲ್ಲಿ ಬಿಜೆಪಿಯು ಐತಿಹಾಸಿಕ ಸಾಧನೆಯ ನಂತರ, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮಹಾರಾಷ್ಟ್ರ ಪ್ರಭಾವಿ ನಾಯಕನಾಗಿ ಹೊರಹೊಮ್ಮಿದ್ದಾರೆ. ಅವರ ನಾಯಕತ್ವದಲ್ಲಿ ಬಿಜೆಪಿ 2017ರಲ್ಲಿ ತನ್ನ ಹಿಂದಿನ ಗರಿಷ್ಠ 82 ಸ್ಥಾನಗಳನ್ನು ಮೀರಿದೆ. ಇದುವರೆಗೆ ಬಿಎಂಸಿಯ 227 ವಾರ್ಡ್ ಗಳಲ್ಲಿ 88ರಲ್ಲಿ ಬಿಜೆಪಿ ಗೆದ್ದಿದೆ. ಬಿಜೆಪಿಯ ಮಿತ್ರಪಕ್ಷ ಶಿವಸೇನೆ 28 ಸ್ಥಾನಗಳಲ್ಲಿ ಗೆದ್ದಿದೆ ಈ ಮಹಾಯುತಿ ಮೈತ್ರಿಕೂಟವು ಒಟ್ಟಾರೆ 120ಕ್ಕೂ ಅಧಿಕ ಸ್ಥಾನ ಗೆದ್ದು ಬೀಗಿದೆ. 29 ನಾಗರಿಕ ಸಂಸ್ಥೆಗಳ 893 ವಾರ್ಡ್ ಗಳಲ್ಲಿ 2,869 ಸ್ಥಾನಗಳಿಗೆ ಗುರುವಾರ ಮತದಾನ ನಡೆಯಿತು. ಮುಂಬೈನಲ್ಲಿ 1,700 ಸೇರಿದಂತೆ 15,931 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲು 52.94% ಮತದಾನ ದಾಖಲಾಗಿತ್ತು.

ಗೌರಿ ಲಂಕೇಶ್ ಹತ್ಯೆ ಆರೋಪಿ ಶ್ರೀಕಾಂತ್ ಪಂಗಾರ್ಕರ್‌ಗೆ ಪ್ರಚಂಡ ಗೆಲುವು!

ಮಂಬೈ, ಜ.16– ಮಹಾರಾಷ್ಟ್ರದ ಜಲ್ನಾ ಕಾರ್ಪೊರೇಷನ್‌ನ ವಾರ್ಡ್‌ನಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶ್ರೀಕಾಂತ್ ಪಂಗಾರ್ಕರ್ ಗೆದ್ದಿದ್ದಾರೆ. ಖ್ಯಾತ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿಯಾಗಿದ್ದಾರೆ.

ಶ್ರೀಕಾಂತ್ ಜಲ್ನಾದ ವಾರ್ಡ್ 13ರಿಂದ ಸ್ಪರ್ಧಿಸಿದರು. ಬಿಜೆಪಿ ಸೇರಿದಂತೆ ಇತರ ಪಕ್ಷಗಳ ಅಭ್ಯರ್ಥಿಗಳು ಕಣದಲ್ಲಿದ್ದರೆ, ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿರಲಿಲ್ಲ. ಕಳೆದ ವರ್ಷ ವಿಧಾನಸಭಾ ಚುನಾವಣೆಗೆ ಮುನ್ನ ಪಂಗಾರ್ಕರ್ ಶಿವಸೇನೆ ಸೇರಿದರು. ಆದಾಗ್ಯೂ ತೀವ್ರ ಟೀಕೆಗಳು ವ್ಯಕ್ತವಾದ ನಂತರ ಶಿಂಧೆ ತಮ್ಮ ಉಮೇದುವಾರಿಕೆಯನ್ನು ನಿಲ್ಲಿಸಿದರು. ಶಿವಸೇನೆಯ ಪರವಾಗಿ 2001–2006ರವರೆಗೆ ಜಲ್ನಾ ಪುರಸಭೆಯ ಸದಸ್ಯರಾಗಿದ್ದ ಪಂಗಾರ್ಕರ್, ಟಿಕೆಟ್ ನಿರಾಕರಿಸಿದ ನಂತರ 2011ರಲ್ಲಿ ಹಿಂದೂ ಜನಜಾಗೃತಿ ಸಮಿತಿಗೆ ಸೇರಿದರು.


ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಸೆಪ್ಟೆಂಬರ್ 2017ರಲ್ಲಿ ಬೆಂಗಳೂರಿನಲ್ಲಿರುವ ಅವರ ನಿವಾಸದಲ್ಲಿ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದರು. ಈ ಪ್ರಕರಣದಲ್ಲಿ ಬಂಧಿಸಲ್ಪಟ್ಟಿದ್ದ ಪಂಗಾರ್ಕರ್ ಅವರಿಗೆ 2024ರಲ್ಲಿ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿತು. ಇದಕ್ಕೂ ಮೊದಲು 2018ರಲ್ಲಿ ಸ್ಫೋಟಕಗಳು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡ ಪ್ರಕರಣದಲ್ಲಿ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಅವರನ್ನು ಬಂಧಿಸಿತ್ತು.

ಮಾರ್ಚ್‌ನಲ್ಲಿ ಗ್ರೀನ್‌ಲ್ಯಾಂಡ್‌ಗೆ ಟ್ರಂಪ್ ಭೇಟಿ?

ವಾಷಿಂಗ್ಟನ್, ಜ.16– ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾರ್ಚ್‌ನಲ್ಲಿ ಗ್ರೀನ್‌ಲ್ಯಾಂಡ್‌ಗೆ ಭೇಟಿ ನೀಡಲು ಯೋಜಿಸಿದ್ದಾರೆ ಎಂದು ಟ್ರಂಪ್ ಅವರ ವಿಶೇಷ ನಿಯೋಗದ ಸದಸ್ಯರೊಬ್ಬರು ಹೇಳಿದ್ದಾರೆ.

ಇಂದು (ಶುಕ್ರವಾರ) ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ನಿಯೋಗದ ಸದಸ್ಯ ಜೆಫ್ ಲ್ಯಾಂಡ್ರಿ, ಗ್ರೀನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ನಾಯಕರನ್ನು ಭೇಟಿ ಮಾಡಲು ಅಮೆರಿಕದ ಶಾಸಕರನ್ನು ಒಳಗೊಂಡ ದ್ವಿಪಕ್ಷೀಯ ನಿಯೋಗವು ಸಜ್ಜಾಗಿದೆ. ಭೇಟಿ ವೇಳೆ ಒಪ್ಪಂದ ಮಾಡಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ.



ಸುತ್ತೂರು ಜಾತ್ರಾ ಮಹೋತ್ಸವ; ಪರಂಪರೆ ಅನಾವರಣ

ಆರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಲಕ್ಷಾಂತರ ಮಂದಿ ಭಾಗಿ, ಎಲ್ಲೆಲ್ಲೂ ಹಬ್ಬದ ವಾತಾವರಣ, ಸಂಭ್ರಮ-ಸಡಗರ

● ಕೃಷಿ ಆಧುನೀಕರಣ, ವಿಜ್ಞಾನ, ತಂತ್ರಜ್ಞಾನ, ಆರೋಗ್ಯ ಕ್ಷೇತ್ರದ ಅವಿಷ್ಕಾರಗಳ ಅನಾವರಣ ● ಭಕ್ತರಿಗೆಲ್ಲ ಕಜ್ಜಾಯದ ಊಟ, ಹೂಗಳ ನಡುವೆ ನಿಂತು ಸೆಲ್ಫಿ






ಜಾಗೃತಿ ಹೆಸರಿನಲ್ಲಿ ನಡೆಯುತ್ತಿರುವ ಸುತ್ತೂರು ಜಾತ್ರೆಯ ಸಾಂಸ್ಕೃತಿಕ ಕಾರ್ಯಕ್ರಮಗಳು, ದೇಸಿ ಕ್ರೀಡೆಗಳು, ಕುಸ್ತಿ, ಭಜನೆ, ನಾಟಕ, ಜಾನಪದ, ಸೋಬಾನೆ, ರಾಗಿ ಬೀಸುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಜಾನುವಾರು ಜಾತ್ರೆ, ದೇಶಿ ತಳಿಗಳ ಉತ್ತೇಜನ, ಸಾಮೂಹಿಕ ವಿವಾಹ, ಆರೋಗ್ಯ ತಪಾಸಣೆ, ಕೃಷಿ ವಿಚಾರ ಸಂಕೀರ್ಣ, ದೋಣಿ ವಿಹಾರಕ್ಕೆ ಗಣ್ಯರು ಶ್ರೀಗಳ ಸಮ್ಮುಖದಲ್ಲಿ ಚಾಲನೆ ನೀಡಿದರು.

✍ ಹೆಚ್.ಡಿ.ರಂಗಸ್ವಾಮಿ

ನಂಜನಗೂಡು, ಜ.16– ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವಕ್ಕೆ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತಾಧಿಗಳು ಹಾಗೂ ಜನಸ್ತೋಮದ ನಡುವೆ ವೈಭವಯುತವಾಗಿ ಚಾಲನೆ ನೀಡಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿರವರ ಸಾನಿಧ್ಯದಲ್ಲಿ ಆರು ದಿನಗಳ ಕಾಲ ನಾಡಿನ ಪರಂಪರೆ ಹಾಗೂ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಜೊತೆಗೆ ಕೃಷಿಗೆ ಪೂರಕವಾಗಿ ರೈತರಿಗೆ ಉಪಯುಕ್ತ ಮಾಹಿತಿ ನೀಡುವ ಜನ ಸಾಮಾನ್ಯರ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿರುವ ಸುತ್ತೂರು ಜಾತ್ರೆಯು ವಿಭಿನ್ನತೆಗೆ ಹೆಸರುವಾಸಿಯಾಗಿದೆ.

ಜಾತ್ರಾ ಮಹೋತ್ಸವದ ಮೂಲಕ ಕೃಷಿಯಲ್ಲಿ ಆಗಿರುವ ಆಧುನಿಕ ತಂತ್ರ ಜ್ಞಾನ ನೂತನ ಯಂತ್ರೋಪಕರಣಗಳ ಪರಿಚಯ, ವಿಜ್ಞಾನ, ತಂತ್ರಜ್ಞಾನ, ಆರೋಗ್ಯ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳು, ಹೊಸ ಸಂಶೋಧನೆಗಳು, ಆರೋಗ್ಯದ ಬಗ್ಗೆ, ಮುಖ್ಯವಾಗಿ ಮೂತ್ರಪಿಂಡ, ಯುವ ಜನಾಂಗದಲ್ಲಿ ಕಾಡುತ್ತಿರುವ ಮೊಬೈಲ್ ಗೀಳು, ಆರೋಗ್ಯಕರ ಜೀವನ ಶೈಲಿಯ ಬಗ್ಗೆ ತಿಳುವಳಿಕೆ ಮೂಡಿಸುವುದು ಜಾತ್ರೆಯ ವಿಶೇಷತೆಗಳಲ್ಲಿ ಒಂದಾಗಿದೆ.

ಜಾಗೃತಿ ಯಾತ್ರೆಯ ಹೆಸರಿನಲ್ಲಿ ನಡೆಯುವ ಈ ಜಾತ್ರೆಯು ಎಲ್ಲಾ ಜಾತಿ, ಧರ್ಮದ ಜನರನ್ನು ಒಂದುಗೂಡಿಸಿ ಬೆಸೆಯುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು, ದೇಸಿ ಕ್ರೀಡೆಗಳು, ಕುಸ್ತಿ, ಭಜನೆ, ನಾಟಕ, ಜಾನಪದ, ಸೋಬಾನೆ, ರಾಗಿ ಬೀಸುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಜಾನುವಾರು ಜಾತ್ರೆ ದೇಶಿ ತಳಿಗಳ ಉತ್ತೇಜನ, ಸಾಮೂಹಿಕ ವಿವಾಹ, ಆರೋಗ್ಯ ತಪಾಸಣೆ, ಕೃಷಿ ವಿಚಾರ ಸಂಕೀರ್ಣ, ದೋಣಿ ವಿಹಾರಗಳಂತಹ ಚಟುವಟಿಕೆಗಳು, ಜಾತ್ರೆಯ ಭಾಗವಾಗಿ ಇರುವುದರಿಂದ ಗ್ರಾಮೀಣ ಭಾಗದ ಜನರಿಗೆ ಧಾರ್ಮಿಕತೆಯ ಜೊತೆಗೆ ಜನಜಾಗೃತಿಯ ಜಾತ್ರೆ ಎಂಬುದನ್ನು ಸಾಕ್ಷಿಕರಿಸುತ್ತದೆ.

> “ಹತ್ತೂರ ಜಾತ್ರೆಗಿಂತ ಸುತ್ತೂರ ಜಾತ್ರೆ ಮೇಲು ಎಂಬ ನಾಣ್ನುಡಿಯಂತೆ ಜನರು ಸಂಕ್ರಾಂತಿ ಹಬ್ಬದ ನಡುವೆಯು ಕೂಡ ಜಾತ್ರಾ ಮಹೋತ್ಸವದಲ್ಲಿ ಸಂಭ್ರಮದಿಂದ ಭಾಗಿಯಾಗಿದ್ದರು, ಅಲ್ಲದೆ ಕೃಷಿ ಮೇಳ ವಸ್ತು ಪ್ರದರ್ಶನವು ಜನಾಕರ್ಷಕ ಕೇಂದ್ರಗಳಾಗಿದ್ದವು. ಹೂವಿನ ಬೆಳೆಗಳ ಚೆಲುವಿಗೆ ಮನಸೋತು ಹೂವಿನ ನಡುವೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ದೃಶ್ಯ ಸಾಮಾನ್ಯವಾಗಿತ್ತು. ವಿಶೇಷವಾಗಿ ಜಾನುವಾರು ದೇಶಿ ತಳಿಗಳ ಪ್ರದರ್ಶನವು ಆಕರ್ಷಕವಾಗಿದ್ದು ಮತ್ತು ದೇಶಿಯ ತಳಿಗಳಾದ ಮಲೆನಾಡು ಗಿಡ್ಡ, ಸಾಹಿವಾಲ್, ಪುಂಗನೂರು, ಗಿರ್, ಸೇರಿದಂತೆ ಮೇಕೆ, ಕುರಿ ಪ್ರದರ್ಶನ ರೈತರ ಮನಸೂರೆಗೊಂಡಿತು.

ಜನಜಾಗೃತಿಯ ಯಾತ್ರೆಯ ಹೆಸರಿನಲ್ಲಿ ನಡೆಯುವ ಜಾತ್ರಾ ಮಹೋತ್ಸವವನ್ನು, ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಗುರುವಾರ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಜಗದೀಶ್ ಶೆಟ್ಟರ್, ಜಾತ್ರಾ ಮಹೋತ್ಸವದ ಭಾಗವಾದ ವಸ್ತು ಪ್ರದರ್ಶನ ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳವನ್ನು ಉದ್ಘಾಟಿಸಿದರು. ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರವನ್ನು ಸಂಸದ ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು. ಸಮಾರಂಭದಲ್ಲಿ ಚಿಕ್ಕಮಗಳೂರು ಶಾಸಕ ಎಚ್.ಡಿ.ತಮ್ಮಯ್ಯ, ವಿಧಾನಪರಿಷತ್ ಸದಸ್ಯ ಶಿವಕುಮಾರ್, ತಮಿಳುನಾಡಿನ ಭವಾನಿ ಸಾಗರದ ಶಾಸಕ ಎ.ಬಣ್ಣಾರಿ, ಶಿಲ್ಪ ಜಗದೀಶ್ ಶೆಟ್ಟರ್, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಅಥಣಿಯ ಗುಜ್ಜಿನಮಠದ ಶ್ರೀ ಶಿವಬಸವ ಸ್ವಾಮೀಜಿ, ಉಪ್ಪಿನ ಬೆಟಗೇರಿ ಮೂರು ಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ, ಅಮಿನಗಡ ಪ್ರಭುಶಂಕರ ಮಠದ ಶ್ರೀ ಶಂಕರ ರಾಜೇಂದ್ರ ಸ್ವಾಮೀಜಿ, ಶುಭ ಸಂದೇಶವನ್ನು ನೀಡಿದರು.

ಇದಕ್ಕೂ ಮುನ್ನ ಕರ್ತೃ ಗದ್ದಿಗೆ ಆವರಣದಲ್ಲಿ ಮುಂಜಾನೆ 4 ಗಂಟೆಗೆ ಮಹಾ ಸಂಕಲ್ಪ ಪೂರ್ವಕ ರುದ್ರಾಭಿಷೇಕ, ಭಾಗ್ಯೋದಯ ಪೂಜೆ, ಬೆಳಿಗ್ಗೆ 6:30ಕ್ಕೆ ಗ್ರಾಮದ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ನಂತರ ತಾಲೂಕಿನ ಡಣಾಯಕನಪುರ ಗ್ರಾಮದಲ್ಲಿ ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥ ಸಂಚಲನವನ್ನು ನಡೆಸಲಾಯಿತು, ನಂತರ ಬೆಳಗ್ಗೆ 7.30ಕ್ಕೆ ಕೆ.ಆರ್.ಪೇಟೆ ತಾಲೂಕಿನ ಕಾಪಿನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಚನ್ನವೀರ ಸ್ವಾಮೀಜಿಗಳು, ಶ್ರೀ ಅಭಿನವ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಧರ್ಮ ಸಂದೇಶವನ್ನು ನೀಡಿದರು. ಬೆಳಿಗ್ಗೆ 10 ಗಂಟೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಮಹಾರುದ್ರಾಭಿಷೇಕ, ನಂತರ ಕಪಿಲಾ ನದಿಯಿಂದ ಹಸು–ಕರುವಿನೊಂದಿಗೆ ಅಘೋಧಕವನ್ನು ತಂದು ಅಷ್ಟೋತ್ತರ ಕುಂಭೋತ್ಸವವನ್ನು ನಡೆಸಲಾಯಿತು.

ನಂತರ 11.30ಕ್ಕೆ ಅನ್ನ ಬ್ರಹ್ಮೋತ್ಸವ ಮಹಾಮಂಗಳಾರತಿ ನೆರವೇರಿಸಲಾಯಿತು. ಸಂಜೆ 6.30ಕ್ಕೆ ಮೂಲಮಠದಿಂದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಿ ಮೂಲಮಠದಿಂದ ಕರ್ತೃ ಗದ್ದುಗೆವರೆಗೆ, ನಾದಸ್ವರ, ಛತ್ರಿ, ಚಾಮರ, ಬಿರುದು ಬಾವಲಿಗಳೊಂದಿಗೆ, ವಿವಿಧ ಜಾನಪದ ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆ ಮೂಲಕ ಕರೆತಂದು ಶ್ರೀಮಠದಲ್ಲಿ ಬಿಜಂಗಯ್ಯಲಾಯಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರೆಗು ನೀಡಿದವು.

ಲಕ್ಷಾಂತರ ಜನರು ದಾಸೋಹದಲ್ಲಿ ಭಾಗಿಯಾಗಿ ಪ್ರಸಾದ ಸೇವಿಸಿದರು. ಈ ಬಾರಿ ಎಲ್ಲರಿಗೂ ಕಜ್ಜಾಯ ಊಟ ಬಡಿಸುತ್ತಿರುವುದು ವಿಶೇಷವಾಗಿದೆ.

ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡಿರುವ ಜನಸಾಗರ



ಸುತ್ತೂರು ಶ್ರೀ ಕ್ಷೇತ್ರದ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ನಡೆದ ಉಚಿತ ಸಾಮೂಹಿಕ ವಿವಾಹದಲ್ಲಿ ವಧು–ವರರು ಮತ್ತು ಸಂಬಂಧಿಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದನ್ನು ಕಾಣಬಹುದು. ಚಿತ್ರ: ಸುತ್ತೂರು ನಂಜುಂಡನಾಯಕ

ಸಾಮೂಹಿಕ ವಿವಾಹದಲ್ಲಿ ಗಮನ ಸೆಳೆದ ವಿಶೇಷ ಜೋಡಿಗಳು

ಸಾಮೂಹಿಕ ವಿವಾಹದಲ್ಲಿ ಕೆಲವು ವಿಶೇಷ ಜೋಡಿಗಳು ನೆರೆದಿದ್ದ ಸಹಸ್ರಾರು ಜನರ ಗಮನ ಸೆಳೆದವು.

ಕೊಳ್ಳೇಗಾಲ ತಾಲೂಕಿನ ಚಿಕ್ಕಿಂದುವಾಡಿ ಗ್ರಾಮದ ಹೇಮಾವತಿ ಪೋಲಿಯೋಗೆ ತುತ್ತಾಗಿ ಕಾಲು ಕಳೆದುಕೊಂಡಿದ್ದು, ಹನೂರು ತಾಲೂಕಿನ ಆರ್.ಜಡೆಸ್ವಾಮಿ ಹೇಮಾವತಿಯ ಕೈಹಿಡಿದು ಬದುಕಿನ ಭರವಸೆ ನೀಡಿದರು.



ಹೇಮಾವತಿ ಮತ್ತು ಆರ್.ಜಡೇಸ್ವಾಮಿ

ಹೆಚ್.ಡಿ.ಕೋಟೆ ತಾಲೂಕಿನ ನೇರಳೆ ಗ್ರಾಮದ ವಾಸಿ ಕಣ್ಣಿನ ತೊಂದರೆಯಿರುವ ರೇಖಾರವರನ್ನು, ಸರಗೂರು ತಾಲೂಕಿನ ಹೂವಿನ ಕೊಳದ ಹೆಚ್.ಎಂ. ಸುರೇಶ್ ವರಿಸುವ ಮೂಲಕ ಅವರ ಬಾಳಿಗೆ ಬೆಳಕಾದರು.



ಎನ್.ಪಿ. ರೇಖಾ ಮತ್ತು ಹೆಚ್.ಎಂ. ಸುರೇಶ್

ನಂಜನಗೂಡು ತಾಲೂಕಿನ ಮಲ್ಲಹಳ್ಳಿಯ ಕಣ್ಣಿನ ದೋಷವಿರುವ ರೈತ ಸಿ. ಚಿನ್ನಸ್ವಾಮಿ ಅವರನ್ನು, ಚಾಮರಾಜನಗರ ತಾಲೂಕಿನ ಕಾಡಹಳ್ಳಿ ಗ್ರಾಮದ ಸಾಕಮ್ಮ ಮದುವೆಯಾಗುವ ಮೂಲಕ ಹೊಸ ಬಾಳಿಗೆ ಕಾಲಿಟ್ಟರು.



ಸಾಕಮ್ಮ ಮತ್ತು ಸಿ ಚಿನ್ನಸ್ವಾಮಿ

ಅಲ್ಲದೆ ಚಾಮರಾಜನಗರದ ರಾಮಸಮುದ್ರದ ಅಂಗನವಾಡಿ ಶಿಕ್ಷಕಿ ಪಿ.ಚಂದ್ರಮ್ಮ ಅವರನ್ನು ಅದೇ ಗ್ರಾಮದ ಮಹೇಶ್ ಮರು ಮದುವೆಯಾಗುವ ಮೂಲಕ ಹೊಸಜೀವನ ನೀಡಿದರು.

ಚಾಮರಾಜನಗರ ಬದನಗುಪ್ಪೆ ಗ್ರಾಮದ ಬಿ.ಸುರೇಶ, ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದ ಅಂಗನವಾಡಿ ಶಿಕ್ಷಕಿ ಸಿ.ಅಕ್ಕಮಹಾದೇವಿಯನ್ನು ಮರು ಮದುವೆಯಾದರು.

ನಿರಂತರ ದಾಸೋಹ...

ಸುತ್ತೂರು ಜಾತ್ರಾ ಮಹೋತ್ಸವದ ಮುನ್ನಾ ದಿನವಾದ ಬುಧವಾರ ಆರಂಭವಾದ ಸೌದೆ ಒಲೆಯ ಅಡುಗೆ ತಯಾರಿಕೆ ಕಾರ್ಯ ನಿರಂತರವಾಗಿ ಮುಂದುವರೆದಿದ್ದು, ಜಾತ್ರೆಯಲ್ಲಿ ಪಾಲ್ಗೊಂಡಿರುವ ಸಾರ್ವಜನಿಕರಿಗೆ ಬೆಳಗಿನ ಉಪಹಾರ ಸೇರಿದಂತೆ ಮಹಾ ದಾಸೋಹ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಅದರಲ್ಲೂ ಈ ಬಾರಿ ಕಜ್ಜಾಯದ ಊಟವನ್ನು ವಿಶೇಷವಾಗಿ ಬಡಿಸಲಾಗುತ್ತಿದೆ.

ಭಜನಾ ಮೇಳ, ದೇಶಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ ಉದ್ಘಾಟನೆ

ಕಾವಿ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ: ಶೋಭಾ ಕರಂದ್ಲಾಜೆ

ನಂಜನಗೂಡು: ಆಧ್ಯಾತ್ಮಿಕತೆ ಭಾರತ ದೇಶದ ಆತ್ಮ, ನಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮ ಆಚಾರ, ವಿಚಾರವನ್ನು ಸಂರಕ್ಷಿಸುತ್ತಿರುವ ಕಾವಿ ಬಟ್ಟೆ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ ಎಂದು ಕೇಂದ್ರ ಕಾರ್ಮಿಕ, ಉದ್ಯೋಗ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಅವರು ಶ್ರೀ ಕ್ಷೇತ್ರ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ರಾಜ್ಯ ಮಟ್ಟದ ಭಜನಾ ಮೇಳ ಮತ್ತು ದೇಶಿ ಆಟಗಳು, ಸೋಬಾನೆ ಪದ ರಂಗೋಲಿ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ ಸುತ್ತೂರು ಮಠವು ಶಿಕ್ಷಣ ದಾಸೋಹ ಆಧ್ಯಾತ್ಮಿಕತೆಯನ್ನು ಮೀರಿ ದೇಶಕ್ಕೆ ಅನ್ನ ಕೊಡುವ ರೈತರಿಗೆ ನೀರು ಒದಗಿಸುವ ಕೆಲಸವನ್ನು ಮಾಡಿದೆ, ಶ್ರೀಗಳ ದೂರ ದೃಷ್ಟಿಯ ಫಲವಾಗಿ ನಾನು ನೀರಾವರಿ ಸಚಿವನಾಗಿದ್ದ ವೇಳೆ ಸುತ್ತೂರು ಶ್ರೀಗಳ ಸಲಹೆಯಂತೆ ಚಾಮರಾಜನಗರ ಭಾಗದ ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಿದ್ದೇನೆ.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಒಂದು ಮಠ ಯಾವ ಆಯಾಮಗಳಲ್ಲಿ ಸೇವೆ ಸಲ್ಲಿಸಬಹುದು, ಎಂಬುದಕ್ಕೆ ಸುತ್ತೂರು ಮಠ ನಿದರ್ಶನವಾಗಿದೆ, ಸುತ್ತಮುತ್ತಲ ರೈತರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳನ್ನು ತುಂಬಿಸಿದ ಕೀರ್ತಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗೆ ಸಲ್ಲುತ್ತದೆ. ಮಠಮಾನ್ಯಗಳು ಸಾತ್ವಿಕತೆಯ ಜೊತೆಗೆ ಯಾವ ರೀತಿ ಸಂಘಟನೆ ಮಾಡಬಹುದು ಎಂಬುದಕ್ಕೆ ಸುತ್ತೂರು ಮಠ ಸಾಕ್ಷಿಯಾಗಿದೆ, ಅಲ್ಲದೆ ಭಾರತದ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪಸರಿಸುವ ಸಲುವಾಗಿ ಮುಸ್ಲಿಂ ಬಾಹುಳ್ಯಯುಳ್ಳ ದುಬೈ ಮತ್ತು ಅಮೆರಿಕದಲ್ಲೂ ಸಹ ಸುತ್ತೂರು ಮಠ ದೇವಾಲಯಗಳನ್ನು ನಿರ್ಮಿಸಿರುವುದು ಸನಾತನ ಧರ್ಮದ ವಿಜಯದ ಸಂಕೇತವಾಗಿದೆ ಎಂದರು.




ಭಜನಾಮೇಳ, ದೇಶಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ ಉದ್ಘಾಟನೆ.

ವಿಶೇಷ ಬಸ್ ವ್ಯವಸ್ಥೆ



ಸುತ್ತೂರು ಜಾತ್ರೆಗೆ ವಿಶೇಷ ಬಸ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಸುತ್ತೂರು ಬಸ್ ನಿಲ್ದಾಣದಲ್ಲಿ ನಿಂತಿರುವ ಬಸ್‌ಗಳನ್ನು ಚಿತ್ರದಲ್ಲಿ ಕಾಣಬಹುದು.

ಜನಾಕರ್ಷಣೆ ಕೇಂದ್ರವಾದ ಕೃಷಿ ಮೇಳ



ನಂಜನಗೂಡು, ಜ. 16– ಧಾರ್ಮಿಕತೆಯ ಜೊತೆಗೆ ನಾಡಿನ ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಉತ್ತೇಜನ ನೀಡುವ ಜನ ಜಾತ್ರೆಯಾಗಿರುವ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ರೈತರಿಗೆ ಆಧುನಿಕ ತಂತ್ರಜ್ಞಾನಗಳ ಬಗ್ಗೆ ಪೂರಕ ಮಾಹಿತಿಯನ್ನು ತಿಳಿಸುವ ಕೃಷಿಮೇಳವು ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ.

ಕೃಷಿ ಮೇಳವನ್ನು ಪ್ರವೇಶಿಸುತ್ತಿದ್ದಂತೆ ಎಡ ಮತ್ತು ಬಲಭಾಗಗಳಲ್ಲಿ ಮಾನವನ ಸಮಗ್ರ ಆರೋಗ್ಯಕ್ಕೆ ಪೂರಕವಾದ ಸೊಪ್ಪು ತರಕಾರಿ, ದ್ವಿದಳ ಧಾನ್ಯಗಳ ಬೆಳೆಗಳನ್ನು ಪರಿಚಯಿಸಲಾಗಿದೆ, ಹನಿ ನೀರಾವರಿ ಪದ್ಧತಿ ಅಳವಡಿಕೆ ಮಾಡಿಕೊಂಡು ಬೆಳೆದಿರುವ ಬೆಳೆಗಳು ರೈತರಿಗೆ ಆಧುನಿಕ ಕೃಷಿ ಪದ್ಧತಿಯ ಮಾರ್ಗದರ್ಶನ ನೀಡಲಿವೆ. ಅಲ್ಲದೆ ರೋಗಮುಕ್ತವಾಗಿ ಬೆಳೆಗಳನ್ನು ಬೆಳೆಯಲು ಮತ್ತು ಗಿಡಗಳಿಗೆ ತಕ್ಕನಾದ ಪೋಷಕಾಂಶಗಳನ್ನು ಒದಗಿಸಲು ಕ್ಯಾಪ್ಸುಲ್ (ಮಾತ್ರೆಯ) ಮೂಲಕ ನೀಡು ಗೊಬ್ಬರ ಪೋಷಕಾಂಶಗಳನ್ನು ಒದಗಿಸಬಹುದು ಎಂಬ ಬಗ್ಗೆ ರೈತರಿಗೆ ತಿಳುವಳಿಕೆ ಮೂಡಿಸುವ ಕೆಲಸ ಸದ್ದಿಲ್ಲದೆ ನಡೆದಿದೆ.



ಗಮನ ಸೆಳೆದ ನಂ.ಗೂಡು ರಸಬಾಳೆ, ವೀಳ್ಯೆದೆಲೆ, ಮೈಸೂರು ಮಲ್ಲಿಗೆ

ಭೌಗೋಳಿಕ ಹೆಗ್ಗುರುತುಗಳಾದ ನಂಜನಗೂಡು ರಸಬಾಳೆ, ಮೈಸೂರು ವೀಳ್ಯೆದೆಲೆ, ಮತ್ತು ಮೈಸೂರು ಮಲ್ಲಿಗೆ ಬೆಳೆಗಳು ಅಳಿವಿನ ಅಂಚಿಗೆ ತಲುಪಿದ್ದು ಈ ಬೆಳೆಗಳನ್ನು ಪ್ರೋತ್ಸಾಹಿಸಿ ತಳಿಗಳನ್ನು ಉಳಿಸುವ ಕೆಲಸಕ್ಕೆ ಈ ಬಾರಿಯ ಕೃಷಿ ಮೇಳದಲ್ಲಿ ಪ್ರಾಮುಖ್ಯತೆ ವಹಿಸಲಾಗಿದೆ.



ನಂಜನಗೂಡು ರಸ ಬಾಳೆ ಪನಾಮ ವಿಲ್ಟ್ ರೋಗ ಅಥವಾ ಸೊರಗು ರೋಗ ಸಾಮಾನ್ಯವಾಗಿ ಪ್ರಾರಂಭದಲ್ಲಿ ಪತ್ತೆಯಾಗುವುದಿಲ್ಲ ಇದು ಏಳು ತಿಂಗಳ ನಂತರ ಗೊತ್ತಾಗುತ್ತದೆ ರೋಗ ಮುಕ್ತವಾಗಿ ಹೇಗೆ ನಂಜನಗೂಡು ರಸ ಬಾಳೆ ಬೆಳೆಯಬಹುದು ಎಂಬ ಬಗ್ಗೆ ಹಾಗೂ ನಶ್ವರ ಸ್ಥಿತಿಯಲ್ಲಿರುವ ನಂಜನಗೂಡು ರಸ ಬಾಳೆ, ಮೈಸೂರು ವೀಳ್ಯದೆಲೆ, ಮೈಸೂರು ಮಲ್ಲಿಗೆ, ಈರಂಗೆರೆ ಬದನೆ ಬೆಳೆಗಳಿಗೆ ತಕ್ಕ ಮಾರುಕಟ್ಟೆ ಕಲ್ಪಿಸಿ ತಕ್ಕ ಬೆಲೆಯನ್ನು ಒದಗಿಸಿ ಪ್ರೋತ್ಸಾಹಿಸಲು ವಿದೇಶಗಳಿಗೆ ರಫ್ತು ಮಾಡುವ ಬಗ್ಗೆಯೂ ಸಹ ಈ ಬಾರಿಯ ಕೃಷಿ ಮೇಳದಲ್ಲಿ ರೈತರಿಗೆ ಮಾರ್ಗದರ್ಶನ ನೀಡುವ ಕೆಲಸ ನಡೆದಿದೆ.

ಜ್ಯೋತಿ ತಳಿಯ ಭತ್ತದ ಬೆಳಗೆ ಹೆಚ್ಚು ರೋಗ ಇರುವುದರಿಂದ, ಜ್ಯೋತಿ ತಳಿಗೆ ಸಮಾನವಾಗಿ ಸಹ್ಯಾದ್ರಿ ಕೆಂಪು, ಕೆಎಂಪಿ 220, ದ್ಷ ಕೆಎಂಪಿ 225 ತಳಿಯ ನಾಲಕ್ಕು ತಳಿಗಳ ಭತ್ತದ ಬೆಳೆಯನ್ನು, ರೋಗ ಮುಕ್ತವಾಗಿ ಬೆಳೆಯಬಹುದು ಎಂಬ ಬಗ್ಗೆಯೂ ಪ್ರಾತ್ಯಕ್ಷಿಕೆ ನೀಡಲಾಗಿದೆ.

ಮಹಿಳೆಯರ ಆರೋಗ್ಯದ ದೃಷ್ಟಿಯನ್ನು ಇಟ್ಟುಕೊಂಡು ಬೆಳೆದಿರುವ ಪೋಷಕಾಂಶಯುಕ್ತ ಬೆಳೆಗಳಾದ ಚಕ್ರಮುನಿ, ನುಗ್ಗಿ ಸೊಪ್ಪು, ಹಸಿರು ತರಕಾರಿ ಬೆಳೆಗಳು ವಿಶೇಷತೆಗಳಲ್ಲಿ ಒಂದಾಗಿದೆ.

ಕೃಷಿಗೆ ಪೂರಕವಾಗಿ ಮೀನು ಸಾಕಾಣಿಕೆ, ಪಶು ಸಂಗೋಪನೆ, ವಿವಿಧ ಜಾತಿಯ ಹೂಗಳ ಬೆಳೆಯನ್ನು ಬೆಳೆದು ರೈತರ ಆದಾಯವನ್ನು ಹೆಚ್ಚಿಸಿಕೊಳ್ಳುವ ಬಗೆಯನ್ನು ಮತ್ತು ದೇಶಿ ತಳಿಗಳನ್ನು ಪರಿಚಯಿಸಲಾಗಿದೆ.

ಕೃಷಿ ಮೇಳದಲ್ಲಿ ಆಧುನಿಕ ಕೃಷಿಗೆ ಪೂರಕವಾದ ಆವಿಷ್ಕಾರಗಳನ್ನು ರೈತರಿಗೆ ಪರಿಚಯಿಸುವ ಕೆಲಸವನ್ನು ಮಾಡಲಾಗುತ್ತದೆ. ಅತಿ ಸಣ್ಣ ರೈತರನ್ನು ಗಮನದಲ್ಲಿಟ್ಟುಕೊಂಡು ಒಂದು ಎಕರೆ ಪ್ರದೇಶದಲ್ಲಿ ಕೃಷಿ ಬ್ರಹ್ಮಾಂಡ ಪ್ರಾಥಕ್ಷಿಕೆ ಮೂಲಕ ಕಣಿ ಖರ್ಚಿನಲ್ಲಿ ಒಂದು ಸಣ್ಣ ಕುಟುಂಬ ಹೇಗೆ ಸ್ವಾವಲಂಬಿಯಾಗಿ ಬದುಕಬಹುದು ಎಂಬ ಬಗ್ಗೆ ಸುಸ್ಥಿರ ಕೃಷಿ ಪದ್ಧತಿಯನ್ನು ಅನಾವರಣ ಮಾಡಲಾಗಿದೆ.

ಇದರೊಂದಿಗೆ ಸಾಧಾರಣವಾಗಿ ಕಬ್ಬಿನ ಬೆಳೆಯಲ್ಲಿ ರೈತರು ಅಂತರ ಬೆಳೆಯನ್ನು ಬೆಳೆಯುವುದಿಲ್ಲ ಕೃಷಿ ಬ್ರಹ್ಮಾಂಡದಲ್ಲಿ ಕಬ್ಬಿನ ಅಂತರ ಬೆಳೆಯಾಗಿ ಅವರೆ, ಹಲಸಂದೆ, ಉದ್ದು, ಹೆಸರು ಕಾಳು, ದ್ವಿದಳ ಧಾನ್ಯಗಳನ್ನು ಬೆಳೆಯುವ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸಲು ಮತ್ತು ಮುಖ್ಯ ಬೆಳೆಯ ಇಳುವರಿಯನ್ನು ಹೆಚ್ಚಿಸಬಹುದು ಎಂಬ ಬಗ್ಗೆ ತಿಳಿಸಲಾಗಿದೆ. ಮುಸುಕಿನ ಜೋಳ ಬೆಳೆಯಲ್ಲಿ ಆರು ಸಾಲು ಮುಸುಕಿನ ಜೋಳ ಎರಡು ಸಾಲು ತೊಗರಿ ಬೆಳೆಗಳನ್ನು ಅಕ್ಕಡಿ ಸಾಲು ಪದ್ಧತಿಯಲ್ಲಿ ಬೆಳೆದು ಒಂದು ಬೆಳೆ ಕೈ ಕೊಟ್ಟಲ್ಲಿ ಹೇಗೆ ಮತ್ತೊಂದು ಬೆಳೆಯಲ್ಲಿ ಆದಾಯಗಳಿಸಬಹುದು.



ಗಮನ ಸೆಳೆಯುವ ಟೊಮೊಟೊ ಕಸಿ



ಸಾಧಾರಣವಾಗಿ ಟೊಮೊಟೊ ಬೆಳೆಯು ಮೂರು ತಿಂಗಳಲ್ಲಿ ಸಂಪೂರ್ಣ ಬೆಳೆಯು ಮುಕ್ತಾಯಗೊಳ್ಳಲಿದೆ, ಮಳೆ ಮತ್ತು ಶೀತ ಗುಣ ಪ್ರದೇಶದಲ್ಲಿ ಟೊಮೋಟೊ ಬೆಳೆದಲ್ಲಿ ಫಸಲು ನಾಶವಾಗಲಿದೆ, ಇದನ್ನು ತಪ್ಪಿಸಲು ಕಾಡು ಬದನೆಯ ಕಾಂಡಕ್ಕೆ ಟಮೋಟೊ ಪೈರಿನ ಕಸಿ ಮಾಡುವ ಮೂಲಕ ಒಂದು ವರ್ಷದವರೆಗೆ ಬೆಳೆಯನ್ನು ಉಳಿಸಿಕೊಂಡು ಹೆಚ್ಚು ಇಳುವರಿಯನ್ನು ಪಡೆಯಬಹುದು ಎಂಬ ಬಗ್ಗೆ ಬೆಳೆಯ ಮೂಲಕ ಪರಿಚಯಿಸಲಾಗಿದ್ದು, ರೈತರು ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬಹುದು. ಅಲ್ಲದೆ ಕಾಡು ಬದನೆಯ ಕಾಂಡಕ್ಕೆ ಕಸಿ ಕಟ್ಟಿ ಬದನೆ ಬೆಳೆಯುವ ಪದ್ಧತಿಯನ್ನು ಪರಿಚಯಿಸಲಾಗಿದೆ. ಜೊತೆಗೆ ನೈಸರ್ಗಿಕ ಕೃಷಿ ಪದ್ಧತಿ, ಮೇವು ಬೆಳೆಗಳು, ಸಲಾಡ್ ಬೆಳೆಗಳು, ಕೆಂಪು ಬೆಂಡೆಕಾಯಿ, ಸುಂಡೆ ಬದನೆ ನೇರಳೆ ಬೀನ್ಸ್ ಬೆಳೆಗಳು ನೋಡುಗರ ಕಣ್ಮನ ಸೆಳೆಯುತ್ತಿದೆ.

ಮೈಸೂರು ಮಿತ್ರ

ತಂದೆ ಹತ್ಯೆ ಮಾಡಿದ್ದ ಮಗ, ತೋಟದ ಮಾಲೀಕ ಸೇರಿ 8 ಮಂದಿ ಬಂಧನ



ಪ್ರಶಾಂತ್ ಮುದಿ, ದೇವಯ್ಯ ಎಂ.ಎಸ್, ಭಾರತಿ ಎಂ.ಡಿ, ಶ್ರೀಕಾಂತ್ ಮುದಿ, ಸುಧನ್ ಮುದಿ, ಲಕ್ಷ್ಮೀ ಮುದಿ, ತನುಶ್ರೀ, ಬಸಂತಿ ಮುದಿ

ಮಡಿಕೇರಿ, ಜ.16–ತಂದೆಯನ್ನು ಕೊಲೆ ಮಾಡಿ ಬಳಿಕ ತೋಟದ ಮಾಲೀಕರ ಸಹಕಾರದಿಂದ ಮೃತ ದೇಹವನ್ನು ಸುಟ್ಟು ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಹೊಸ್ಕೇರಿ ನಿವಾಸಿಗಳಾದ ಅಸ್ಸಾಂ ಮೂಲದ ಪ್ರಶಾಂತ್ ಮುದಿ(27), ಕಾಫಿ ತೋಟದ ಮಾಲೀಕ ದೇವಯ್ಯ ಎಂ.ಎಸ್(71), ಆತನ ಪತ್ನಿ ಭಾರತಿ ಎಂ.ಡಿ(57), ತೋಟದ ಕಾರ್ಮಿಕರಾದ ಶ್ರೀಕಾಂತ್ ಮುದಿ(25), ಸುಧನ್ ಮುದಿ(50), ಲಕ್ಷ್ಮೀ ಮುದಿ(37), ತನುಶ್ರೀ(20) ಹಾಗೂ ಬಸಂತಿ ಮುದಿ(49) ಬಂಧಿತ ಆರೋಪಿಗಳಾಗಿದ್ದಾರೆ.



ಕೊಲೆ ಮಾಡಿ ಮೃತದೇಹ ಸುಟ್ಟು ಹಾಕಿ ಸಾಕ್ಷ್ಯ ನಾಶಪಡಿಸಿದ ಪ್ರಕರಣದ ತನಿಖೆ ಮುಂದುವರೆದಿದೆ. ಮೃತ ದೇಹ ಸಾಗಾಟ ಮತ್ತು ಸಾಕ್ಷಿ ನಾಶದಲ್ಲಿ ತೋಟದ ಮಾಲೀಕರ ಪಾತ್ರ ಯಾವ ರೀತಿಯದ್ದಾಗಿದೆ ಎಂಬ ಬಗ್ಗೆಯೂ ಸಂಪೂರ್ಣ ತನಿಖೆ ನಡೆಸಲಾಗುತ್ತಿದೆ. ವಿಧಿ ವಿಜ್ಞಾನ ಮತ್ತು ತಾಂತ್ರಿಕವಾಗಿಯೂ ಪರಿಶೀಲನೆ ನಡೆಸಲಾಗುತ್ತದೆ. ತನಿಖೆ ಪೂರ್ಣಗೊಂಡ ಬಳಿಕ ಆರೋಪಿಗಳ ವಿರುದ್ಧ ದೋಷಾರೋಪಣಾ ವರದಿ ಸಲ್ಲಿಸಲಾಗುತ್ತದೆ.
–ಬಿಂದುಮಣಿ, ಕೊಡಗು ಎಸ್.ಪಿ.

ಜ.11ರಂದು ರಾತ್ರಿ ಬುರೋ ಮುದಿ ಹಾಗೂ ಅವರ ಪುತ್ರ ಪ್ರಶಾಂತ್ ಮುದಿ ಮದ್ಯಪಾನ ಮಾಡಿ ಕೌಟುಂಬಿಕ ಕಾರಣಕ್ಕೆ ಜಗಳವಾಡಿದ್ದರು. ಪ್ರಶಾಂತ್ ಮುದಿ ದೊಣ್ಣೆಯಿಂದ ಹಲ್ಲೆ ಮಾಡಿದ್ದ ರಿಂದ ತಂದೆ ಬುರೋ ಮುದಿ ಮೃತಪಟ್ಟಿದ್ದರು.

ಜ.12ರಂದು ತೋಟದ ಮಾಲೀಕ ದೇವಯ್ಯ ಮತ್ತವರ ಪತ್ನಿ ಹಾಗೂ ಇತರ ಕಾರ್ಮಿಕರ ಸಹಕಾರದಿಂದ ಬುರೋ ಮುದಿಯ ಮೃತ ದೇಹವನ್ನು ಹಿಂದೂ ರುದ್ರಭೂಮಿಯಲ್ಲಿ ಸುಟ್ಟು ಹಾಕಿದ್ದರು. ಈ ಸಂಬಂಧ ಜ.13ರಂದು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ನಡೆಸಿದ ಪೊಲೀಸರು ಕೊಲೆ ಆರೋಪಿ ಸಹಿತ ಸಾಕ್ಷ್ಯ ನಾಶ ಮಾಡಿರುವ ಆರೋಪದಲ್ಲಿ 8 ಮಂದಿಯನ್ನು ಬಂಧಿಸಿದ್ದಾರೆ. ಮೃತ ವ್ಯಕ್ತಿ ಬುರೋ ಮುದಿ ಸಹಿತ 6ಮಂದಿ ಆರೋಪಿಗಳು ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದು, ತೊಟದ ಮಾಲೀಕದೇವಯ್ಯರ ಲೈನ್ ಮನೆಯಲ್ಲಿ 7 ವರ್ಷದಿಂದ ನೆಲೆಸಿದ್ದರು.

ಡಿವೈಎಸ್‌ಪಿ ಪಿ.ಎ, ಸೂರಜ್, ಗ್ರಾಮಾಂತರ ಠಾಣೆಯ ವೃತ್ತ ನಿರೀಕ್ಷಕ ಹೆಚ್.ವಿ, ಚಂದ್ರಶೇಖರ್ ಠಾಣಾಧಿಕಾರಿ ಜವರೇ ಗೌಡ, ಅಪರಾಧ ಪತ್ತೆ ಸಿಬ್ಬಂದಿ ಪರಿಶೀಲನಾ ತಜ್ಞರ ತಂಡ ತನಿಖಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಗ್ಯಾರಂಟಿ ಯೋಜನೆಗಳಿಂದ ಗ್ರಾಮೀಣ ಅಭಿವೃದ್ಧಿ ಕುಂಠಿತ



ಹೆಬ್ಬಾಲೆ ಗ್ರಾಮದಲ್ಲಿ ಶ್ರೀ ಶಕ್ತಿ ಭವನವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಕುಶಾಲನಗರ, ಜ.16–ರಾಜ್ಯ ಸರ್ಕಾರಗಳ ಉಚಿತ ಗ್ಯಾರಂಟಿ ಯೋಜನೆಗಳಿಂದಾಗಿ ಗ್ರಾಮೀಣ ಭಾಗದ ಮೂಲ ಸೌಕರ್ಯಗಳಾದ ರಸ್ತೆ, ಚರಂಡಿಗಳ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಸಂಸದ ಯದುವೀರ್ ಅಭಿಪ್ರಾಯ ಪಟ್ಟಿದ್ದಾರೆ.

ಸಮೀಪದ ಹೆಬ್ಬಾಲೆ ಗ್ರಾಮದಲ್ಲಿ ಶುಕ್ರವಾರ ನೂತನ ಶ್ರೀ ಶಕ್ತಿ ಭವನ ಉದ್ಘಾಟಿಸಿ, ಸುಸಜ್ಜಿತ ರಸ್ತೆಗಳಿಲ್ಲದೆ ಉಚಿತ ಬಸ್ ಪ್ರಯಾಣ ಕೊಟ್ಟು ಏನೂ ಪ್ರಯೋಜನವಿಲ್ಲ. ಬಸ್‌ನಲ್ಲಿ ಉಚಿತವಾಗಿ ತೆರಳುವವರಿಗೆ ಕೆಲಸಗಳೇ ಇಲ್ಲ. ಗ್ರಾಮೀಣ ಪ್ರದೇಶಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ನರೇಗಾ ಯೋಜನೆಯ ಹೆಸರು ಬದಲಾವಣೆ ಮುಖ್ಯವಲ್ಲ. ಗ್ರಾಮೀಣ ಕೌಶಲ್ಯ ಅಭಿವೃದ್ಧಿಗೆ ಬೇಕಾದ ಸವಲತ್ತುಗಳು ಹೊಸ ಹೆಸರಿನಲ್ಲಿ ಅಡಕವಾಗಿದೆ ಎಂದರು. ನರೇಗಾ ಆ ಕಾಲ ಘಟ್ಟಕ್ಕೆ ಆಗಿದ್ದು ಸರಿ. ಆದರೆ ಈಗ ಸ್ವಾವಲಂಬಿಗಳಾಗಲೂ ವಿಜಿ ರಾಮ್ ಜಿ ಯಂತಹ ಹೊಸ ಹೊಸ ಯೋಜನೆಗಳ ಅನುಷ್ಠಾನ ಹಾಗೂ ಸವಲತ್ತುಗಳ ಅಗತ್ಯವಿದೆ. ಆದರೆ ಕಾಂಗ್ರೆಸ್‌ನವರ ಅಪಪ್ರಚಾರ ಸರಿ ಅಲ್ಲ ಎಂದು ಸಮರ್ಥಿಸಿಕೊಂಡರು.

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಭ್ರೂಣದಿಂದ ಬೂದಿಯಾಗುವವರೆಗೂ ಹೆಣ್ಣು ಮಕ್ಕಳು ಈ ಹಿಂದೆ ಸಾಕಷ್ಟು ಶೋಷಣೆಗೆ ಒಳಗಾಗಿದ್ದರು. ಮರದಡಿ, ಬೇರೆ ಬೇರೆ ಮನೆಯಂಗಳದಲ್ಲಿ ಮಹಿಳಾ ಚಟುವಟಿಕೆಗಳ ಮನಗಂಡು ಇಂತಹ ಸ್ತ್ರೀ ಶಕ್ತಿ ಭವನ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡು ತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಹೆಬ್ಬಾಲೆ ಗ್ರಾಪಂ ಅಧ್ಯಕ್ಷೆ ಅರುಣಕುಮಾರಿ ಮಾತನಾಡಿ, ಖಾಯಂ ಪಿಡಿಒ ಇಲ್ಲದೆ ಪಂಚಾಯಿತಿಯಲ್ಲಿ ಸದಸ್ಯರ ನಡುವೆ ಸಾಮರಸ್ಯವಿಲ್ಲದೆ ಇನ್ನಷ್ಟು ಒಳ್ಳೆಯ ಕೆಲಸಗಳು ನೆನೆಗುದಿಗೆ ಬಿದ್ದಿವೆ ಎಂದು ವಿಷಾದಿಸಿದರು.

ತಾಪಂ ಕಾರ್ಯ ನಿರ್ವಹಣಾಧಿಕಾರಿ ಪರಮೇಶ್ ಕುಮಾರ್, ಸಹಾಯಕ ನಿರ್ದೇಶಕ ರಾಕೇಶ್, ಜಿಪಂ ಮಾಜಿ ಅಧ್ಯಕ್ಷ ಹೆಚ್.ಎಸ್.ಅಶೋಕ್, ಗ್ರಾಪಂ ಅಧ್ಯಕ್ಷೆ ಉಪಾಧ್ಯಕ್ಷೆ ಲತಾ ತಮ್ಮಯ್ಯ, ಸದಸ್ಯರಾದ ಹೆಚ್.ಸಿ. ಮಹದೇವ, ಮಹೇಶ್, ಚಂದ್ರಶೇಖರ್ ಜೋಗಿ, ನಾರಾಯಣ, ಹೆಚ್.ಪಿ. ತನು ಕುಮಾರ್, ಹೆಚ್.ಬಿ.ರತ್ನಮ್ಮ, ಪುಟ್ಟ ಲಕ್ಷ್ಮಮ್ಮ, ಯಶಸ್ವಿನಿ, ಪವಿತ್ರ, ಕವಿತಾ, ಪಂಚಾಯಿತಿ ಪಿಡಿಒ ರವಿಕುಮಾರ್, ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಎಸ್.ರಘು, ಹೆಬ್ಬಾಲೆ ವಿದ್ಯಾ ಸಂಸ್ಥೆ ಅಧ್ಯಕ್ಷ ಹೆಚ್.ವಿ.ಶಿವಪ್ಪ, ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಅಕ್ರಮ ಬೀಟೆ ಮರದ ನಾಟಾ ಸಾಗಾಟ ಓರ್ವನ ಬಂಧನ



ವಲಯ ಅರಣ್ಯ ಅಧಿಕಾರಿಗಳ ತಂಡ ಆರೋಪಿಯನ್ನು ಬಂಧಿಸಿ ಟಾಟಾ ಎಸ್ ವಾಹನ ಬೀಟೆ ಮರದ ನಾಟಾಗಳನ್ನು ವಶಪಡಿಸಿಕೊಂಡಿರುವುದು.

ನಾಪೋಕ್ಲು,ಜ.16(ದುಗ್ಗಳ)–ಮರದ ನಾಟಾಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಸಂಪಾಜೆ ಅರಣ್ಯ ತನಿಖಾತಂಡ ಯಶಸ್ವಿಯಾಗಿದೆ.

ಮಡಿಕೇರಿ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸಹಾಯಕ ಸಂರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ವಲಯ ಅರಣ್ಯ ಅಧಿಕಾರಿಗಳ ತಂಡ ಬುಧವಾರ ತಡರಾತ್ರಿ ಕಾರ್ಯಾಚರಣೆ ನಡೆಸಿ ಸಂಪಾಜೆ (ಚೆಕ್ ಪೋಸ್ಟ್) ಗೇಟಿನಲ್ಲಿ ಆರೋಪಿ ಬಿ.ಎಂ. ಸಜ್ಜನ್‌ನನ್ನು ಬಂಧಿಸಿ ಬೀಟೆ ಮರದ ನಾಟಾಗಳನ್ನು ವಶ ಪಡಿಸಿಕೊಳ್ಳಲಾಗಿದೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಮತ್ತೋರ್ವ ಆರೋಪಿಯ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗಿದೆ. ಕಾರ್ಯಾಚರಣೆ ಸಂದರ್ಭ ಟಾಟಾ ಎಸ್ ವಾಹನದಲ್ಲಿ ಬೀಟೆ ಮರಗಳ 25 ನಾಟಾ ಇದ್ದುದು ಕಂಡುಬಂದಿದೆ. ವಲಯ ಅರಣ್ಯಾಧಿಕಾರಿ ದಿನ್ನಿದೇಚಮ್ಮ, ಉಪವಲಯ ಅರಣ್ಯಾಧಿಕಾರಿ ಸಂದೀಪ್ ಗೌಡ, ಗಸ್ತು ಅರಣ್ಯ ಪಾಲಕ ಡಿ. ಕಾರ್ತಿಕ್, ನಾಗರಾಜ ನಾಟಕರ್ ಪಾಲ್ಗೊಂಡಿದ್ದರು.

ಭೂಮಿ, ರೈತ, ಗೋವಿಗಿರುವ ಅವಿನಾಭಾವ ಸಂಬಂಧವೇ ಸಂಕ್ರಾಂತಿ

ನಾಪೋಕ್ಲು, ಜ.16(ದುಗ್ಗಳ)–ಮಕರ ಸಂಕ್ರಾಂತಿ ಭೂಮಿಗೂ ರೈತನಿಗೂ ಗೋವಿಗೂ ಇರುವ ಅವಿನಾಭಾವ ಸಂಬಂಧವನ್ನು ಸೂಚಿಸುವ ಹಬ್ಬ ಎಂದು ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ನಿರ್ದೇಶಕಿ ಕೂಡಕಂಡಿ ಸೋನಿ ಸುದೀಪ್ ಹೇಳಿದರು.

ಚೇರಂಬಾಣೆ ಗೌಡ ಸಮಾಜದಲ್ಲಿ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟ ಆಯೋಜಿಸಿದ್ದ ಮಕರ ಸಂಕ್ರಾಂತಿ ಹಬ್ಬದ ಆಚರಣೆ ಹಾಗೂ ಒಕ್ಕೂಟದ ಮಾಸಿಕ ಸಭೆ ಯಲ್ಲಿ ಸಂಕ್ರಮಣದ ಆಚರಣೆ ಮತ್ತು ಪದ್ಧತಿ ಪರಂಪರೆ ಬಗ್ಗೆ ಮಾತನಾಡಿ, ರೈತರಿಗೆ ಇದು ಸುಗ್ಗಿ ಹಬ್ಬ; ದವಸ ಧಾನ್ಯಗಳು ಮನೆ ತುಂಬಿ ಸಂಭ್ರಮಿಸುವ ಕಾಲ. ಆದ್ದರಿಂದ ಮಾನವರಿಗೂ ಪ್ರಾಣಿಗಳಿಗೂ ಯಥೇಚ್ಛವಾಗಿ ದಾನ ನೀಡುತ್ತಾ ವರ್ಷವಿಡೀ ರೈತನಿಗೆ ಹೆಗಲುಕೊಟ್ಟ ಗೋವನ್ನು ಪೂಜಿಸುತ್ತಾ ಅವುಗಳ ದೇಹದಲ್ಲಿ ಕ್ರಿಮಿಕೀಟಗಳು ಬಾಧಿಸದಂತೆ ಅವುಗಳನ್ನು ಕಿಚ್ಚು ಹಾಯಿಸಿ ಸಂರಕ್ಷಣೆ ಮಾಡುವಂತಹ ಜಾನಪದ ಹಬ್ಬವೇ ಸಂಕ್ರಾಂತಿ ಆಗಿರುತ್ತದೆ ಎಂದರು.

ಒಕ್ಕೂಟದ ಕಾರ್ಯದರ್ಶಿ ಕೇಕಡ ಪೂಜಾ ನಾಗೇಂದ್ರ ಮಾತನಾಡಿ, ಮಕರ ಸಂಕ್ರಾಂತಿ



ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ವತಿಯಿಂದ ಸಂಕ್ರಾಂತಿ ಹಬ್ಬವನ್ನು ಸಾಂಕೇತಿಕವಾಗಿ ಆಚರಿಸಲಾಯಿತು.

ಸೂರ್ಯನನ್ನು ಪೂಜಿಸುವ ಹಬ್ಬ ಸೂರ್ಯ ತನ್ನ ಪಥವನ್ನು ಉತ್ತರಾಯಣಕ್ಕೆ ಬದಲಿಸುವ ಪುಣ್ಯಕಾಲ. ಸಂಕ್ರಾಂತಿ ಸಮಯದಲ್ಲಿ ಅತಿ ಹೆಚ್ಚು ಚಳಿ ಇರುವ ಕಾರಣ ನಮ್ಮ ದೇಹದಲ್ಲಿ ಎಣ್ಣೆಯ ಅಂಶ ಕಡಿಮೆಯಾಗಿ ಚರ್ಮ ಬಿಗಿಯಾಗಿರುತ್ತದೆ. ಈ ಸಂದರ್ಭದಲ್ಲಿ ನಾವು ಸೇವಿಸುವ ಎಳ್ಳು ಬೆಲ್ಲದಿಂದ ನಮ್ಮ ಚರ್ಮಕ್ಕೆ ಎಣ್ಣೆ ಅಂಶ ಕಬ್ಬಿಣಾಂಶ ಯಥೇಚ್ಛವಾಗಿ ದೊರಕಿ ಚರ್ಮ ಕಾಂತಿಗೊಳ್ಳುತ್ತದೆ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅಧ್ಯಕ್ಷತೆ ವಹಿಸಿ ದಿನದ ಮಹತ್ವದ ಬಗ್ಗೆ ಮಾತನಾಡಿ ಶುಭ ಹಾರೈಸಿದರು. ಮಕರ ಸಂಕ್ರಾಂತಿ ಹಬ್ಬವನ್ನು ಸಾಂಕೇತಿಕವಾಗಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಜಾನಪದ ಕೃಷಿ ಪರಿಕರಗಳು ದವಸ–ಧಾನ್ಯ ಕಬ್ಬು ಸೇರಿಸಿ ಹಾಲು ಉಕ್ಕಿಸುವ ಶುಭ ಸಂಕೇತವನ್ನು ಸೂಚಿಸುವ ಹಬ್ಬದಂದು ದೀಪ ಬೆಳಗಿ ಧಾನ್ಯಲಕ್ಷ್ಮಿಗೆ ಪೂಜೆಸಲ್ಲಿಸಿ ಎಳ್ಳು ಬೆಲ್ಲವನ್ನು ಪರಸ್ಪರ ವಿನಿಮಯ ಮಾಡಿಕೊಂಡು ಹಬ್ಬದ ಸಂಭ್ರಮವನ್ನು ಸವಿದರು.

ಒಕ್ಕೂಟದ ಸದಸ್ಯರಾದ ತಳೂರು ಮಮತಾ ಹಿತೇಶ್ ಮತ್ತು ಗುಡ್ಡೆಮನೆ ಲೀನಾ ಮಹೇಶ್ ಅವರು ಮಹಿಳಾ ಹಗ್ಗ ಜಗ್ಗಾಟದ ತಂಡಕ್ಕೆ ಸಮವಸ್ತ್ರವನ್ನು ಉಡುಗೊರೆಯಾಗಿ ಒಕ್ಕೂಟಕ್ಕೆ ನೀಡಿದರು. ಉಪಾಧ್ಯಕ್ಷೆ ಹೊಸೊಕ್ಲು ಲತಾ ಮೊಣ್ಣಪ್ಪ ಆ ಸಮವಸ್ತ್ರವನ್ನು ಹಗ್ಗ ಜಗ್ಗಾಟ ತಂಡದ ನಾಯಕಿ ಸಿರಕಜೆ ಹಿತಾ ತೀರ್ಥಕುಮಾರ್ ಅವರಿಗೆ ಹಸ್ತಾಂತರಿಸಿದರು.

ಶ್ರದ್ಧಾ ಭಕ್ತಿಯಿಂದ ಪುದುಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಪೂಜೆ

ವಿರಾಜಪೇಟೆ, ಜ.16–ಬೇಟೋಳಿ ರಾಮನಗರದ ಪುದುಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಮಕರ ಜ್ಯೋತಿ ಪೂಜಾ ಕಾರ್ಯಕ್ರಮವನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.

ಶ್ರೀ ಅಯ್ಯಪ್ಪ ಉತ್ಸವದ ಪ್ರಯುಕ್ತ ಬೆಳಿಗ್ಗೆ ದೇವಸ್ಥಾನದಲ್ಲಿ ದೇವತಾ ಪ್ರಾರ್ಥನೆ, ಗಣಪತಿ ಹೋಮ ಶ್ರೀ ಅಯ್ಯಪ್ಪ ದೇವಸ್ಥಾನದ ಆವರಣದಲ್ಲಿ ಶ್ರೀ ಮಹಾಗಣಪತಿ, ಶ್ರೀ ನಾಗ, ಶ್ರೀ ವನ ದುರ್ಗೆ ದೇವರಿಗೆ ಪೂಜೆ ಸಲ್ಲಿಸಲಾಯಿತು.

ದೇವಸ್ಥಾನದ ಆವರಣದಲ್ಲಿ ನಿರ್ಮಿಸಲಾಗಿದ್ದ ಹದಿನೆಂಟು ಮೆಟ್ಟಿಲುಗಳ ಮಂಟಪದಲ್ಲಿ ಅಯ್ಯಪ್ಪ ಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಹಾಲಿನ, ತುಪ್ಪದ ಅಭಿಷೇಕ, ಪಂಚಾಮೃತ ಅಭಿಷೇಕ ಸೇವೆ, ಮಹಾ ಮಂಗಳಾರತಿ, ಪ್ರಸಾದ ವಿತರಣೆ ಜರುಗಿತು. ಸಂಜೆ ಶಬರಿ ಮಲೆಯಲ್ಲಿ ಮಕರ ಜ್ಯೋತಿ ದರುಶನದ ಬಳಿಕ ಮಕರ ಜ್ಯೋತಿ, ಪಡಿ ಪೂಜೆ ನೆರವೇರಿಸಲಾಯಿತು. ಮಹಿಳಾ ಭಜನಾ ಮಂಡಳಿ, ಶಾಲಾ ಮಕ್ಕಳಿಂದ ಭಜನೆ ನಡೆಯಿತು.

ಸ್ಥಳೀಯ ಚಿತ್ರಕಲಾ ಕಲಾವಿದ ಸುನಾದ್ ಭಾರದ್ವಾಜ್, ಶ್ರೀ ಅಯ್ಯಪ್ಪ ಸಭಾಭವನಕ್ಕೆ ಕ್ಯಾನ್ವಾಸ್ ಪೇಂಟಿಂಗ್‌ನಲ್ಲಿ ರಚಿಸಿದ



ಗಣಪತಿ ಹಾಗೂ ಅಯ್ಯಪ್ಪ ಸ್ವಾಮಿ ದೇವರುಗಳ ಕಲಾಕೃತಿಗಳನ್ನು ಆಡಳಿತ ಮಂಡಳಿಯವರಿಗೆ ಹಸ್ತಾಂತರಿಸಿದರು, ಇಷ್ಟಾರ್ಥ ಈಡೇರಿದ ಫಲವಾಗಿ ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಬಿ.ಜಿ. ನಂದ ಬೋರ್ಕರ್, ಗೀತಾ ಬೋರ್ಕರ್ ದಂಪತಿಗಳು ಹಾಗೂ ಬೆಂಗಳೂರಿನ ದಾನಿಗಳಾದ ಪದ್ಮನಾಭ ಮಡ್ಕೇಕರ್, ಜಯ ದಂಪತಿಗಳು ದೇವಸ್ಥಾನದ ಒಳ ಆವರಣದಲ್ಲಿರುವ ಶ್ರೀ ಮಹಾಗಣಪತಿ ದೇವರಿಗೆ ಬೆಳ್ಳಿಯ ಕವಚ ಹಾಗೂ ಶ್ರೀ ನಾಗದೇವರಿಗೆ ಹಿತ್ತಾಳೆಯ ಕವಚವನ್ನು ಕೊಡುಗೆಯಾಗಿ ನೀಡಿದರು.

ಬಿಳಿಗಿರಿರಂಗನಬೆಟ್ಟದಲ್ಲಿ ಸಂಭ್ರಮದ ಸಂಕ್ರಾಂತಿ ರಥೋತ್ಸವ

ಯಳಂದೂರು, ಜ.16– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಸಂಕ್ರಾಂತಿ ರಥೋತ್ಸವ(ಚಿಕ್ಕ ಜಾತ್ರೆ) ಸಂಭ್ರಮ ಸಡಗರದಿಂದ ಶುಕ್ರವಾರ ನೆರವೇರಿತು.

ಆಗ್ನೇಯ ದಿಕ್ಕಿನಲ್ಲಿ ಪುರಾಣ ಪ್ರಸಿದ್ಧವೂ ಆದ ಚಂಪಕಾರಣ್ಯ ಕ್ಷೇತ್ರವೆಂದು ಹೆಸರುವಾಸಿಯಾಗಿರುವ ಬಿಳಿಗಿರಿರಂಗನಬೆಟ್ಟದಲ್ಲಿ ಶಂಖ, ಜಾಗಟೆ ಮೇಳಗಳೊಂದಿಗೆ ರಂಗಪ್ಪನ ಸಾವಿರಾರು ಭಕ್ತರ ಭಕ್ತಿ ಭಾವಗಳೊಂದಿಗೆ ಚಿಕ್ಕ ತೇರಿನ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ ಬಿಳಿಗಿರಿರಂಗನಾಥ ಸ್ವಾಮಿಗೆ ಮುಂಜಾನೆಯಿಂದಲೇ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಬಳಿಕ ಅಲಂಕೃತವಾದ ರಥದಲ್ಲಿ ಉತ್ಸವ ಮೂರ್ತಿಯನ್ನು 10.56 ರಿಂದ 11.05 ರೊಳಗೆ ಪ್ರತಿಷ್ಠಾಪಿಸಲಾಯಿತು. ಜಾತ್ರೆ ವೇಳೆ ಪ್ರತಿ ವರ್ಷದಂತೆ ಈ ವರ್ಷವೂ ಗರುಡ ರಥದ ಸುತ್ತ ಪ್ರದಕ್ಷಿಣೆ ಹಾಕಿದ್ದು ನೆರೆದಿದ್ದ ಸಾವಿರಾರು ಭಕ್ತರ ಸಂಭ್ರಮವನ್ನು ಇಮ್ಮಡಿಗೊಳಿಸಿತು. ಈ ವೇಳೆ ರಂಗಪ್ಪನ ದಾಸರು, ಭಕ್ತರು ಶಂಖ, ಜಾಗಟೆ, ನಾದಸ್ವರ, ಗೋವಿಂದಾ, ಗೋವಿಂದ ಎಂದು ಜಯಘೋಷ ಕೂಗುವ ಮೂಲಕ ರಥ ಎಳೆದು ಸಂಭ್ರಮಿಸಿದರು. ರಥೋತ್ಸವ ವೇಳೆ ರೈತರು ತಾವು ಬೆಳೆದಿದ್ದ ಭತ್ತ, ರಾಗಿ, ಜೋಳ, ಮುಸುಕಿನ ಜೋಳ ಸೇರಿದಂತೆ ವಿವಿಧ ದವಸ ಧಾನ್ಯ ಎಸೆದರೆ, ನವದಂಪತಿಗಳು ಹಣ್ಣು ಜವನ, ಚಿಲ್ಲರೆ ಕಾಸು ಎಸೆದು ಸ್ವಾಮಿ ದರ್ಶನ ಪಡೆದು ಪುನೀತರಾದರು. ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿದ ಚಿಕ್ಕತೇರು ಮತ್ತೆ ಸ್ವಸ್ಥಾನಕ್ಕೆ ಸೇರಿತು. ಬಳಿಕ ಚಿನ್ನಾಭರಣಗಳಿಂದ ಅಲಂಕೃತವಾದ ಉತ್ಸವ ಮೂರ್ತಿಯನ್ನು ಮಂಟಪೋತ್ಸವಕ್ಕೆ ಕರೆದೊಯ್ಯಲಾಯಿತು.



ಬಿಳಿಗಿರಿರಂಗನಬೆಟ್ಟದಲ್ಲಿ ಶುಕ್ರವಾರ ಸಂಕ್ರಾಂತಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬಿಳಿಗಿರಿರಂಗನಾಥಸ್ವಾಮಿ ದಾಸಂದಿರು ಅಕ್ಕಿ, ಕಜ್ಜಾಯ, ಬೆಲ್ಲ, ತೆಂಗಿನಕಾಯಿ, ಕಡ್ಲೆ ಹಾಕಿ ಬ್ಯಾಟಿಮನೆ ಸೇವೆ ಹಾಕುವ ಸಂಪ್ರದಾಯವಿದ್ದು, ದೇಗುಲದ ಸುತ್ತ ಜಾಗಟೆ, ಶಂಖನಾದ ಹೊಮ್ಮಿಸಿ ಬಹುಪರಾಕ್ ಎಂದು ಕೂಗಿ ವಿಶಿಷ್ಟವಾಗಿ ಆಚರಿಸುವ ಈ ಸಂಪ್ರದಾಯಕ್ಕೂ ಚಿಕ್ಕ ಜಾತ್ರೆ ಸಾಕ್ಷಿಯಾಯಿತು. ಸರತಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದರು. ದೇವರನ್ನು ಮೈಸೂರಿನ ಮಹಾರಾಜರು ನೀಡಿರುವ ಕಿರೀಟ, ರತ್ನಖಚಿತ ವಿವಿಧ ಆಭರಣಗಳು ಸೇರಿದಂತೆ ಚಿನ್ನಾಭರಣಗಳಿಂದ ಅಲಂಕಾರ ಮಾಡಲಾಗಿತ್ತು. ನಂತರ ಭಕ್ತರು ಇಲ್ಲಿರುವ ದೇವರ ದೊಡ್ಡ ಪಾದುಕೆಗಳಿಂದ ತಲೆಗೆ ಹೊಡಿಸಿಕೊಳ್ಳುವ ಮೂಲಕ ಭಕ್ತಿ ಮೆರೆದರು. ಬೆಟ್ಟದಿಂದ ಬಸ್‌ನಲ್ಲಿ ವಾಪಸ್ ಬರುವಾಗ ಮಾರ್ಗ ಮಧ್ಯೆ ಭಕ್ತರಿಗೆ ಸಮಸ್ಯೆಯಾಯಿತು. ಯಳಂದೂರು ಪಟ್ಟಣದಲ್ಲಿ ಜಾತ್ರೆ ನಿಮಿತ್ತ ತಾತ್ಕಾಲಿಕ ಬಸ್ ನಿಲ್ದಾಣವಿಲ್ಲದೇ ಪ್ರಯಾಣಿಕರು ಪರದಾಡುವಂತಾಯಿತು.

ರಥೋತ್ಸವದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ದಂಪತಿ, ತಹಸೀಲ್ದಾರ್ ನಯನ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಕಾರ್ಯ ನಿರ್ವಾಹಕ ಅಧಿಕಾರಿ ಎನ್.ಸುರೇಶ್, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಸದಸ್ಯರಾದ ರಾಜಣ್ಣ ವೆಂಕಟರಾಮು, ಸಿದ್ದರಾಜು, ಸುರೇಶ್, ನಾರಾಯಣ ಸ್ವಾಮಿ, ಕೇತಮ್ಮ, ಸ್ಫೂರ್ತಿ, ರವಿಕುಮಾರ್, ಮಾಜಿ ಶಾಸಕರಾದ ಎನ್.ಮಹೇಶ್, ಎಸ್.ಬಾಲರಾಜು, ಜಿಪಂ ಮಾಜಿ ಸದಸ್ಯ ಯೋಗೇಶ್, ಗ್ರಾಪಂ ಅಧ್ಯಕ್ಷ ಸಿ.ಡಿ.ಮಾದೇವ, ತಾಪಂ ಮಾಜಿ ಸದಸ್ಯ ನಾಗರಾಜು, ಕಸಾಪ ಅಧ್ಯಕ್ಷ ನಾಗೇಂದ್ರ, ಚಂದ್ರು, ಡಿವೈಎಸ್ಪಿ ಧರ್ಮೇಂದ್ರ ಕುಮಾರ್, ಸಿಪಿಐಗಳಾದ ಜಿ.ಕೆ.ಸುಬ್ರಹ್ಮಣ್ಯ, ಶಿವಮಾದಯ್ಯ, ಆನಂದ್ ಕುಮಾರ್, ಎಸ್‌ಐಗಳಾದ ಆಕಾಶ್, ಕರಿಬಸವಯ್ಯ, ಸುಪ್ರೀತ್, ವೆಂಕಟೇಶ್ ಸೇರಿದಂತೆ ಸಾವಿರಾರು ಭಕ್ತರು ಹಾಜರಿದ್ದು ರಂಗಪ್ಪನ ದರ್ಶನ ಪಡೆದರು.

ವಿಷಹಾಕಿ ಚಿರತೆ ಕೊಂದ ಆರೋಪಿ ಬಂಧನ



ಆರೋಪಿಯೊಂದಿಗೆ ಚಾಮರಾಜನಗರ ಬಫರ್ ವಲಯ ಅಧಿಕಾರಿಗಳು

ಚಾಮರಾಜನಗರ, ಜ.16–ಜಾನುವಾರುಗಳನ್ನು ಬೇಟೆಯಾಡುತ್ತಿದ್ದಕ್ಕೆ ರೋಸಿಹೋಗಿ ಚಿರತೆಗೆ ವಿಷಪ್ರಾಶನ ಮಾಡಿ ಕೊಂದುಹಾಕಿದ್ದ ಆರೋಪಿಯನ್ನು ಚಾಮರಾಜನಗರ ಬಫರ್ ವಲಯ ಅಧಿಕಾರಿಗಳು ಬಂಧಿಸಿದ್ದಾರೆ.

ತಾಲೂಕಿನ ಆಲೂರು ಹೊಮ್ಮ ಗ್ರಾಮದ ನಿವಾಸಿ ದೊರೆಸ್ವಾಮಿ (60) ಬಂಧಿತ ಆರೋಪಿ. ಕಳೆದ 2 ದಿನಗಳ ಹಿಂದೆಯಷ್ಟೇ ಜಮೀನು ಸಮೀಪ ಚಿರತೆ ಕಳೇಬರ ಪತ್ತೆಯಾಗಿತ್ತು. 5–6 ವರ್ಷ ವಯಸ್ಸಿನ ಗಂಡು ಚಿರತೆ ಇದಾಗಿದ್ದು, ವಿಷಪ್ರಾಶನದಿಂದ ಚಿರತೆ ಸಾವನ್ನಪ್ಪಿದೆ ವಿಚಾರ ಮರಣೋತ್ತರ ಪರೀಕ್ಷೆಯಲ್ಲಿ ಬೆಳಕಿಗೆ ಬಂದಿತ್ತು. ಅನುಮಾನದ ಹಿನ್ನೆಲೆ ದೊರೆಸ್ವಾಮಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಸತ್ಯಾಂಶ ಬೆಳಕಿಗೆ ಬಂದಿದೆ. ಚಿರತೆ ಬೇಟೆಯಾಡಿದ್ದ ಮಾಂಸಕ್ಕೆ ವಿಷ ಬೆರೆಸಿ ಜಾನುವಾರುಗಳ ಸಾವಿಗೆ ಸೇಡು ತೀರಿಸಿಕೊಂಡಿರುವುದಾಗಿ ದೊರೆಸ್ವಾಮಿ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ.

ಈ ಕುರಿತು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಎಸಿಎಫ್ ಮಂಜುನಾಥ್ ಪ್ರತಿಕ್ರಿಯೆ ನೀಡಿದ್ದು, ಚಿರತೆಗೆ ವಿಷ ಹಾಕಿ ಕೊಂದಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದ ಹಿನ್ನೆಲೆಯಲ್ಲಿ ದೊರೆಸ್ವಾಮಿ ಎಂಬಾತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಚಾಮರಾಜನಗರ ಪ್ರಾದೇಶಿಕ ವಲಯ ವ್ಯಾಪ್ತಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಲ್ಲಿ ಹಾಗೂ ಪೊಲೀಸ್ ಅಧಿಕಾರಿಗಳ ಸಹಕಾರದಲ್ಲಿ ತನಿಖೆ ಮುಂದುವರೆಸಲಾಗಿದೆ ಎಂದು ತಿಳಿಸಿದ್ದಾರೆ.

ಜಾನುವಾರುಗಳ ಮೇಲೆ ದಾಳಿ: ಕಳೆದೊಂದು ವರ್ಷದಿಂದ ಗ್ರಾಮಕ್ಕೆ ನುಗ್ಗಿ ಹಸು, ಕುರಿ, ಮೇಕೆ ಬೇಟೆಯಾಡುತ್ತಿದ್ದ ಚಿರತೆ ಬಂಧಿತ ಆರೋಪಿ ದೊರೆಸ್ವಾಮಿಯ 2 ಹಸು, 4 ಕುರಿಗಳನ್ನು ಕೊಂದು ಹಾಕಿತ್ತು. ಈ ಹಿನ್ನೆಲೆಯಲ್ಲಿ ಈ ಕೃತ್ಯ ಎಸಗಲಾಗಿದೆ ಎಂದು ತಿಳಿದು ಬಂದಿದೆ.

ನಾಳೆ ದೇವರ ನಾಮ ಸ್ಪರ್ಧೆ

ಗುಂಡ್ಲುಪೇಟೆ, ಜ.16 (ಸೋಮ್.ಜಿ)– ಪಟ್ಟಣದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ದಾಸ ಶ್ರೇಷ್ಠ ಪುರಂದರ ದಾಸರ ಪುಣ್ಯ ದಿನದ ಪ್ರಯುಕ್ತ ಜ.18ರಂದು ಬೆಳಗ್ಗೆ 11 ಗಂಟೆಗೆ ದೇವರ ನಾಮ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸನ್ನಿಧಾನ ಟ್ರಸ್ಟ್ ಅಧ್ಯಕ್ಷ ರಾಜೇಶ್ವರಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಯರ ಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ದೇವರ ನಾಮ ಹಾಡಲು ಜೂನಿಯರ್ ವಿಭಾಗಕ್ಕೆ 5 ರಿಂದ 18 ವರ್ಷದವರೆಗೆ ಹಾಗೂ ಸೀನಿಯರ್ ವಿಭಾಗ 19 ವರ್ಷ ಮೇಲ್ಪಟ್ಟು ದೇವರ ನಾಮ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತರಿಗೆ ಜ.27ರಂದು ನಡೆಯುವ ಮಧ್ವನವಮಿಯಂದು ಗಣ್ಯರಿಂದ ಬಹುಮಾನ ವಿತರಿಸಲಾಗುವುದು. ಆಸಕ್ತರು ಮೊ: 9448046147, 9620668734, 8660938847 ಅನ್ನು ಸಂಪರ್ಕಿಸಬಹುದು.

ಪಣ್ಯದಹುಂಡಿಯಲ್ಲಿ ಸಂಕ್ರಾಂತಿ ಸಂಭ್ರಮ



ಚಾಮರಾಜನಗರ ತಾಲೂಕಿನ ಪಣ್ಯದಹುಂಡಿಯಲ್ಲಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಗುರುವಾರ ರಾಸುಗಳಿಗೆ ವಿವಿಧ ಬಣ್ಣಗಳಿಂದ ಅಲಂಕಾರ ಮಾಡಿ ಕಿಚ್ಚು ಹಾಯಿಸಿದರು. ಚಿತ್ರ: ಬದನಗುಪ್ಪೆ ಮಲ್ಲಣ್ಣ.

ಚಂದನ್ ಸಾಧನೆ ಜಿಲ್ಲೆಗೆ ಹೆಮ್ಮೆ: ಜಿಲ್ಲಾಧಿಕಾರಿ ಶ್ರೀರೂಪ

ರಾಷ್ಟ್ರೀಯ ಖೋಖೋ ಪಂದ್ಯಾವಳಿ ವಿಜೇತ ಕ್ರೀಡಾಪಟುಗೆ ಅದ್ದೂರಿ ಸ್ವಾಗತ

ಚಾಮರಾಜನಗರ, ಜ.16– ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ತಮಿಳುನಾಡು ವಿರುದ್ಧ ಜಯಭೇರಿ ಬಾರಿಸಿ ನಗರಕ್ಕೆ ಆಗಮಿಸಿದ ತಾಲೂಕಿನ ಸಿದ್ದಯ್ಯನಪುರದ ವಿದ್ಯಾರ್ಥಿ, ಕ್ರೀಡಾಪಟು ಚಂದನ್ ಅವರಿಗೆ ಜಿಲ್ಲಾಡಳಿತ, ನಾನಾ ಸಂಘ, ಸಂಸ್ಥೆಯ ಮುಖಂಡರು, ಸಿದ್ದಯ್ಯನಪುರ ಗ್ರಾಮಸ್ಥರು ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಂಡರು.

ಮೈಸೂರಿನಿಂದ ನಗರದ ಎಲ್‌ಐಸಿ ಕಚೇರಿ ಬಳಿ ಆಗಮಿಸುತ್ತಿದ್ದಂತೆ ಪಟಾಕಿ ಸಿಡಿಸಿ, ಶಾಲು ಹೊದಿಸಿ, ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ಪುಷ್ಪವೃಷ್ಟಿಗೈದು, ಸಿಹಿ ತಿನಿಸಿ ಜೈಕಾರ ಹಾಕಿ ಬರಮಾಡಿ ಕೊಳ್ಳಲಾಯಿತು. ನಂತರ ನಂಜನಗೂಡು ರಸ್ತೆ ಸಂತೇಮರಹಳ್ಳಿ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸುಲ್ತಾನ್ ಷರೀಫ್ ವೃತ್ತದ ಮೂಲಕ ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಜಿಲ್ಲಾಧಿಕಾರಿ ಶ್ರೀರೂಪ ಚಂದನ್ ಅವರನ್ನು ಸನ್ಮಾನಿಸಿ ಮಾತನಾಡಿ, ತಾಲೂಕಿನ ಸಿದ್ದಯ್ಯನಪುರದ ಸರ್ಕಾರಿ ಶಾಲೆ ವಿದ್ಯಾರ್ಥಿ ಚಂದನ್ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ವಿಜೇತರಾಗಿ ಅಂತಾರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆಯಾಗಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ಮಕ್ಕಳ ಕ್ರೀಡೆಗೆ ಪ್ರೋತ್ಸಾಹ ಕೊಡಬೇಕು. ಪ್ರಸ್ತುತ ವಿದ್ಯಾರ್ಥಿಗಳು ಮೊಬೈಲ್‌ಗೆ ಅಂಟಿಕೊಂಡಿರುತ್ತಾರೆ. ಆದರೆ ಚಂದನ್ ಪೋಷಕರು ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.



ವಿದ್ಯಾರ್ಥಿ ಚಂದನ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದು ಖುಷಿ ತಂದಿದೆ. ಈ ನನ್ನ ಸಾಧನೆ ನಮ್ಮ ತಂದೆ, ತಾಯಿ, ದೊಡ್ಡಪ್ಪ, ಪಿಟಿ ಮಾಸ್ಟರ್, ಗ್ರಾಮಕ್ಕೆ ಸಲ್ಲುತ್ತದೆ ಎಂದು ಚಂದನ್ ತಿಳಿಸಿದರು.

ಇದೇ ವೇಳೆ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಖೋಖೋ ಪಂದ್ಯಾವಳಿ ವಿಜೇತ ಚಂದನ್ ಹಾಗೂ ಬೇರೆ ರಾಜ್ಯದಲ್ಲಿ ನಡೆದ ಖೋ–ಖೋ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಪಡೆದ ಶ್ರಾವಣಿ, ನದಿಯಾ ಅವರನ್ನು ಭಾರತೀಯ ವಿದ್ಯಾರ್ಥಿ ಸಂಘ, ಅಖಿಲ ಭಾರತೀಯ ವೀರಶೈವ ಮಹಾಸಭಾ, ಕರ್ನಾಟಕ ಸೇನಾಪಡೆ, ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ, ಸಿದ್ದಯ್ಯನಪುರ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಗ್ರಾಮಸ್ಥರಿಂದ ಸನ್ಮಾನಿಸಲಾಯಿತು.

ಈ ವೇಳೆ ಜಿಪಂ ಸಿಇಓ ಮೋನಾರೋತ್, ಡಿಡಿಪಿಐ ಚಂದ್ರಪಾಟೀಲ್, ನಿವೃತ್ತ ಡಿಡಿಪಿಐ ಮಂಜುನಾಥ್ ಪ್ರಸನ್ನ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸಿ.ಎನ್.ರೇಣುಕಾದೇವಿ, ಭರತ್ ಭೂಷಣ, ಮಹಾದೇವಸ್ವಾಮಿ, ಶಿವ ಕುಮಾರಯ್ಯ, ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್ ರಾಜ್, ಅಖಿಲ ಭಾರತೀಯ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನಂದೀಶ್, ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾ ಅಧ್ಯಕ್ಷ ಉಮೇಶ್ ಕುದರ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ರಾಜು, ಲೋಕೇಶ್, ಮಹೇಶ್, ಬಿಎಸ್‌ಪಿ ಮಹೇಶ್, ವಾಸು, ಬಾಬು, ಗ್ರಾಮದ ಯಜ ಮಾನರು, ಮುಖಂಡರು, ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಎಸ್.ಪುಟ್ಟಣ್ಣ ನಿಧನ

ಗುಂಡ್ಲುಪೇಟೆ, ಜ.16– ತಾಪಂ ಮಾಜಿ ಅಧ್ಯಕ್ಷ ಬೇಗೂರು ಎಸ್.ಪುಟ್ಟಣ್ಣ (80ವರ್ಷ) ಬುಧವಾರ ರಾತ್ರಿ ನಿಧನರಾದರು.



ಮೃತರು ಪುತ್ರ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಗುರುವಾರ ಸಂಜೆ ಮೃತರ ತೋಟದಲ್ಲಿ ಈಡಿಗ ಸಂಪ್ರದಾಯಂತೆ ಅಂತ್ಯ ಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಬ್ಲ್ಯೂಪಿಎಲ್–2026; ಆರ್‌ಸಿಬಿಗೆ ಹ್ಯಾಟ್ರಿಕ್ ಗೆಲುವು

ನವಿ ಮುಂಬೈ, ಜ.16(ವಿವಿಹೆಚ್)– ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಟೂರ್ನಿಯ 9ನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ 32 ರನ್‌ಗಳ ಅಂತರದಿಂದ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದೆ.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಗುಜರಾತ್ 18.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 150 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಆರಂಭಿಕ ಆಟಗಾರ್ತಿ ಗ್ರೇಸ್ ಹ್ಯಾರಿಸ್ 17 ರನ್‌ಗಳಿಸಿ ಔಟಾದರು. ನಂತರ ನಾಯಕಿ ಸ್ಮೃತಿ ಮಂದಾನ 5ರನ್‌ಗೆ ಸುಸ್ತಾದರೆ, ದಯಾಳನ್ ಹೇಮಲತಾ 4 ರನ್, ಗೌತಮಿ ನಾಯಕ್ 9 ರನ್ ಒಂದಂಕಿ ಮೊತ್ತಕ್ಕೆ ಔಟಾಗುವ ಮೂಲಕ ಪೆವಿಲಿಯನ್ ಪೆರೇಡ್ ನಡೆಸಿದರು.

ಈ ನಡುವೆ ಮಧ್ಯಮ ಕ್ರಮಾಂಕದಲ್ಲಿ ಜೊತೆಯಾದ ರಿಚಾ ಘೋಷ್ ಹಾಗೂ ರಾಧಾ ಯಾದವ್ ತಂಡಕ್ಕೆ ಆಸರೆಯಾದರು. ರಾಧಾ ಯಾದವ್ 47 ಎಸೆತಗಳಲ್ಲಿ 66 ರನ್ ಚಚ್ಚಿದರೆ ರಿಚಾ ಘೋಷ್ 28 ಎಸೆತಗಳಲ್ಲಿ 44 ರನ್ ಕಾಣಿಕೆ ನೀಡುವ ಮೂಲಕ ಆಸರೆಯಾದರು. ಈ ಜೋಡಿ 5ನೇ ವಿಕೆಟ್‌ಗೆ 105 ರನ್ ಜೊತೆಯಾಟವಾಡಿದರು. ಕೊನೆಯಲ್ಲಿ ಅಬ್ಬರಿಸಿದ ನಾಡಿನ್ ಡಿ ಕ್ಲೆರ್ಕ್ 26 ರನ್ ಬಾರಿಸಿ ತಂಡ ಸ್ಪರ್ಧಾತ್ಮಕ ಮೊತ್ತ ಕಲೆಹಾಕುವಲ್ಲಿ ಸಹಕರಿಸಿದರು.

ಗುಜರಾತ್ ಜೈಂಟ್ಸ್ ಪರ ಸೋಫಿ ಡಿವೈನ್ 3 ವಿಕೆಟ್, ಕಾಶೀ ಗೌತಮ್ 2, ರೇಣುಕಾ ಠಾಕೂರ್ ಹಾಗೂ ಜಾರ್ಜಿಯಾ ವೇರ್‌ಹ್ಯಾಮ್ ತಲಾ ಒಂದೊಂದು ವಿಕೆಟ್ ಪಡೆದರು.

ಆರ್‌ಸಿಬಿ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಗುಜರಾತ್‌ಗೆ ಆರಂಭಿಕ ಆಘಾತ ಎದುರಾಯಿತು. ಸೂಫಿ ಡಿವೈನ್ 8 ರನ್ ಗಳಿಸಿ ನಿರ್ಗಮಿಸಿದರೆ, ಬೆಥ್ ಮೂನಿ 27 ರನ್ ಗಳಿಸಿ ಔಟಾದರು. ನಾಯಕಿ ಗಾರ್ಡ್ನರ್ 3, ಕನಿಕಾ ಅಹುಜಾ 16 ರನ್ ಗಳಿಸಿ ಬಂದಷ್ಟೆ ವೇಗವಾಗಿ ಹಿಂತಿರುಗಿದರು.

ಮಧ್ಯಮ ಕ್ರಮಾಂಕದಲ್ಲಿ ಅಲ್ಪ ಹೋರಾಟ ನೀಡಿದ ಭಾರ್ತಿ ಫುಲ್ಮಾಲಿ 39 ರನ್ ಗಳಿಸಿ ಅಬ್ಬರಿಸುವ ಸೂಚನೆ ನೀಡಿ ಲೌರೆನ್ ಬೆಲ್‌ಗೆ ವಿಕೆಟ್ ಒಪ್ಪಿಸಿ ಹೊರನಡೆದರು. ಬಳಿಕ ಬಂದ ಯಾರಿಂದಲೂ ಉತ್ತಮ ಇನ್ನಿಂಗ್ಸ್ ಕಟ್ಟುವ ಕೆಲಸ ಆಗಲಿಲ್ಲ. ಜಾರ್ಜಿಯಾ 13, ಕಾಶ್ವಿ ಗೌತಮ್ 18, ತನುಜಾ ಕನ್ವೆರ್ 21 ಹಾಗೂ ರೇಣುಕಾ ಸಿಂಗ್ ಠಾಕೂರ್ 2 ರನ್ ಗಳಿಸಿ ಔಟಾದರು.

ಆರ್‌ಸಿಬಿ ಪರ ಕನ್ನಡತಿ ಶ್ರೇಯಾಂಕಾ ಪಾಟೀಲ್ ಪ್ರಮುಖ 5 ವಿಕೆಟ್ ಉರುಳಿಸಿದರು. ಲೌರೆನ್ ಬೆಲ್ 3 ವಿಕೆಟ್ ಅರುಂಧತಿ ರೆಡ್ಡಿ ಹಾಗೂ ನಾಡಿನ್ ಡಿ ಕ್ಲೆರ್ಕ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಆರ್‌ಸಿಬಿಯ ರಾಧಾ ಯಾದವ್ ಪಂದ್ಯಶ್ರೇಷ್ಠ ಪಡೆದರು.

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಚುಂಚನಕಟ್ಟೆಯಲ್ಲಿ ವೈಭವದ ಬ್ರಹ್ಮರಥೋತ್ಸವ

ಲಕ್ಷಾಂತರ ಭಕ್ತರು ಭಾಗಿ, ಮೊಳಗಿದ ಶ್ರೀರಾಮ ಪಾದಕ್ಕೆ ಗೋವಿಂದ, ಜೈ ಶ್ರೀರಾಮ್ ಘೋಷಣೆ

ಚುಂಚನಕಟ್ಟೆ: ತನ್ನದೇ ಆದ ಇತಿಹಾಸ ಹೊಂದಿರುವ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಶ್ರೀರಾಮ ದೇವರ ಬ್ರಹ್ಮ ರಥೋತ್ಸವ ಶುಕ್ರವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ಮತ್ತು ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ಸುಮಾರು 11.30 ಸಮಯದಲ್ಲಿ ಶ್ರೀರಾಮ ದೇವಾಲಯದಿಂದ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಅವುಗಳನ್ನು ಮೆರವಣಿಗೆಯಲ್ಲಿ ಶಾಸಕ ಡಿ.ರವಿಶಂಕರ್ ಅವರ ನೇತೃತ್ವದಲ್ಲಿ ವೇದ ಘೋಷಗಳೊಂದಿಗೆ ಲಕ್ಷಾಂತರ ಮಂದಿಯ ಸಮ್ಮುಖದಲ್ಲಿ ರಥಕ್ಕೆ ತಂದು ಪ್ರತಿಷ್ಠಾಪನೆ ಮಾಡಲಾಯಿತು.

12 ಗಂಟೆಯ ಸಮಯದಲ್ಲಿ ಆದಿಚುಂಚನಗಿರಿ ಮೈಸೂರು ಶಾಖ ಮಠದ ಸೋಮನಾಥೇಶ್ವರನಾಥ ಸ್ವಾಮಿಜಿ, ಗಾವಡಗೆರೆ ಜಂಗಮ ದೇವರ ಮಠದ ನಟರಾಜಶ್ರೀ, ಬೆಟ್ಟದಪುರದ ವಿರುಕ್ತ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಶಾಸಕ ಡಿ.ರವಿಶಂಕರ್ ಮತ್ತು ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೀಗೌಡರು ಜಂಟಿಯಾಗಿ ಚಾಲನೆ ನೀಡಿದರು.

ನಂತರ ಇಲ್ಲಿ ನೆರೆದಿದ್ದ ಶ್ರೀರಾಮನ ಭಕ್ತರು ರಥವನ್ನು ದೇವಾಲಯದ ಸುತ್ತು ಎಳೆದರು. ಶ್ರೀರಾಮನ ಪಾದಕ್ಕೆ ಗೋವಿಂದ, ಜೈ ಶ್ರೀರಾಮ್ ಎಂದು ಭಕ್ತಿ ಘೋಷಣೆ ಕೂಗಿದರು. ಈ ಅಭೂತಪೂರ್ವ ದೃಶ್ಯವನ್ನು ಕಣ್ತುಂಬಿಕೊಂಡ ಭಕ್ತ ಸಾಗರ ಭಾವಪರವಶವಾಯಿತು.

ರಥವು ದೇವಾಲಯದ ಸುತ್ತುವಾಗ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಮತ್ತು ಸ್ಥಳೀಯ ಭಕ್ತಗಣ ದೇವರಿಗೆ ಬಾಳೆಹಣ್ಣು, ಧವನ ಎಸೆದು ತಮ್ಮ ಭಕ್ತಿ ಭಾವ ಸಮರ್ಪಿಸಿದರು. ನವ ವಧುವರರು ಭಾಗವಹಿಸಿದ್ದು ಅಲ್ಲದೇ ಭಕ್ತಾಧಿಗಳು ಸರತಿ ಸಾಲಿನಲ್ಲಿ ನಿಂತು ಸೀತಾ ಸಮೇತ ಶ್ರೀರಾಮ ಮತ್ತು ಲಕ್ಷ್ಮಣ ದೇವರ ದರ್ಶನ ಪಡೆದರು.

ರಥೋತ್ಸವಕ್ಕೆ ಆಗಮಿಸಿದ್ದ ಕೆಲವರು ದೇವಾಲಯದ ಆವರಣದಲ್ಲಿ ಅಡುಗೆ ಮಾಡಿ ಭಕ್ತರಿಗೆ ಉಣಬಡಿಸಿ ತಮ್ಮ ಹರಕೆ ತೀರಿಸಿದರು. ಇದರ ಜತೆಗೆ ಬಸವನ ವೃತ್ತದಿಂದ ಶ್ರೀರಾಮ ದೇವಾಲಯದವರೆಗೆ ರಸ್ತೆಯ ಎರಡೂ ಬದಿಯಲ್ಲಿ ಹಾಕಿರುವ ಸಿಹಿತಿಂಡಿ ಮತ್ತು ವಿವಿಧ ಆಟಿಕೆಯ ಅಂಗಡಿಗಳು ಮನ ಸೆಳೆದವು. ರಥೋತ್ಸವದಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದ್ದರು.

ಶ್ರೀರಾಮ ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶಾಸಕ ಡಿ.ರವಿಶಂಕರ್ ಮತ್ತು ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ ಅನ್ನ ಸಂತರ್ಪಣೆ ಏರ್ಪಡಿಸಿದ್ದರು. ಅಲ್ಲದೇ ಉದ್ಯಮಿ ಹಳಿಯೂರು ಮಧುಚಂದ್ರ ಮತ್ತು ಜೆಡಿಎಸ್ ಮುಖಂಡ ಎಚ್.ಕೆ.ಶ್ರೀಧರ್ ಮಜ್ಜಿಗೆ ಪಾನಕ ವಿತರಿಸಿದರು.


ಚುಂಚನಕಟ್ಟೆಯಲ್ಲಿ ವಿಜೃಂಭಣೆಯಿಂದ ನಡೆದ ಶ್ರೀರಾಮ ದೇವರ ರಥೋತ್ಸವ

ಲಕ್ಷಕ್ಕೂ ಅಧಿಕ ಮಂದಿ ಆಗಮಿಸಿದ್ದರಿಂದ ಮೈಸೂರು ಗ್ರಾಮಾಂತರ ಡಿವೈಎಸ್ಪಿ ರಾಜಣ್ಣ ಸಾಲಿಗ್ರಾಮ ನಿರೀಕ್ಷಕ ಶಶಿಕುಮಾರ್ ಕೆ.ಆರ್.ನಗರ ವೃತ್ತ ನಿರೀಕ್ಷಕ ಶಿವಪ್ರಕಾಶ್ ನೇತೃತ್ವದಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ವಿಜೃಂಭಣೆಯಿಂದ ನಡೆದ ದೊಡ್ಡ ಹೆಜ್ಜೂರು ಜಾತ್ರೆ

ಹನಗೋಡು/ಹುಣಸೂರು, ಜ.16– ತಾಲೂಕಿನ ಹನಗೋಡು ಸಮೀಪದ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕಾಡಂಚಿನ ಅರಣ್ಯ ಪ್ರದೇಶದಲ್ಲಿರುವ ಹೋಬಳಿಯ ದೊಡ್ಡ ಹೆಜ್ಜೂರು ಗ್ರಾಮದಲ್ಲಿ ಶ್ರೀ ರಾಮಾಂಜನೇಯ ಸ್ವಾಮಿಯ ಜಾತ್ರೆಯು ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.



ಮುಂಜಾನೆಯಿಂದಲೇ ಶ್ರೀ ರಾಮಾಂಜನೇಯ ಸ್ವಾಮಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜೆಗಳನ್ನು ನೆರವೇರಿಸಿ, ನಂತರ ಬಣ್ಣಬಣ್ಣದ ಬಾವುಟಗಳು ಹಾಗೂ ಹೂವಿನಿಂದ ಅಲಂಕೃತಗೊಂಡ ತೇರಿನ ಮೇಲೆ ರಾಮಾಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಭಕ್ತರು ಭಕ್ತಿಯಿಂದ ನಮಿಸಿ ಪೂಜಾ ಕಾರ್ಯಗಳಲ್ಲಿ ಭಾಗವಹಿಸಿದ್ದರು.

ಶಾಸಕರಾದ ಜಿ.ಡಿ.ಹರೀಶ್‌ಗೌಡರು ತೇರನ್ನು ಎಳೆಯುವ ಮೂಲಕ ಜಾತ್ರೆಗೆ ಅಧಿಕೃತ ಚಾಲನೆ ನೀಡಿದರು. ಸಾವಿರಾರು ಭಕ್ತರು "ಜೈ ಶ್ರೀರಾಮ್, ಜೈ ಹನುಮಂತ" ಎಂಬ ಜಯಘೋಷಗಳೊಂದಿಗೆ ದೇವಸ್ಥಾನದ ಸುತ್ತ ಒಂದು ಸುತ್ತು ತೇರನ್ನು ಎಳೆದು ಭಕ್ತಿಭಾವದಿಂದ ಸಂಭ್ರಮಿಸಿದರು.

ನವದಂಪತಿಗಳು ತೇರಿಗೆ ಹಣ್ಣು–ಜವನ ಎಸೆದು ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು.

ಜಾತ್ರಾ ಮೈದಾನದಲ್ಲಿ ಮಕ್ಕಳ ಆಟಿಕೆಗಳು, ವಿವಿಧ ವಸ್ತುಗಳ ಅಂಗಡಿಗಳು ಹಾಗೂ ಸಿಹಿತಿಂಡಿ ಅಂಗಡಿಗಳನ್ನು ಅಲಂಕರಿಸಿ ವ್ಯವಸ್ಥೆ ಮಾಡಿದ್ದು, ಸಾರ್ವಜನಿಕರನ್ನು ವಿಶೇಷವಾಗಿ ಆಕರ್ಷಿಸಿತು.

ರಥೋತ್ಸವ ವೇಳೆ ಮಾಜಿ ಶಾಸಕ ಎಚ್.ಪಿ.ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರ್ ಬಸವರಾಜ್ ಸುಭಾಷ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ದಾರಾ ಮಹೇಶ್ ದೇವರಾಜ್, ದೊಡ್ಡ ಹೆಜ್ಜೂರು ಗ್ರಾಪಂ ಉಪಾಧ್ಯಕ್ಷ ವೆಂಕಟೇಶ್ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ತಾಲೂಕು ಅಧ್ಯಕ್ಷ ದೊಡ್ಡಜೂರು ನಾಗೇಶ್ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಹಲವು ಗಣ್ಯರು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

ಚೆಕ್ ಬೌನ್ಸ್ ಪ್ರಕರಣ: ಅರೋಪಿಗೆ ದಂಡ

ಹುಣಸೂರು: ಹುಣಸೂರಿನ ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಲಯದಲ್ಲಿ ಚೆಕ್‌ಬೌನ್ಸ್ ಪ್ರಕರಣವೊಂದರಲ್ಲಿ ನ್ಯಾಯದೀಶರು ಅರೋಪಿಗೆ 2.60.000 ರೂ. ದಂಡ ವಿಧಿಸಿದ್ದು, ಹಣ ಕಟ್ಟದಿದ್ದಲ್ಲಿ ಮೂರು ತಿಂಗಳು ಸೆರೆವಾಸ ಅನುಭವಿಸಬೇಕೆಂದು ತೀರ್ಪು ನೀಡಿದ್ದಾರೆ.

ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿಯ ವಾಸಿ ಕೆಂಚಯ್ಯ ಅವರ ಮಗ ಕೆ.ಕೃಷ್ಣ ಅವರಿಂದ ಹೆಚ್.ಡಿ.ಕೋಟೆಯ ವಡ್ಡರಗುಡಿ ನಾಸಿ ಜೋಗೇಶ್ ಅವರ ಮಗ ಅಶ್ವಥ್ ಸಾಲವಾಗಿ ಹಣ ಪಡೆದು ಹಣದ ಖಾತ್ರಿಗಾಗಿ ಚೆಕ್ ನೀಡಿ ಮೋಸ ಮಾಡಿದ ಕಾರಣ ಕೆ.ಕೃಷ್ಣ ಅವರು ಹುಣಸೂರು ನ್ಯಾಯಲಯದಲ್ಲಿ ದಾವೆ ಹೂಡಿದ್ದರು.

ನ್ಯಾಯಧೀಶರಾದ ಶ್ರೀಮತಿ ಭಾಗ್ಯಮ್ಮ ಅವರು ಎರಡು ಕಡೆಯ ವಾದ ವಿವಾದಗಳನ್ನು ಆಲಿಸಿ ಈ ತೀರ್ಪು ನೀಡಿದ್ದಾರೆ.

ಕೃಷ್ಣ ಅವರ ಪರವಾಗಿ ಹುಣಸೂರಿನ ಹಿರಿಯ ವಕೀಲರಾದ ಎಂ.ಅರ್.ಹರೀಶ್ (ಎಂ.ಆರ್.ಹೆಚ್) ವಾದ ಮಂಡಿಸಿದರು.

ಕೊಲೆ ಮಾಡಲು ಬಂದವನನ್ನು ಚಾಕುವಿನಿಂದ ಇರಿದು, ಅಟ್ಟಣಿಗೆಯಿಂದ ತಳ್ಳಿ ಭೀಕರ ಕೊಲೆ

ಸರಗೂರು ಸಮೀಪ ಹಳೇ ವೈಷಮ್ಯದಿಂದ ದುರಂತ

ಸರಗೂರು: ಮಲಗಿದ್ದ ತನ್ನನ್ನು ಕೊಲೆ ಮಾಡಲು ಬಂದಿದ್ದ ವ್ಯಕ್ತಿಯನ್ನು ಆತ ತಂದಿದ್ದ ಚಾಕುವನ್ನು ಕಸಿದು ಭೀಕರವಾಗಿ ಚುಚ್ಚಿ, ಅಟ್ಟಣಿಗೆಯಿಂದ ತಳ್ಳಿ ಕೊಲೆ ಮಾಡಿರುವ ಘಟನೆ ತಾಲೂಕಿನ ಮೊಳೆಯೂರು ಗ್ರಾಮದಲ್ಲಿ ಬುಧವಾರ ತಡರಾತ್ರಿ ಸಂಭವಿಸಿದೆ.


ರಮೇಶ್

ಗ್ರಾಮದ ವಾಸಿ ರಮೇಶ್ ಅಲಿಯಾಸ್ ಕರಿಯಪ್ಪ(33) ಕೊಲೆಯಾದದ ದುರ್ದೈವಿ. ಈತನನ್ನು ಸ್ನೇಹಿತ ಅನುರಾಜ್ (ಅನು) ಬಿನ್ ಪುಟ್ಟರಾಜು ಕೊಲೆ ಮಾಡಿದ ಆರೋಪಿಯಾಗಿದ್ದು, ಈತನನ್ನು 24 ಗಂಟೆಯೊಳಗೆ ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಸರಗೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ಘಟನೆ ವಿವರ: ಮೊಳೆಯೂರು ಗ್ರಾಮದ ರಮೇಶ್, ಅನುರಾಜ್ ಪರಸ್ಪರ ಸ್ನೇಹಿತರಾಗಿದ್ದು, ಇವರಿಬ್ಬರ ನಡುವ ಯಾವುದೋ ವಿಷಯಕ್ಕೆ ವೈಷಮ್ಯ ಹುಟ್ಟಿಕೊಂಡಿದ್ದು, ಆಗಾಗ್ಗೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಬುಧವಾರ ತಡರಾತ್ರಿ ಸಮೀಪದ ರಾಗಿ ಜಮೀನಿನಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಗೆ ಅನುರಾಜ್ ಕಾವಲು ಕಾಯುವ ಸಲುವಾಗಿ ಮರದ ಮೇಲೆ ಅಟ್ಟಣಿಗೆ ಕಟ್ಟಿಕೊಂಡು ಕಾಯುವಾಗ ರಮೇಶ್, ಅನುರಾಜ್‌ಗೆ ಪೋನ್ ಮಾಡಿ ಜಗಳ ಮಾಡಿದ್ದಾನೆ.

ಇದಾದ ಸ್ವಲ್ಪ ಸಮಯದ ಬಳಿಕ ಅನುರಾಜ್ ಅಟ್ಟಣಿಗೆಯಲ್ಲಿ ಮಲಗಿರುವಾಗ ರಮೇಶ್ ರಾತ್ರಿ 10.30ರಲ್ಲಿ ಜಮೀನಿನ ಬಳಿ ಹೋಗಿ ಚಾಕುವಿನಿಂದ ಅನುರಾಜ್ ಮೇಲೆ ಹಲ್ಲೆಗೆ ಯತ್ನಿಸಿದ್ದಾನೆ. ಆಗ ಅನುರಾಜ್‌ಗೆ ಗಾಯವಾಗಿದ್ದು, ಎಚ್ಚರಗೊಂಡ ಅನುರಾಜ್ ರಮೇಶ್‌ನ ಕೈಯಲ್ಲಿದ್ದ ಚಾಕು ಕಿತ್ತುಕೊಂಡು ರಮೇಶ್‌ನ ಹೊಟ್ಟೆಗೆ ಬಲವಾಗಿ ಚುಚ್ಚಿ ಅಟ್ಟಣಿಗೆಯಿಂದ ಕೆಳಗಡೆ ನೂಕಿದ್ದಾನೆ. ಇದರಿಂದ ತೀವ್ರವಾಗಿ ಗಾಯಗೊಂಡ ರಮೇಶ್ ರಕ್ತಸ್ರಾವವಾಗಿ ಕೆಳಗಡೆ ಬಿದ್ದು, ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ರಾಜು, ವೃತ್ತ ನೀರಿಕ್ಷಕ ಪ್ರಸನ್ನ, ಉಪ ನೀರಿಕ್ಷಕ ಆರ್.ಕಿರಣ್, ಸಿಬ್ಬಂದಿಗಳಾದ ಮಹಮದ್ ಇಮ್ರಾನ್, ಆನಂದ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರಗೂರಿನ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಮಲಾಪುರ ಡೇರಿಗೆ ನಿರ್ದೇಶಕರ ಅಕ್ರಮ ಆಯ್ಕೆ ಆರೋಪ

ನಿಯಮ ಬಾಹಿರ ಆಯ್ಕೆ ವಜಾಕ್ಕೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

ಬೆಟ್ಟದಪುರ: ಸಮೀಪದ ಕೋಮಲಾಪುರ ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ಕಾನೂನು ಬಾಹಿರವಾಗಿ ನಿರ್ದೇಶಕರ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಅವರನ್ನು ವಜಾ ಮಾಡುವಂತೆ ಗ್ರಾಮಸ್ಥರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಗ್ರಾಮದ ಬಸವೇಶ್ವರ ದೇವಾಲಯದ ಮುಂಭಾಗ ಆಡಳಿತ ಮಂಡಳಿ ವಿರುದ್ಧ ಗ್ರಾಮಸ್ಥರು ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.


ಅಕ್ರಮ ಆಯ್ಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ಕೋಮಲಾಪುರ ಗ್ರಾಮಸ್ಥರು.

ಗ್ರಾಮದ ಮುಖಂಡ ಪಟೇಲ್ ರಾಜೇಗೌಡ ಮಾತನಾಡಿ, ಹಾಲಿನ ಡೇರಿ ಚುನಾವಣೆ ನಾಮಪತ್ರ ಸಲ್ಲಿಸುವ ಸಮಯದಲ್ಲಿ 11 ನಿರ್ದೇಶಕರ ಆಯ್ಕೆ ಸಂಬಂಧ 31 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಅದರಲ್ಲಿ ಪ್ರವರ್ಗ.ಎ ವರ್ಗದಲ್ಲಿ ಕೆ.ಎಂ. ಶಿವಣ್ಣ, ಪ್ರವರ್ಗ.ಬಿನಲ್ಲಿ ಶಿವಣ್ಣ ನಾಮಪತ್ರ ಸಲ್ಲಿಸಿದ್ದರು. ಆದರೆ ಆಯ್ಕೆಯಲ್ಲಿ ಇವರಿಬ್ಬರನ್ನು ಸಾಮಾನ್ಯ ಕ್ಷೇತ್ರ ಎಂದು ಅವಿರೋಧವಾಗಿ ಆಯ್ಕೆ ಮಾಡಿ, ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ ಎಂದು ಕಿಡಿಕಾರಿದರು.

ಇದಲ್ಲದೇ ಅಧ್ಯಕ್ಷರನ್ನು ಗ್ರಾಮಸ್ಥರ ಒಮ್ಮತದಲ್ಲಿ ಆಯ್ಕೆ ಮಾಡುವ ಒಪ್ಪಂದವಾಗಿತ್ತು, ಆಯ್ಕೆಯಾದ ಅಧ್ಯಕ್ಷರು ಗ್ರಾಮದ ದೊಡ್ಡಮ್ಮತಾಯಿ ದೇವಸ್ಥಾನಕ್ಕೆ ವೈಯಕ್ತಿಕವಾಗಿ ಅನುದಾನ ನೀಡಬೇಕೆಂಬ ವಿಚಾರವನ್ನು ತಿಳಿಸಿ, ಆಯ್ಕೆ ಪ್ರಕ್ರಿಯೆ ನಡೆಯಬೇಕಿತ್ತು, ಆದರೆ ಕೆಲವರು ರಾಜಕೀಯವನ್ನು ಬೆರೆಸಿ ಕೆಲ ನಿರ್ದೇಶಕರನ್ನು ಪ್ರವಾಸಕ್ಕೆ ಕಳುಹಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ ಇದರಿಂದ ಗ್ರಾಮದಲ್ಲಿ ಶಾಂತಿ ಭಂಗ ಉಂಟಾಗಿ ವೈಮನಸ್ಸು ಬೆಳೆಯಲು ಕಾರಣವಾಗುತ್ತಿದೆ ಎಂದು ಆರೋಪಿಸಿದ್ದರು.

ಗ್ರಾಮದ ಮುಖಂಡ ನವೀನ್, ಗಣೇಶ್ ಮಾತನಾಡಿದರು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ರಿಟರ್ನಿಂಗ್ ಆಫೀಸರ್ ಸಿ.ಎನ್.ಗಿರೀಶ್ ಪ್ರತಿಕ್ರಿಯೆ ನೀಡಿ ನಿರ್ದೇಶಕರ ಆಯ್ಕೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಅನ್ವಯ ಪ್ರಕಾರ ಚುನಾವಣೆಯನ್ನು ನಡೆಸಲಾಗಿದೆ. ಪ್ರವರ್ಗ. ಎ ಮತ್ತು ಪ್ರವರ್ಗ.ಬಿ ಕ್ಷೇತ್ರ ದಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಅಭ್ಯರ್ಥಿಗಳಿಗೆ ಅರಿವಿಲ್ಲದೆ ಸಾಮಾನ್ಯ ಕ್ಷೇತ್ರ ಆಯ್ಕೆ ಮಾಡುವ ಬದಲು, ಪ್ರವರ್ಗ ಎ ಮತ್ತು ಬಿ ಎಂದು ಗುರುತು ಮಾಡಿದ್ದರು. ಈ ವಿಚಾರವಾಗಿ ಸಭೆ ಕರೆದು ಆಡಳಿತ ಮಂಡಳಿಯ ತೀರ್ಮಾನದಂತೆ ನಡೆದುಕೊಂಡಿದ್ದೇವೆ ಎಂದು ತಿಳಿಸಿದರು.

ಸುದೇಶ್, ಈರೇಗೌಡ, ಅನಿಲ್, ಕೆಕೆ ಶಿವಣ್ಣ, ಶಿವಣ್ಣಚಾರಿ, ಯೋಗೇಶ್, ಶ್ರೀನಿವಾಸ್, ಕರಿನಾಯಕ, ಸ್ವಾಮಿಗೌಡ, ಸತೀಶ್, ಶ್ರೀನಿವಾಸ, ಮಂಜು, ಅಭಿ, ವೀರಭದ್ರಗೌಡ, ಸಣ್ಣೇಗೌಡ, ಪ್ರಸನ್ನ, ಕೃಷ್ಣೇಗೌಡ, ರಾಮೇಗೌಡ, ನಾಗೇಶ್ ಪಾಲ್ಗೊಂಡಿದ್ದರು.

ದಾರಿಯಲ್ಲಿ ಸಿಕ್ಕ ಚಿನ್ನದ ಸರ ಪೊಲೀಸರಿಗೆ ಒಪ್ಪಿಸಿದ ವ್ಯಕ್ತಿ



ಹೆಚ್.ಡಿ.ಕೋಟೆ: ದಾರಿಯಲ್ಲಿ ಸಿಕ್ಕಿದ 12 ಗ್ರಾಂ ಚಿನ್ನದ ಸರವನ್ನು ಪೊಲೀಸರಿಗೆ ಒಪ್ಪಿಸಿ ಮಾನವೀಯತೆ ಮೆರೆದ ಘಟನೆಯೊಂದು ಪಟ್ಟಣದಲ್ಲಿ ಸಂಭವಿಸಿದೆ.

ತಾಲೂಕಿನ ಜಿನಹಳ್ಳಿ ಗ್ರಾಮದ ನಿವಾಸಿ ಜೆ.ಪಿ.ಮರಳೂರು ನಾಯಕ ಅವರು ಹಂಪಾಪುರ ಗ್ರಾಮದ ಬೇಕರಿ ಸಮೀಪ ತೆರಳುತ್ತಿದ್ದ ವೇಳೆ 12 ಗ್ರಾಂ ತೂಕದ ಚಿನ್ನದ ಸರ ಅವರಿಗೆ ದಾರಿಯಲ್ಲಿ ಸಿಕ್ಕಿದೆ. ಆ ಚಿನ್ನದ ಸರವನ್ನು ಜೋಪಾನವಾಗಿ ತೆಗೆದುಕೊಂಡು ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ತಂದು ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್ ಅವರಿಗೆ ಕೊಟ್ಟಿರುತ್ತಾರೆ.

ಚಿನ್ನದ ಸರವನ್ನು ಕಳೆದುಕೊಂಡ ಸಂಬಂಧಪಟ್ಟ ವಾರಸುದಾರರು ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ (9480805063) ಸಂಪರ್ಕಿಸಿ ಸೂಕ್ತ ದಾಖಲೆ ಮತ್ತು ಮಾಹಿತಿ ಒದಗಿಸಿ ಸರವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

ಕನ್ನಡ ಸೇನೆ ಕರ್ನಾಟಕ ಅಧ್ಯಕ್ಷರಾಗಿ ರಾಚಪ್ಪ ಚಾರಿ ಆಯ್ಕೆ


ಎನ್.ಎಸ್.ರಾಚಪ್ಪಚಾರಿ(ರಾಜು) ಅವರನ್ನು ಅಭಿಮಾನಿಗಳು ಅಭಿನಂದಿಸಿದರು.

ತಿ.ನರಸೀಪುರ, ಜ.16–ಕನ್ನಡ ಸೇನೆ ಕರ್ನಾಟಕ ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ಎನ್.ಎಸ್‌ರಾಚಪ್ಪ ಚಾರಿ(ರಾಜು) ನೇಮಕಗೊಂಡಿದ್ದಾರೆ. ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರಾಗಿ ಎಂ.ಯು ಶೈಲಜಾ, ಜಿಲ್ಲಾ ಉಪಾಧ್ಯಕ್ಷರಾಗಿ ಎಂ ಮಲ್ಲೇಶ್, ಜಿಲ್ಲಾ ಕಾರ್ಮಿಕರ ಘಟಕದ ಉಪಾಧ್ಯಕ್ಷ ಬೈರಾಪುರ ಕೆ.ರಾಜು, ಕಾರ್ಮಿಕರ ಘಟಕದ ಅಧ್ಯಕ್ಷ ಸಿದ್ದರಾಜು, ಪದಾಧಿಕಾರಿಗಳಾಗಿ ಕಾಳಸ್ವಾಮಿ, ಆನಂದ, ಪ್ರಕಾಶ್, ಸಿದ್ದಮಲ್ಲಿಕಾರ್ಜುನ ಸ್ವಾಮಿ ಅವರುಗಳನ್ನು ರಾಜ್ಯಾಧ್ಯಕ್ಷ ಕೆಆರ್ ಕುಮಾರ್ ಅವರ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮ

ಹೆಚ್.ಡಿ.ಕೋಟೆ: ಓಬಿಸಿ ಜನಾಂಗವನ್ನು ಮುಂಚೂಣಿಗೆ ತರುವ ಉದ್ದೇಶದಿಂದ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮವನ್ನು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಜ.17ರಂದು ಏರ್ಪಡಿಸಲಾಗಿದೆ ಎಂದು ವಾಯ್ಸ್ ಆಫ್ ಓಬಿಸಿ ಜಿಲ್ಲಾ ಉಸ್ತುವಾರಿ ಎನ್.ಆರ್.ನಾಗೇಶ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ರಮಿಸುತ್ತಿದ್ದು, ಅವರು ರಾಷ್ಟ್ರ ಮಟ್ಟಕ್ಕೆ ಓಬಿಸಿ ಮುಖಂಡರಾಗಿ ಆಯ್ಕೆಯಾಗಿದ್ದಾರೆ. ಆದ್ದರಿಂದ ಈ ಕಾರ್ಯಕ್ರಮವನ್ನು ತಾಲೂಕಿನಿಂದಲೇ ಆರಂಭಿಸುತ್ತಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸುವಂತೆ ಕೋರಿದರು. ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಗಮಿಸಲಿದ್ದು, ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮದಲ್ಲಿ ಓಬಿಸಿಗಳಿಗಾಗಿ ಆಯೋಜಿಸಿರುವ ಯೋಜನೆಗಳನ್ನು ದೊಡ್ಡ ಎಲ್‌ಇಡಿ ಪರದೆಯ ಮೇಲೆ ಬಿತ್ತರಿಸಲಾಗುವುದು, ಓಬಿಸಿಗಳ ಅಭಿವೃದ್ಧಿಗೆ ಪಣ ತೊಟ್ಟ ಎಲ್ಲಾ ಮುಖಂಡರನ್ನು ಅಭಿನಂದಿಸಲಾಗುವುದು ಎಂದರು.

ಸಚಿವ ಮಧು ಬಂಗಾರಪ್ಪ ಅವರ ನಿರ್ದೇಶನದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ರಾಜ್ಯದಲ್ಲಿ ಒಟ್ಟು 100 ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅದರಂತೆ ತಾಲೂಕಿನಲ್ಲಿ ಮೊದಲ ಕಾರ್ಯಕ್ರಮ ನಡೆಯುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ವಿನೋದ್ ರಾಜ್, ಕಾರ್ಯದರ್ಶಿ ಜಿತೀಶ್, ಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಚಾಮರಾಜು, ಚಲುವರಾಜು, ಭೈರೇಗೌಡ, ಚಿಕ್ಕಣ್ಣ ಇದ್ದರು.

ಕಟ್ಟೆಕೊಪ್ಪಲು ಶಾಲೆಯಲ್ಲಿ ಕಲಿಕಾ ಹಬ್ಬ ಆಚರಣೆ

ತಿ.ನರಸೀಪುರ ಜ.16– ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರು ಮುಂದಾಗಬೇಕು ಎಂದು ಕನ್ನಡ ಸೇನೆಯ ಕಾರ್ಮಿಕ ವಿಭಾಗದ ಅಧ್ಯಕ್ಷ ಕಟ್ಟೆಕೊಪ್ಪಲು ಶಿವಸಿದ್ದು ತಿಳಿಸಿದರು.

ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರಿಗೆ ಕರೆ


ಕಲಿಕಾ ಹಬ್ಬವನ್ನು ಕಾರ್ಮಿಕ ವಿಭಾಗದ ಅಧ್ಯಕ್ಷ ಕಟ್ಟೆ ಕೊಪ್ಪಲು ಶಿವಸಿದ್ದು ಉದ್ಘಾಟಿಸಿದರು.

ತಾಲೂಕಿನ ಕಟ್ಟೆಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಲಿಯೂರು ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಹಬ್ಬವನ್ನು ಉದ್ಘಾಟಿಸಿ ಮಾತಾನಾಡಿ ವರ್ಣರಂಜಿತವಾದ ಸಂತಸದಾಯಕ ಕಲಿಕೆಗೆ ಪ್ರೇರಣೆ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಕಲಿಕಾ ಕೌಶಲಗಳನ್ನು ಬೆಳೆಸಲು ಕಲಿಕಾ ಹಬ್ಬವು ಸಹಕಾರಿ' ಎಂದರು.

ನಾನೂ ಓದುತ್ತಿದ್ದೇನೆ, ಶಾಲಾ ವಾಸ್ತವ್ಯ ಮತ್ತು ಕಲಿಕಾ ಖಾತ್ರಿ ಕಾರ್ಯಕ್ರಮಗಳ ಮಾದರಿಗಳನ್ನು ಹೇಳಿದರು. ಇದೇ ಸಂದರ್ಭದಲ್ಲಿ 2026ನೇ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು.

ಸಮಾರಂಭದ ಅಧ್ಯಕ್ಷತೆನ್ನು ಎಸ್‌ಡಿಎಂಸಿ ಅಧ್ಯಕ್ಷ ಎಂ.ಎನ್.ಶ್ರೀಧರ್ ವಹಿಸಿದ್ದರು. ಸಿಆರ್‌ಪಿ ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಸುಬ್ರಮಣ್ಯ ಮುಖ್ಯ ಶಿಕ್ಷಕ ಸಿದ್ದರಾಜಪ್ಪ , ಶಿಕ್ಷಕರಾದ ಮಹಾದೇವ, ಮುಖಂಡರಾದ ನಿಂಗೇಗೌಡ, ಸಿದ್ದರಾಜು, ರಾಜೇಶ್, ಶಿವನಂಜೇಗೌಡ, ಮರಿಗೌಡ ಹಾಗೂ ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.

ಸರಗೂರಲ್ಲಿ ಸಂಕ್ರಾಂತಿ ಸಂಭ್ರಮದ ಶ್ರೀ ಉಮಾಮಹೇಶ್ವರ ಉತ್ಸವ


ಸರಗೂರಲ್ಲಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ವೀರಶೈವ ಸಮಾಜದ ವತಿಯಿಂದ ಶ್ರೀ ಉಮಾಮಹೇಶ್ವರ ಉತ್ಸವ ಮೆರವಣಿಗೆ ನಡೆಸಲಾಯಿತು.

ಸರಗೂರು: ಪಟ್ಟಣದಲ್ಲಿ ವೀರಶೈವ ಸಮಾಜದ ವತಿಯಿಂದ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶ್ರೀ ಉಮಾಮಹೇಶ್ವರ ಉತ್ಸವ ಮೆರವಣಿಗೆ ನಡೆಸಲಾಯಿತು.

ಬೆಳಗಿನ ಜಾವದಿಂದಲೆ, ಶ್ರೀಬಸವೇಶ್ವರ ಹಾಗೂ ಶ್ರೀ ಕಾಳಮಂಟೇಶ್ವರ ದೇವಸ್ಥಾನದಲ್ಲಿ ಹೋಮ ಹವನ ಪೂಜಾ ಕೈಂಕರ್ಯ ನಡೆಸಲಾಯಿತು, ಭಕ್ತರು ತಳಿರು ತೋರಣ ಕಟ್ಟಿ ರಂಗೋಲಿ ಬಿಡಿಸಿ, ಶ್ರೀ ಉಮಾಮಹೇಶ್ವರ ಉತ್ಸವ ಮೂರ್ತಿಯನ್ನು ವಿವಿಧ ಹೂವಿನಿಂದ ಅಲಂಕರಿಸಿ ವಿಶೇಶ ಪೂಜೆ ನಡೆಸಿ ಮಹಾಮಂಗಳರಾತಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು. ನಂತರ ಪಟ್ಟಣದ ಪ್ರಮುಕ ರಸ್ತೆಯಲ್ಲಿ ಸತ್ತಿಗೆ ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಯಿತು, ಪೂಜಾ ಕಾರ್ಯವನ್ನು ರವಿಶಾಸ್ತ್ರೀ ನೆರವೇರಿಸಿದರು. ಸಮಾಜದ ಯಜಮಾನರು, ಮುಖಂಡರು, ಭಾಗವಹಿಸಿದ್ದರು.

ತಿ.ನರಸೀಪುರದಲ್ಲಿ ಸಂಭ್ರಮದ ಸಂಕ್ರಾಂತಿ ಆಚರಣೆ

ರಾಸುಗಳಿಗೆ ಕಿಚ್ಚಾಯಿಸಿ, ಹರ್ಷ ವ್ಯಕ್ತಪಡಿಸಿದ ಗ್ರಾಮಸ್ಥರು

ತಿ.ನರಸೀಪುರ, ಜ.16 ಸೂರ್ಯ ತನ್ನ ಪಥ ಬದಲಿಸುವ ಸಂಭ್ರಮದ ಮಕರ ಸಂಕ್ರಾಂತಿಯ ಶುಭದಿನದಂದು ಪಟ್ಟಣದ ಖಾಸಗಿ ಬಸ್ ನಿಲ್ದಾಣ ವೃತ್ತದಲ್ಲಿ ರೈತರು ರಾಸುಗಳನ್ನು ಕಿಚ್ಚಾಯಿಸಿ ಸಂಭ್ರಮಿಸಿದರು.

ಸಂಕ್ರಾಂತಿ ಸಂಭ್ರಮ ಪಟ್ಟಣದ ಜನತೆಯಲ್ಲಿ ಮನೆ ಮಾಡಿತ್ತು. ಪ್ರತಿ ವರ್ಷ ಸಂಕ್ರಾಂತಿ ದಿನ ಪಟ್ಟಣದ ರೈತರು ಲಿಂಕ್ ರಸ್ತೆಯಲ್ಲಿ ಅಡ್ಡಲಾಗಿ ಹಾಸಿದ ಹುಲ್ಲಿನ ರಾಶಿಗೆ ಮುಖಂಡರು ಪೂಜೆ ಸಲ್ಲಿಸಿ ಅಗ್ನಿಸ್ಪರ್ಶ ಮಾಡಿದರು. ಈ ಮೂಲಕ ಕಿಚ್ಚು ಹಾಯಿಸುವಿಕೆಗೆ ಚಾಲನೆ ನೀಡಲಾಯಿತು.

ಕಿಚ್ಚು ಹಾಯಲು ಸಿದ್ಧವಾಗಿರುವ ಅಲಂಕೃತ ಎತ್ತುಗಳು, ಹಸುಗಳು, ಕರುಗಳು ಹಾಗೂ ಮೇಕೆ–ಕುರಿಗಳು ಬೆಂಕಿಯ ಕೆನ್ನಾಲಗೆಯಲ್ಲಿ ಹಾದು ಹೋದವು.



ತಿ.ನರಸೀಪುರದಲ್ಲಿ ಮಕರ ಸಂಕ್ರಾಂತಿಯ ಅಂಗವಾಗಿ ರಾಸುಗಳನ್ನು ಕಿಚ್ಚು ಹಾಯಿಸಲಾಯಿತು ಮತ್ತು ಹೊಸ ತಿರುಮಕೂಡಲಿನಲ್ಲಿ ಬೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು ಅವರ ನೇತೃತ್ವದಲ್ಲಿ ಹಸುಗಳ ಮೆರವಣಿಗೆ ನಡೆಸಲಾಯಿತು.

ಇದಕ್ಕೂ ಮುನ್ನಾ ರೈತರು ತಮ್ಮ ಹಸುಗಳ ಕೊಂಬುಗಳಿಗೆ ಬಣ್ಣ ಹಚ್ಚಿ ಹೂಗಳಿಂದ ಸಿಂಗರಿಸಿ, ಅವುಗಳ ಮೈ ಮೇಲೆ ಅರಿಶಿನ ಹಚ್ಚಿ ಸಿಂಗರಿಸಿ ಮೆರವಣಿಗೆಯ ಮೂಲಕ ಕಿಚ್ಚಾಯಿಸುವ ಸ್ಥಳಕ್ಕೆ ತಂದರು. ರಾಸುಗಳ ಕಿಚ್ಚಾಯಿಸುವುದನ್ನು ನೋಡಲು ಖಾಸಗಿ ಬಸ್ ನಿಲ್ದಾಣ ಹಾಗೂ ಲಿಂಕ್ ರಸ್ತೆಯ ಇಕ್ಕೆಲಗಳಲ್ಲಿ ಜನಸಂದಣಿ ತುಂಬಿತ್ತು. ಗೃಹಿಣಿಯರು ಗೋವುಗಳಿಗೆ ಗೋಪೂಜೆ ನಡೆಸಿದರೆ, ಇತ್ತ ಮನೆಗಳಲ್ಲಿ ಸಿಹಿಪೊಂಗಲು ನೀಡಲಾಯಿತು.

ಶುಭಾಶಯ ವಿನಿಮಯ: ಹೆಣ್ಣು ಮಕ್ಕಳು ಹಾಗೂ ಗೃಹಿಣಿಯರು ವಿಶೇಷ ಅಲಂಕಾರ ಮಾಡಿಕೊಂಡು ಅಕ್ಕ–ಪಕ್ಕದ ಮನೆಗಳಿಗೆ ತೆರಳಿ ಎಳ್ಳು–ಬೆಲ್ಲ ನೀಡಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ವರ್ಷದ ಮೊದಲ ಹಬ್ಬ ಮಕರ ಸಂಕ್ರಮಣದ ಅಂಗವಾಗಿ ಪಟ್ಟಣದ ಶಿವಾಲಯ, ವಿಷ್ಣು ದೇವಾಲಯ, ಅಯ್ಯಪ್ಪ ಸ್ವಾಮಿ, ಬಳ್ಳೇಶ್ವರ ಸ್ವಾಮಿ, ರಾಯರ ಬೃಂದಾವನ ದೇಗುಲಗಳು ಸೇರಿದಂತೆ ವಿವಿಧೆಡೆ ವಿಶೇಷ ಪೂಜೆ ನಡೆದವು. ಬೆಳಗಿನಿಂದಲೇ ದೇವರಿಗೆ ಅಲಂಕಾರ, ಅಭಿಷೇಕ ಮತ್ತಿತರ ಸಾಂಪ್ರದಾಯಿಕ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಗಿಲ್ಲಿ ಗೆಲುವಿಗೆ ಕೋರಿ ದೇವರಿಗೆ ವಿಶೇಷ ಪೂಜೆ



ಚುಂಚನಕಟ್ಟೆ: ಬಿಗ್‌ಬಾಸ್ ಸೀಸನ್ 12ರಲ್ಲಿ ಗಿಲ್ಲಿ ನಟರಾಜು ಹಳ್ಳಿಹೈದ ಗೆಲ್ಲಬೇಕೆಂದು ಇತಿಹಾಸ ಪ್ರಸಿದ್ದ ಚುಂಚನಕಟ್ಟೆ ಶ್ರೀರಾಮ ರಥೋತ್ಸವದಲ್ಲಿ ಅಭಿಮಾನಿಗಳು 101 ಈಡುಗಾಗಿ ಅರ್ಪಿಸಿ ಪೂಜೆ ಸಲ್ಲಿಸಿದರು

ಕುಪ್ಪೆ ಸಹಕಾರ ಸಂಘದ ನಿರ್ದೇಶಕ ಸಿ.ಡಿ.ಪುನೀತ್ ಧನಪಾಲ್, ಸಾಲಿಗ್ರಾಮ ತಾಲೂಕು ಸಂಗೊಳ್ಳಿ ರಾಯಣ್ಣ ಯುವ ವೇದಿಕೆ ಅಧ್ಯಕ್ಷ ಚಿಕ್ಕಕೊಪ್ಪಲು ಅರುಣ್ ಕಲ್ಲಹಟ್ಟಿ, ಎಳನೀರು ಉದ್ಯಮಿ ನಿತಿನ್ ಲವಣ್ಣ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಅಭಿಮಾನಿಗಳು ಗಿಲ್ಲಿ ನಟರಾಜು ಗೆಲುವಿಗಾಗಿ ಶ್ರೀರಾಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು

ನಂತರ ಮಾತನಾಡಿದ ಅವರುಗಳು ಮಂಡ್ಯ ಜಿಲ್ಲೆಯ ಮಳವಳ್ಳಿಯ ದಡದಪುರದ ಗಿಲ್ಲಿ ನಟರಾಜು ಅವರು ಪಕ್ಕ ಹಳ್ಳಿ ಹುಡುಗನಾಗಿ ಕಿರುತರೆ ಹಾಸ್ಯ ನಟನಾಗಿ ತನ್ನದೇ ಆದ ಛಾಪು ಮೂಡಿಸಿದ್ದು ಇವನ ಗೆಲುವಿಗೆ ರಾಜ್ಯದ ಜನರು ಸಾಮಾಜಿಕ ಜಾಲ ತಾಣದಲ್ಲಿ ಓಟ್ ಮಾಡುವ ಮೂಲಕ ಗೆಲುವಿಗೆ ಕಾರಣರಾಗಬೇಕೆಂದರು.

ಈ ಸಂದರ್ಭದಲ್ಲಿ ಕುಪ್ಪೆ ಅಭಿ, ಕಾರ್ತೀಕ್ ಕಲ್ಲಹಟ್ಟಿ, ಕಾರ್ತಿಕ್ ಇದ್ದರು.

ಮತ್ತೆ ಮಲಿನಗೊಂಡಿದೆ ಮೈಸೂರಿನ ಹೆಬ್ಬಾಳು ಕೆರೆ

● ಕೆರೆಗೆ ಹರಿದಿದೆ ವಸತಿ ಬಡಾವಣೆಗಳ ಯುಜಿಡಿ ನೀರು; ಕೈಗಾರಿಕೆಗಳ ರಾಸಾಯನಿಕ ತ್ಯಾಜ್ಯ ● ಕೆರೆ ನೀರನ್ನು ಆವರಿಸಿರುವ ಲಂಟಾನ, ಮೀನುಗಳೂ ಬದುಕಿಲ್ಲ; ಇಲ್ಲಿಗೆ ಯಾವ ಪಕ್ಷಿಗಳೂ ಬರುತ್ತಿಲ್ಲ ● ಇನ್ಫೋಸಿಸ್ ಫೌಂಡೇಷನ್‌ನಿಂದ 105 ಕೋಟಿ ವೆಚ್ಚದಲ್ಲಿ ಪುನರುಜ್ಜೀವನಗೊಳಿಸಿದ ಕೆರೆ ಮತ್ತೆ ಕೊಚ್ಚೆ ಗುಂಡಿ



ಹುಲ್ಲುಹಾಸು ಅಥವಾ ಕೆರೆಯೋ...! ಮಲಿನಗೊಂಡು ದುರ್ವಾಸನೆ ಬೀರುತ್ತಿರುವ ಹೆಬ್ಬಾಳು ಕೆರೆ.



ಕೆರೆ ನೀರಿನಲ್ಲಿ ಲಂಟಾನ ಆವರಿಸಿದ್ದು ಅದನ್ನು ತೆರವುಗೊಳಿಸಲು ಬಿಬಿಎಂಪಿ ಮಾದರಿಯಲ್ಲಿ ಮೈಸೂರು ಮಹಾನಗರ ಪಾಲಿಕೆಯು ಒಂದು ಅತ್ಯಾಧುನಿಕ ಯಂತ್ರವನ್ನೇ ಖರೀದಿ ಮಾಡಲು ಮುಂದಾಗಿದೆ. ಈಗ ಗ್ರೇಟರ್ ಮೈಸೂರು ಮಹಾನಗರ ಪಾಲಿಕೆಯಾಗುತ್ತಿರುವುದರಿಂದ ಹೆಬ್ಬಾಳು ಕೆರೆ ಸೇರಿದಂತೆ ಮೈಸೂರಿನ ಇನ್ನೂ ಹಲವು ಕೆರೆಗಳು ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುತ್ತಿರುವುದರಿಂದ ಅವುಗಳ ನಿರ್ವಹಣೆಗೆ ನಮ್ಮದೇ ಆದ ಯಂತ್ರವನ್ನು ಖರೀದಿಸುವುದು ಸೂಕ್ತ ಎನಿಸಿದೆ. ಆದ ಕಾರಣ ಮುಂದಿನ ದಿನಗಳಲ್ಲಿ ಪಾಲಿಕೆಯು ಕೆರೆಯನ್ನು ಸಂಪರ್ಕಕ ರೀತಿ ನಿರ್ವಹಿಸಲಿದೆ.

-ಮಂಜು, ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ.



ಕೆರೆಗೆ ಹರಿದು ಬರುತ್ತಿರುವ ಒಳ ಚರಂಡಿ ನೀರು ಮತ್ತು ಕೈಗಾರಿಕೆಗಳ ಘನ ತ್ಯಾಜ್ಯವನ್ನು ತಡೆಗಟ್ಟಬೇಕು. ಕೆರೆಯು ಚಾಮುಂಡೇಶ್ವರಿ ಕ್ಷೇತ್ರ ಇಲ್ಲವೇ ಚಾಮರಾಜ ಕ್ಷೇತ್ರ ವ್ಯಾಪ್ತಿಗೆ ಬರುತ್ತದೆಯೇ ಎಂಬ ಗೊಂದಲದಿಂದಾಗಿ ಕೆರೆ ನಿರ್ವಹಣೆ ಇಲ್ಲದೇ ಸೊರಗುತ್ತಿದೆ. ಅದರಿಂದಾಗಿ ಅಲ್ಲಿನ ಜಲಚರಗಳು ನಾಶವಾಗಿದ್ದು, ಪಕ್ಷಿಗಳೂ ಬರುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸದಿದ್ದಲ್ಲಿ ವಾಯುವಿಹಾರಿಗಳು ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದಾರೆ.

- ರವಿ ಆರ್ ಡೆಲ್ಲಿ, ಅಧ್ಯಕ್ಷರು, ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ



ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ನಾವೇ ಹೆಬ್ಬಾಳು ಕೆರೆ ನೀರನ್ನು ಸ್ವಚ್ಛಗೊಳಿಸಿದ್ದೆವು. ವಸತಿ ಬಡಾವಣೆ ಹಾಗೂ ಕೈಗಾರಿಕಾ ಬಡಾವಣೆಗಳಿಂದ ತ್ಯಾಜ್ಯ ಕೆರೆಗೆ ಸೇರುತ್ತಿರುವುದರಿಂದ ಈ ಸಮಸ್ಯೆಗೆ ಸದ್ಯ ಪರಿಹಾರ ಮರೀಚಿಕೆಯಾಗಿದೆ. ನಮ್ಮ ಸಿಬ್ಬಂದಿಗಳನ್ನು ಕಳುಹಿಸಿ ಪರಿಸ್ಥಿತಿ ಅವಲೋಕನ ಮಾಡಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು.

– ಚಂದ್ರಶೇಖರ್, ಆಯುಕ್ತರು, ಹೂಟಗಳ್ಳಿ ನಗರ ಸಭೆ.

ಮೈಸೂರು, ಜ.16 (ಆರ್‌ಕೆ)– ಮೈಸೂರಿನ ಪ್ರಮುಖ ಕೆರೆಗಳಲ್ಲಿ ಒಂದಾದ ಹೆಬ್ಬಾಳು ಕೆರೆ ಈಗ ಮತ್ತೆ ಮಲಿನಗೊಂಡು, ದುರ್ವಾಸನೆ ಬೀರುತ್ತಿದೆ.

ಹೆಬ್ಬಾಳು, ಲಕ್ಷ್ಮೀಕಾಂತನಗರ, ವಿಜಯನಗರ 2ನೇ ಹಂತ ಹಾಗೂ ಸುತ್ತಮುತ್ತಲಿನ ವಸತಿ ಬಡಾವಣೆಗಳ ಒಳ ಚರಂಡಿ ನೀರು ನಿರಂತರವಾಗಿ ಕೆರೆ ಸೇರುತ್ತಿರುವುದು, ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗುವ ರಾಸಾಯನಿಕ ತ್ಯಾಜ್ಯವನ್ನು ಕೆರೆಗೆ ಬಿಡುತ್ತಿರುವುದು ನೀರು ಕಲುಷಿತಗೊಳ್ಳಲು ಪ್ರಮುಖ ಕಾರಣವಾಗಿದೆ. ಅಲ್ಲದೇ ಕೆರೆಯನ್ನು ನಿರಂತರವಾಗಿ ನಿರ್ವಹಣೆ ಮಾಡದಿರುವುದು, ಹೆಚ್ಚುವರಿ ನೀರು ಹೊರಗೆ ಹೋಗಲು ಅನುವು ಮಾಡಿ ಕೊಡದಿರುವುದು ಸಹ ಕೆರೆಯ ದುಃಸ್ಥಿತಿಗೆ ಕಾರಣ

ಜಲಚರ ನಾಶ: ಈಗ ಕೆರೆ ನೀರು ಸಂಪೂರ್ಣವಾಗಿ ಕಲುಷಿತಗೊಂಡಿದ್ದು, ಅಲ್ಲಿನ ಮೀನು ಮತ್ತಿತರ ಜಲಚರ ಪ್ರಾಣಿ ಸಂಕುಲ ನಾಶವಾಗಿವೆ. ಹಾಗೂ ಕೆಟ್ಟ ದುರ್ವಾಸನೆ ಬೀರುತ್ತಿರುವುದರಿಂದ ಅಲ್ಲಿಗೆ ಪಕ್ಷಿಗಳೂ ಬರುತ್ತಿಲ್ಲ. ಸುಮಾರು 36 ಎಕರೆ ವಿಸ್ತೀರ್ಣ ಹೊಂದಿರುವ ಕೆರೆಯಲ್ಲಿ ನಾಲ್ಕು ದ್ವೀಪಗಳಿದ್ದು, ವರ್ಷಪೂರ್ತಿ ಕೇಳಿ ಬರುತ್ತಿದ್ದ ಪಕ್ಷಿಗಳ ಕಲರವ ಈಗ ಮಾಯವಾಗಿದೆ. ಅಲ್ಲಿನ ಮರಗಳು ಬರಡಾದಂತೆ ಕಾಣುತ್ತಿವೆ.

ವಾಯು ವಿಹಾರಿಗಳ ರೋಧನೆ: ಹೆಬ್ಬಾಳು ಕೆರೆ ನೀರು ಕಲುಷಿತಗೊಂಡು ದುರ್ವಾಸನೆ ಬೀರುತ್ತಿರುವುದರಿಂದ ಪ್ರತಿದಿನ ಬೆಳಿಗ್ಗೆ ಸಂಜೆ ಕೆರೆಯ 2.1 ಕಿ.ಮೀ. ಪಥದಲ್ಲಿ ವಾಯುವಿಹಾರ ಮಾಡುವ ಸಾವಿರಾರು ಮಂದಿ ಹೇಸಿಗೆ ಪಡು ವಂತಾಗಿದೆ.

ಇನ್ಫೋಸಿಸ್‌ನಿಂದ ಪುನರುಜ್ಜೀವನ: ತೀವ್ರ ನಿರ್ಲಕ್ಷ್ಯಕ್ಕೊಳಗಾಗಿದ್ದ 51 ಎಕರೆ ವಿಸ್ತೀರ್ಣದ ಪ್ರಮುಖ ಹೆಬ್ಬಾಳು ಕೆರೆಯನ್ನು ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾಮೂರ್ತಿ ಅವರು 2016–17ನೇ ಸಾಲಿನಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡು ಸುಮಾರು 105 ಕೋಟಿ ರೂ. ಖರ್ಚು ಮಾಡಿ ಪುನರುಜ್ಜೀವನಗೊಳಿಸಿದ್ದರು. ನಂತರ ಅವರೇ ಕೆಲಕಾಲ ಕೆರೆಯನ್ನು ನಿರ್ವಹಿಸುತ್ತಾ ಬಂದಿದ್ದರಾದರೂ ಮೈಸೂರು ಮಹಾನಗರಪಾಲಿಕೆಯಾಗಲೀ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಾಗಲೀ, ಹೂಟಗಳ್ಳಿ ನಗರಸಭೆಯಾಗಲೀ, ಬಳಿಕ ಅತ್ತ ಗಮನಹರಿಸದ ಕಾರಣ ಈಗ ಮತ್ತೆ ಕೆರೆ ಹಾಳಾಗಿದೆ.

ನೀರು ಶುದ್ಧೀಕರಣ: 4,65,000 ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಹೆಬ್ಬಾಳು ಕೆರೆಯಲ್ಲಿ ಇನ್ಫೋಸಿಸ್ ಫೌಂಡೇಷನ್‌ನಿಂದಲೇ 80 ಲಕ್ಷ ಲೀಟರ್ ನೀರು ಶುದ್ಧೀಕರಣ ಸಾಮರ್ಥ್ಯದ ಎಸ್‌ಟಿಪಿ ಘಟಕ ಸ್ಥಾಪಿಸಿದ್ದು, ಪ್ರತಿದಿನ 60 ಲಕ್ಷ ಲೀ.ನೀರನ್ನು ಶುದ್ಧೀಕರಣ ಮಾಡಲಾಗುತ್ತಿದೆ. ಅದರಿಂದ ಸಂಸ್ಕರಿಸಿದ ನೀರಿನ ಗುಣಮಟ್ಟವು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿರುವ ಪರಿಮಿತಿಯಲ್ಲಿ ಎಸ್‌ಟಿಪಿ ಕಾರ್ಯ ನಿರ್ವಹಿಸುತ್ತಿದೆ.

ನಗರ ಸಭೆಯಿಂದ ನಿರ್ವಹಣೆ ಹೊಣೆ : ಕೆರೆ ನೀರು ಲಂಟಾನದಿಂದ ಆವರಿಸಿ ಸಂಪೂರ್ಣ ಕಲುಷಿತಗೊಂಡಿದ್ದನ್ನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಬೆಳಕು ಚೆಲ್ಲಿದ ಪರಿಣಾಮ 2025 ರ ಏಪ್ರಿಲ್‌ನಲ್ಲಿ ಹೂಟಗಳ್ಳಿ ನಗರ ಸಭೆ ಆಯುಕ್ತ ಚಂದ್ರಶೇಖರ್ ಬೋಟ್‌ಗಳ ಬಳಸಿ ಕೆರೆಯಲ್ಲಿನ ತ್ಯಾಜ್ಯವನ್ನು ತೆರವುಗೊಳಿಸಿದ್ದರು. ಆದರೆ ಇದೀಗ ನಿರ್ವ ಹಣೆಯ ಕೊರತೆಯಿಂದಾಗಿ ಕೆರೆ ಮತ್ತೆ ಅಧೋಗತಿಗೆ ತಲುಪಿರುವುದು ಶೋಚನೀಯ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಕೆಎಸ್‌ಟಿಎ ಫೆಲೋ ಗೌರವಕ್ಕೆ ಡಾ.ಶೋಭಿತ್ ರಂಗಪ್ಪ ಭಾಜನ



ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್‌ನ ನಿರ್ದೇಶಕ ಡಾ.ಶೋಭಿತ್ ರಂಗಪ್ಪ(ಕುಳಿತವರಲ್ಲಿ ಎಡದಿಂದ ಮೊದಲನೆಯವರು) ಅವರಿಗೆ ಕೆಎಸ್‌ಟಿಎ ಫೆಲೋ ಪದವಿ ಪ್ರದಾನ ಮಾಡಲಾಯಿತು. ಇದೇ ವೇಳೆ ಸಿಇಎನ್‌ಎಸ್‌ನ ನಿವೃತ್ತ ಹಿರಿಯ ವಿಜ್ಞಾನಿ ಪ್ರೊ.ಸಿ.ವಿ.ಯೆಲಮಗ್ಗದ್ ಮತ್ತು ಗುಲ್ಬರ್ಗಾ ವಿವಿ ಪ್ರೊ.ಚಂದ್ರಕಾಂತ್ ಕೆಲ್ಮಣಿ ಅವರನ್ನೂ ಗೌರವಿಸಲಾಯಿತು.

ಮೈಸೂರು, ಜ.16– ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್‌ನ ನಿರ್ದೇಶಕ ಡಾ.ಶೋಭಿತ್ ರಂಗಪ್ಪ ಅವರು ಪ್ರತಿಷ್ಠಿತ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಸಂಘ(ಕೆಎಸ್‌ಟಿಎ)ದ ಫೆಲೋ ಪದವಿಗೆ ಭಾಜನರಾಗಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಡಾ.ಶೋಭಿತ್ ರಂಗಪ್ಪ ನೀಡುತ್ತಿರುವ ಅತ್ಯುತ್ತಮ ಕೊಡುಗೆಗೆ ಈ ಗೌರವ ಸಂದಿದೆ. ಕೆಎಸ್‌ಟಿಎ ಅಧ್ಯಕ್ಷರೂ ಆದ ಕರ್ನಾಟಕದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅವರು ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಹೆಚ್.ರಾಜಾಸಾಬ್ ಇನ್ನಿತರ ಗಣ್ಯರ ಸಮ್ಮುಖದಲ್ಲಿ ಡಾ. ಶೋಭಿತ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ವೇಳೆ ಸಿಇಎನ್‌ಎಸ್‌ನ ನಿವೃತ್ತ ಹಿರಿಯ ವಿಜ್ಞಾನಿ ಪ್ರೊ.ಸಿ.ವಿ.ಯೆಲಮಗ್ಗದ್ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರೊ. ಚಂದ್ರಕಾಂತ್ ಕೆಲ್ಮಣಿ ಅವರನ್ನೂ ಗೌರವಿಸಲಾಯಿತು.

ಮೈಸೂರು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅವರ ಪುತ್ರರಾದ ಡಾ.ಶೋಭಿತ್ ರಂಗಪ್ಪ ಸಕ್ರಿಯ ಸಂಶೋಧಕರಾಗಿದ್ದು, ಅಂತರ ರಾಷ್ಟ್ರೀಯ ಖ್ಯಾತಿಯ ಜರ್ನಲ್‌ಗಳಲ್ಲಿ 100ಕ್ಕಿಂತ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಕ್ಯಾನ್ಸರ್ ಔಷಧ ಸಂಶೋಧನೆ ಕ್ಷೇತ್ರದಲ್ಲಿ 7ಕ್ಕೂ ಹೆಚ್ಚು ಪೇಟೆಂಟ್‌ಗಳನ್ನು ಹೊಂದಿದ್ದಾರೆ. ಇವರಿಗೆ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿ ಹಾಗೂ ಗೌರವಗಳು ಸಂದಿವೆ.

ಡಾ.ಶೋಭಿತ್ ಅವರ ಕ್ಯಾನ್ಸರ್ ಸಂಬಂಧಿತ ಸಂಶೋಧನೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಕೆಎಸ್‌ಟಿಎ ಗೌರವಿಸಿರುವುದು ನಮ್ಮ ವಿವಿಯ ಗೌರವವನ್ನೂ ಹೆಚ್ಚಿಸಿದೆ ಎಂದು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎನ್.ಶ್ರೀಧರ ಅವರು ಪತ್ರಿಕಾ ಪ್ರಕಟಣೆಯಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.

ಮಾಜಿ ಸಚಿವ, ಶತಾಯುಷಿ ಭೀಮಣ್ಣ ಖಂಡ್ರೆ ನಿಧನ



ಬೀದರ್: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷ, ಶತಾಯುಷಿ ಭೀಮಣ್ಣ ಖಂಡ್ರೆ (102) ಅವರು ಶುಕ್ರವಾರ ಇಲ್ಲಿನ ಅವರ ಸ್ವಗೃಹದಲ್ಲಿ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರಿಗೆ ಜೀವರಕ್ಷಕಗಳ ಮೂಲಕ ಒಂದು ವಾರ ಬೀದರ್ ನಗರದ ಗುದಗೆ ಮಲ್ಟಿ ಸ್ಪೆಷಾಲಿಟಿ ಅಂಡ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿತ್ತು. ಸತತವಾಗಿ ಆರೋಗ್ಯ ಕ್ಷೀಣಿಸಿದ ಕಾರಣ ಸೋಮವಾರ (ಜ.12) ಅವರನ್ನು ಮನೆಗೆ ಕರೆದೊಯ್ಯಲಾಗಿತ್ತು. ಬಳಿಕ ಮನೆಯಲ್ಲಿಯೇ ವೈದ್ಯರ ತಂಡ ಅವರನ್ನು ಉಪಚರಿಸುತ್ತಿತ್ತು. ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿತ್ತು. ಶುಕ್ರವಾರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ರಾತ್ರಿ ನಿಧನರಾದರು. ತಂದೆಯ ಅನಾರೋಗ್ಯದ ಹಿನ್ನೆಲೆಯಲ್ಲಿ ಅವರ ಮಗ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ, ಮೊಮ್ಮಗ ಸಾಗರ ಖಂಡ್ರೆ ಸೇರಿದಂತೆ ಕುಟುಂಬ ಸದಸ್ಯರು ಎಲ್ಲಾ ರೀತಿಯ ಕಾರ್ಯಕ್ರಮಗಳಿಂದ ದೂರ ಉಳಿದು ಮನೆಯಲ್ಲಿಯೇ ಉಳಿದುಕೊಂಡಿದ್ದರು.

ಖಂಡ್ರೆಯವರ ಆರೋಗ್ಯದಲ್ಲಿ ಏರುಪೇರಾದ ವಿಷಯ ತಿಳಿದು ವಿವಿಧ ಮಠಾಧೀಶರು, ಸಚಿವರು, ಶಾಸಕರು, ರಾಜಕೀಯ ಪಕ್ಷಗಳ ಮುಖಂಡರು, ಅವರ ಬೆಂಬಲಿಗರು ಕಳೆದ ಹಲವು ದಿನಗಳಿಂದ ಅವರ ಮನೆಗೆ ಭೇಟಿ ನೀಡುತ್ತಿದ್ದರು.

ಭೀಮಣ್ಣ ಖಂಡ್ರೆಯವರಿಗೆ ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ಸೇರಿದಂತೆ ಇಬ್ಬರು ಪುತ್ರರು, ಐದು ಜನ ಪುತ್ರಿಯರು ಇದ್ದಾರೆ. ಪತ್ನಿ ಲಕ್ಷ್ಮೀಬಾಯಿ ಖಂಡ್ರೆ, ಗಂಡು ಮಕ್ಕಳ ಪೈಕಿ ಹಿರಿಯ ಮಗ, ಮಾಜಿ ಶಾಸಕ ವಿಜಯಕುಮಾರ್ ಖಂಡ್ರೆ ಅವರು ಅನಾರೋಗ್ಯದಿಂದ ಈ ಹಿಂದೆಯೇ ಮೃತಪಟ್ಟಿದ್ದಾರೆ.

ನಾಲ್ಕು ಸಲ ಶಾಸಕರಾಗಿ, ಎರಡು ಸಲ ವಿಧಾನ ಪರಿಷತ್ ಸದಸ್ಯರಾಗಿದ್ದ ಭೀಮಣ್ಣ ಖಂಡ್ರೆ ಅವರು ಎಂ. ವೀರಪ್ಪ ಮೊಯ್ಲಿ ಅವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕೆಲಸ ನಿರ್ವಹಿಸಿದ್ದರು. ಸಮಾಜವಾದಿ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ಜೀವನ ಆರಂಭಿಸಿದ ಅವರು, 1953ರಲ್ಲಿ ಭಾಲ್ಕಿ ಪುರಸಭೆ ಅಧ್ಯಕ್ಷರಾಗಿದ್ದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ

ಫೆ.7ರಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರೈತ ಜಾಗೃತಿ ಜಾಥಾ

ಮೈಸೂರು, ಜ.16(ಜಿಎ)– ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೆ ಆಗ್ರಹಿಸಿ ರಾಜಕೀಯೇತರ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರೈತ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಸಹ ಸಂಚಾಲಕ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.7 ರಂದು ಕನ್ಯಾಕುಮಾರಿಯಿಂದ ಜಾಥಾ ಆರಂಭವಾಗಲಿದೆ. ಸುಮಾರು 40 ದಿನ ಪ್ರಯಾಣಿಸಿ ಕಾಶ್ಮೀರ ತಲುಪಿದ ನಂತರ ಮಾ.19 ರಂದು ದೆಹಲಿಯನ್ನು ತಲುಪಿ ಅಲ್ಲಿನ ರಾಮ್ ಲೀಲಾ ಮೈದಾನದಲ್ಲಿ ದೇಶದ ಎಲ್ಲಾ ರೈತರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು. ಬಳಿಕ ಜಾಥಾ ವೇಳೆ ದೇಶದ ರೈತರಿಂದ ಸಂಗ್ರಹಿಸಿರುವ ಸಹಿ ಸಂಗ್ರಹದ ಮನವಿ ಪತ್ರವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ಹಿಂದೆ ದೆಹಲಿ ಗಡಿಯಲ್ಲಿ ವರ್ಷಾನುಕಾಲ ರೈತರು ಚಳುವಳಿ ನಡೆಸಿ ಸರ್ಕಾರವನ್ನು ಎಚ್ಚರಿಸಿದ್ದರು. ಗಂಭೀರ ಕ್ರಮ ಜಾರಿಯಾಗದ ಕಾರಣ ಕಳೆದ ವರ್ಷ ರಾಷ್ಟ್ರೀಯ ಸಂಚಾಲಕ ರೈತ ಮುಖಂಡ ಜಗಜಿತ್ ಸಿಂಗ್ ದಲೈವಾಲಾ 131 ದಿನ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ನಂತರ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನವಾಬ್ ಸಿಂಗ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಸಮಸ್ಯೆ ಪರಿಹಾರಕ್ಕೆ ವರದಿ ನೀಡುವಂತೆ ಸೂಚಿಸಿದ್ದರು.

ಈ ಸಮಿತಿ ರೈತರ ಪರವಾಗಿ ವರದಿ ನೀಡಿದೆ. ಅದೇ ರೀತಿ ಕೇಂದ್ರ ಸರ್ಕಾರದ ಕೃಷಿ ಅಧ್ಯಯನದ 31 ಜನರ ಸಂಸದೀಯ ಸಮಿತಿ ಸಹ ರೈತರ ಪರವಾದ ವರದಿ ನೀಡಿ ಎಂಎಸ್‌ಪಿ ಖಾತ್ರಿ ಕಾನೂನು ಜಾರಿಗೆ ಬೆಂಬಲಿಸಿದೆ. ಇದು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ಹೋರಾಟದ ಫಲವಾಗಿ ಆಗಿರುವ ಸಾಧನೆ. ಆದರೆ ಕೇಂದ್ರ ಸರ್ಕಾರ ಈ ಬಗ್ಗೆ ಇನ್ನು ಯಾವುದೇ ಚಕಾರ ಎತ್ತುತ್ತಿಲ್ಲ. ಆದ್ದರಿಂದ ರೈತರಲ್ಲಿ ಜಾಗೃತಿ ಮೂಡಿಸಲು ಸರ್ಕಾರವನ್ನು ಎಚ್ಚರಿಸಬೇಕಾಗಿರುವ ನಿಟ್ಟಿನಲ್ಲಿ ಈ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು.

ಎಂಎಸ್‌ಪಿ ಖಾತರಿ ಕಾನೂನು ಇಲ್ಲದ ಕಾರಣ ದೇಶದ ರೈತರು ವರ್ಷಕ್ಕೆ 15 ಲಕ್ಷ ಕೋಟಿ ನಷ್ಟ ಅನುಭವಿಸುತ್ತಿದ್ದಾರೆ. ಜಾಥಾ ವೇಳೆ ಆಯಾ ರಾಜ್ಯದ ರೈತ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಜಾಥಾ ಹಾದು ಹೋಗುವ ಪ್ರತಿಯೊಂದೂ ರಾಜ್ಯದ ಸಿಎಂಗಳನ್ನು ಭೇಟಿ ಮಾಡಿ ಎಂಎಸ್‌ಪಿ ಕುರಿತು ಮನವರಿಕೆ ಮಾಡಿಕೊಡಲಾಗುವುದು. ರೈತರಿಂದ ಸಹಿ ಸಂಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಮಾರ್ಬಳ್ಳಿ ನೀಲಕಂಠಪ್ಪ, ವರಕುಡ ನಾಗೇಶ್ ಉಪಸ್ಥಿತರಿದ್ದರು.

ಸಂಚಾರ ಪೊಲೀಸರಿಂದ ರಕ್ತದಾನ

ಮೈಸೂರು, ಜ.16 (ಆರ್‌ಕೆ)– ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಮೈಸೂರಿನ ಬೋಗಾದಿ ಬಳಿ ರಿಂಗ್ ರಸ್ತೆಯಲ್ಲಿರುವ ಜಿಎಲ್‌ಎನ್ ಕಲ್ಯಾಣ ಮಂಟಪದಲ್ಲಿ ಬುಧವಾರ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಸಂಚಾರ ಪೊಲೀಸರು ರಕ್ತದಾನ ಮಾಡಿದರು.

ಮೈಸೂರು ನಗರ ಸಂಚಾರ ಪೊಲೀಸ್ ಹಾಗೂ ಆವಂತ್ ಬಿಕೆಜಿ ಆಸ್ಪತ್ರೆ ಆಶ್ರಯದಲ್ಲಿ ಆಯೋಜಿಸಿದ್ದ ಶಿಬಿರವನ್ನು ನಗರ ಪೊಲೀಸ್ ಕಮೀಷನರ್ ಶ್ರೀಮತಿ ಸೀಮಾ ಲಾಟ್ಕರ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್. ಸುಂದರ್ ರಾಜ್, ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್, ಸಂಚಾರ ವಿಭಾಗದ ಎಸಿಪಿ ಎಂ. ಶಿವಶಂಕರ್ ಸೇರಿದಂತೆ ಮೈಸೂರಿನ ಎಲ್ಲಾ ಉಪವಿಭಾಗದ ಎಸಿಪಿಗಳು ಹಾಗೂ ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಮತ್ತು ಸಿಬ್ಬಂದಿ ರಕ್ತದಾನ ಮಾಡಿದರು.


ಶಿಬಿರದಲ್ಲಿ ಸಂಗ್ರಹವಾದ ರಕ್ತವನ್ನು ರೆಡ್‌ಕ್ರಾಸ್ ಸಂಸ್ಥೆಗೆ ನೀಡಲಾಯಿತು. ಈ ವೇಳೆ ಸಾರ್ವಜನಿಕರು ಸಹ ಭಾಗವಹಿಸಿ ರಕ್ತದಾನ ಮಾಡಿದರು ಎಂದು ನಗರ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಡಾ. ವೈ.ಹೆಚ್. ನಾಯಕವಾಡಿ ಅವರ ಮಾರ್ಗದರ್ಶನದಲ್ಲಿ ಮಹದೇವ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ನಿಜಾಮ್ ಕರ್ನಾಟಕದಲ್ಲಿ ದಲಿತ ಚಳವಳಿ (1906–1948) ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದೆಹಲಿ ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ಆಹ್ವಾನ; ಮೈಸೂರಿನ ಮುದ್ರಾ ಫಲಾನುಭವಿ ಸರಸ್ವತಿಗೆ ಬಿಜೆಪಿ ಅಭಿನಂದನೆ



77ನೇ ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ಆಯ್ಕೆಯಾಗಿರುವ ಕೇಂದ್ರ ಸರ್ಕಾರದ ಮುದ್ರಾ ಯೋಜನೆ ಫಲಾನುಭವಿ ಮೈಸೂರಿನ ರಾಮಕೃಷ್ಣನಗರದ ಸರಸ್ವತಿ ಅವರನ್ನು ಬಿಜೆಪಿ ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಅಭಿನಂದಿಸಲಾಯಿತು. ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಸಿದ್ದರಾಜು, ಅರುಣ್ ಕುಮಾರ್‌ಗೌಡ, ದೇವರಾಜ್, ಮಹೇಶ್ ಇನ್ನಿತರರಿದ್ದರು.

ಮೈಸೂರು, ಜ.16(ಎಂಕೆ)– ರಾಷ್ಟ್ರ ರಾಜಧಾನಿ ನವದೆಹಲಿಯ ರಾಜಪಥದಲ್ಲಿ ಜ.26 ರಂದು ನಡೆಯುವ 77ನೇ ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ಆಯ್ಕೆಯಾಗಿರುವ ಕೇಂದ್ರ ಸರ್ಕಾರದ ಮುದ್ರಾ ಯೋಜನೆ ಫಲಾನುಭವಿ ಮೈಸೂರು ರಾಮಕೃಷ್ಣನಗರದ ಸರಸ್ವತಿ ಅವರನ್ನು ಬಿಜೆಪಿ ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.

ನಗರದ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಗರಾಧ್ಯಕ್ಷ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ ಅವರು, ಸರಸ್ವತಿ ಅವರನ್ನು ಅಭಿನಂದಿಸಿದರು. ಇದಕ್ಕೂ ಮುನ್ನ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರಿನ ರಾಮಕೃಷ್ಣನಗರ ನಿವಾಸಿ ಸರಸ್ವತಿ ಅವರು ಮುದ್ರಾ ಯೋಜನೆಯಡಿ ಯೂನಿಯನ್ ಬ್ಯಾಂಕ್ ಮೂಲಕ ಸಾಲ ಪಡೆದು ಟೈಲರಿಂಗ್ ಮತ್ತು ಪಾರ್ಲರ್ ಆರಂಭಿಸಿ ಯಶಸ್ಸು ಕಂಡಿದ್ದಾರೆ. ಆದ್ದರಿಂದ ಯೂನಿಯನ್ ಬ್ಯಾಂಕ್ ಮೂಲಕ ಕೇಂದ್ರ ಸರ್ಕಾರ ಆಹ್ವಾನ ನೀಡಿದೆ. ಮುದ್ರಾ ಯೋಜನೆ ಫಲಾನುಭವಿಗಳನ್ನು ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ಆಹ್ವಾನಿಸುವ ಮೂಲಕ ಸ್ವಯಂ ಉದ್ಯೋಗಿಗಳಾಗಲು ಬಯಸುವವರಿಗೆ ಪ್ರೇರಣೆ ನೀಡಿದಂತಾಗಿದೆ ಎಂದು ಶ್ಲಾಘಿಸಿದರು.

ಕಳೆದೊಂದು ವರ್ಷದ ಅವಧಿಯಲ್ಲಿ ಮುದ್ರಾ ಯೋಜನೆಯಡಿ ಮೂರು ಸಾವಿರ ಕೋಟಿ ರೂ. ನೆರವನ್ನು ಮೈಸೂರು ಜಿಲ್ಲೆಯೊಂದರಲ್ಲಿಯೇ ಪಡೆದುಕೊಳ್ಳಲಾಗಿದೆ. 2019 ರಿಂದ ಇಲ್ಲಿಯವರೆಗೆ ಮುದ್ರಾ ಯೋಜನೆಯಡಿ ಮೈಸೂರು ಜಿಲ್ಲೆಗೆ ಹತ್ತು ಸಾವಿರ ಕೋಟಿ ನೆರವು ನೀಡಲಾಗಿದೆ. ಈ ಯೋಜನೆಯಿಂದ ಸಾಕಷ್ಟು ಜನರು ಉದ್ಯಮಿಗಳಾಗಿ, ಉದ್ಯೋಗ ನೀಡುವ ಹಂತಕ್ಕೆ ಬೆಳೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎರಡೂರು ಜನರಿಗೆ ಕೆಲಸ ನೀಡಿದ್ದೇನೆ: ಸರಸ್ವತಿ ಮಾತನಾಡಿ, ಕೇಂದ್ರ ಸರ್ಕಾರ ಮುದ್ರಾ ಯೋಜನೆ ಘೋಷಣೆ ಮಾಡಿದ ಕೆಲವು ದಿನದಲ್ಲೇ 2.25 ಲಕ್ಷ ರೂ. ಸಾಲ ಪಡೆದು ಟೈಲರಿಂಗ್ ಆರಂಭಿಸಿದೆ. ಪಡೆದ ಸಾಲ ತೀರಿಸಿ, ಮತ್ತೆ 10 ಲಕ್ಷ ರೂ. ಸಾಲ ಪಡೆದು ಟೈಲರಿಂಗ್ ಮತ್ತು ಪಾರ್ಲರ್ ನಡೆಸುತ್ತಾ ಉದ್ಯಮಿಯಾಗಿ ಎರಡೂರು ಜನರಿಗೆ ಕೆಲಸ ಕೊಡುವ ಹಂತಕ್ಕೆ ಬೆಳೆದಿದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಮುದ್ರಾ ಯೋಜನೆಯಿಂದ ಸಾಕಷ್ಟು ಜನರಿಗೆ ಅನುಕೂಲವಾಗಿದ್ದು, ಯೋಜನೆಯ ಫಲಾನುಭವಿಯಾಗಿರುವ ನನ್ನನ್ನು ದೆಹಲಿಯ ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ಆಹ್ವಾನಿಸಿರುವುದು ಸಂತಸ ತಂದಿದ್ದು, ಜ.24 ರಂದೇ ದೆಹಲಿ ಪ್ರಯಾಣ ಮಾಡುತ್ತೇನೆ. ಪ್ರಯಾಣದ ಎಲ್ಲಾ ಖರ್ಚುವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ ಎಂದು ತಿಳಿಸಿದರು.

ಅಭಿನಂದನೆ: ಇದೇ ವೇಳೆ ಬಿಜೆಪಿ ನಗರಾಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು. ರಾಜ್ಯ ವಕ್ತಾರ ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಿ.ಕೆ.ರುದ್ರಮೂರ್ತಿ, ಬಿ.ಎಂ.ರಘು, ಸೋಮಸುಂದರ್, ಜಿಲ್ಲಾ ವಕ್ತಾರ ಎಂ.ಜಿ.ಮೋಹನ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ದ್ವಾದಶ ಗರುಡೋತ್ಸವ ಸಂಭ್ರಮ

ಮೈಸೂರು, ಮಂಡ್ಯ ಜಿಲ್ಲೆಯ 12 ದೇವಸ್ಥಾನಗಳ ದೇವರ ಆರಾಧನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು.

ಮೈಸೂರು, ಜ.16(ಜಿಎ)–ಮೈಸೂರಿನ ಜಯಲಕ್ಷ್ಮಿಪುರಂ ಕಾಳಿದಾಸ ರಸ್ತೆಯ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯದ ಪಂಚ ಗರುಡೋತ್ಸವ ಸೇವಾ ಸಮಿತಿ ವತಿಯಿಂದ ನಗರದಲ್ಲಿ ತೃತೀಯ ಬಾರಿಗೆ ದ್ವಾದಶ (12)ಗರುಡೋತ್ಸವ ಸಂಭ್ರಮ ಕಾರ್ಯಕ್ರಮವನ್ನು ಜ.18ರಂದು ಆಯೋಜಿಸಲಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.05ಕ್ಕೆ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಪರಕಾಲ ಮಠದ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿ, ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯೇಂದ್ರ ತೀರ್ಥ ಸ್ವಾಮೀಜಿ, ಯೋಗನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕರಾದ ಭಾಷ್ಯಂ ಸ್ವಾಮೀಜಿ ಹಾಗೂ ಹೈದರಾಬಾದ್‌ನ ಶಂಷಾಬಾದ್ ಉಭಯ ವೇದಾಂತಾಚಾರ್ಯ ಪೀಠದ ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನ ಜೀಯರ್ ಸ್ವಾಮಿ ಸಾನ್ನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿ ಗಳಾಗಿ ಖ್ಯಾತ ಸಂಗೀತ ನಿರ್ದೇಶಕ ಇಳಯರಾಜ ಭಾಗವಹಿಸಲಿದ್ದಾರೆ. ಜೊತೆಗೆ ಮೈಸೂರು ಮಂಡ್ಯ ಜಿಲ್ಲೆಯ 12 ದೇವಸ್ಥಾನಗಳ ದೇವರ ಸ್ಮರಣೆ ನಡೆಯಲಿದೆ ಎಂದು ತಿಳಿಸಿದರು.

ಈ ಗರುಡೋತ್ಸವದಲ್ಲಿ ಜಯಲಕ್ಷ್ಮಿಪುರಂ ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನ, ಕೆ.ಆರ್.ಮೊಹಲ್ಲಾ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ತಿಲಕ್ ನಗರದ ಶ್ರೀನಿವಾಸಸ್ವಾಮಿ ದೇವಸ್ಥಾನ, ಚಾಮರಾಜ ಮೊಹಲ್ಲಾದ ಪುಸ್ತಕಂ ಸಂತಾನ ವೇಣುಗೋಪಾಲಸ್ವಾಮಿ ದೇವಸ್ಥಾನ, ಒಂಟಿಕೊಪ್ಪಲ್‌ನ ಆಂಡಾಳ್ ಮಂದಿರ, ಕೆ.ಆರ್. ಪೇಟೆಯ ಭೂದೇವಿ ಸಮೇತ ಲಕ್ಷ್ಮಿ ವರಾಹಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣದ ಲಕ್ಷ್ಮಿನರಸಿಂಹ ಸ್ವಾಮಿ ಕ್ಷೇತ್ರ, ಇಲವಾಲದ ಲಕ್ಷ್ಮಿವರದರಾಜಸ್ವಾಮಿ ದೇವಸ್ಥಾನ, ಉಮ್ಮತ್ತೂರಿನ ರಂಗನಾಥಸ್ವಾಮಿ ದೇವಸ್ಥಾನ, ಮೇಟಗಳ್ಳಿ ವರ್ತುಲ ರಸ್ತೆಯ ಚಲುವನಾರಾಯಣಸ್ವಾಮಿ ದೇವಸ್ಥಾನ, ಎನ್.ಆರ್. ಮೊಹಲ್ಲಾದ ಪದ್ಮಾವತಿ ಸಮೇತ ಶ್ರೀನಿವಾಸಸ್ವಾಮಿ ದೇವಸ್ಥಾನ, ಕಲ್ಯಾಣಗಿರಿಯ ಕಲ್ಯಾಣ ವೆಂಕಟೇಶಸ್ವಾಮಿ ದೇವಸ್ಥಾನಗಳು ಸೇವೆಯಲ್ಲಿ ಪಾಲ್ಗೊಳ್ಳಲಿವೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗರುಡೋತ್ಸವಕ್ಕೆ ಸಂಜೆ 5.30ಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಜ.18ರಂದು ಬೆಳಗ್ಗೆ 10 ಗಂಟೆಯಿಂದಲೇ ಪೂಜೆ, ಹೋಮ, ಹವನ ಮತ್ತು ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ರಾತ್ರಿ 7.30ಕ್ಕೆ ಗರುಡ ಕಂಕಣ ಮತ್ತು ಪ್ರಸಾದ ವಿನಿಯೋಗ ನಡೆಯಲಿದ್ದು, ಇದಕ್ಕೂ ಮುನ್ನ ಜ.17ರಂದು ಮಹಾಜನ ವಿದ್ಯಾಸಂಸ್ಥೆಯ ಕ್ರೀಡಾಂಗಣದಲ್ಲಿ ಸಂಜೆ 4.30ರಿಂದ ರಾತ್ರಿ 9ರವರೆಗೆ ಯುವ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಲಕ್ಷ್ಮೀಶ್, ಕೆ.ಆರ್.ಯೋಗಾನರಸಿಂಹನ್, ಕಶ್ಯಪ್, ಶಾಂತಾರಾಮನ್ ಉಪಸ್ಥಿತರಿದ್ದರು.



Prof. Dr. NAGAMALESH U M
MBBS, MD, DNB (Cardiology), FACC, FESC, FSCAI
Lead Consultant - Cardiology, Interventional Cardiologist, Aster CMI Hospital, Bangalore
Director - Heart Failure, Transplant & MCS Program, Aster Hospitals, Bangalore

Saturday, 17th January 2026
Four Chambers Heart Care Centre
475, Udayaravi Rd., Kuvempunagar, Mysuru.
Time : 11:00 am - 1:00 pm

If you are experiencing the following symptoms, you may need specific treatment and care:
- Unable to carry out regular work
- Loss of weight
- Flactuation of kidney function levels
- Breathlessness
- Difficulty lying down flat on the bed

For appointments call: 8884440703 9663876404
Aster CMI HOSPITAL HEBBAL, BANGALORE







ನಿಧನ

ಪ್ರೊ॥ ಎಸ್.ವಿ ಸರಸ್ವತಿ
ನಿ॥ ಪ್ರಾಂಶುಪಾಲರು
ಮಹಾರಾಣಿ ಕಾಲೇಜು

ದುಃಖತಪ್ತರು:
ವರುಣ ಸರೋದೆ
ಮತ್ತು
ಸರೋದೆ ಕುಟುಂಬ

BUILDING CONSTRUCTION
Starts from Rs.1999/- sqft
Including Interior works
Call : 99885 54496

CAR FOR SALE
Ford EcoSport, Titanium, Petrol Automatic, November 2018 model, white color, in excellent condition, Brokers excuse. Contact
Rajesh: 6362945641
Please call after 4pm

1ನೇ ವರ್ಷದ ಪುಣ್ಯಸ್ಮರಣೆ



ಶ್ರೀಯುತ ಎಂ. ನಂಜುಂಡಯ್ಯನವರು
ಅಂಬೇಡ್ಕರ್ ಕಾಲೋನಿ, ಮೂಗೂರು
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಕುಟುಂಬವರ್ಗ

17ನೇ ವರ್ಷದ ಚಿರಸ್ಮರಣೆ




ನಿಧನ : 17.1.2009
ಯಜಮಾನ್
ಎಲ್.ಲಿಂಗಪ್ಪರವರು
ಕೆ.ಜಿ.ಕೊಪ್ಪಲು. ಮೈಸೂರು

ನೀವು ನಮ್ಮನ್ನು ಅಗಲಿ ಇಂದಿಗೆ 17 ವರ್ಷವಾಯಿತು. ನೀವು ತಂದೆಯಾಗಿ ಗುರುಗಳಾಗಿ ಕಲಿಸಿದ ಪಾಠ ನನಗೆ ಜೀವನದ ಪಾಠವಾಗಿದೆ. ನೀವು ನನಗೆ ವಹಿಸಿದ ಜವಾಬ್ದಾರಿಯನ್ನು ಮುಂದುವರೆಸಿಕೊಂಡು ಬಂದಿರುತ್ತೇನೆ. ನೀವು ತೋರಿಸಿಕೊಟ್ಟ ಮಾರ್ಗದಲ್ಲೇ ಮುನ್ನಡೆದು ಸದಾ ನಿಮ್ಮ ನೆನಪಲ್ಲಿರುವ
ಇಂತಿ ದುಃಖತಪ್ತರು
ಪತ್ನಿ ಮಾದಮ್ಮ, ಮಗ ಎಲ್.ಚಂದ್ರು ಮತ್ತು ಮಕ್ಕಳು

HOUSE FOR SALE
As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 28.5 Lakhs, 20x40 32 Lakhs, 30x40 52 Lakhs	Near KSRTC Bus Depot. 20x30 22 Lakhs, 20x40 22.6 Lakhs, 30x40 27 Lakhs, Contact
Near St. Josheph School. 20x40 - 42 Lakhs, 30x50 - 80 Lakhs	

8123387555 / 7259348777




ಸವಿನೆನಪು

ದಿ.ಬಿ.ಎಲ್.ರಾಮಯ್ಯ ದಿ.ಜಯಮ್ಮ
ಪಿ.ಡಬ್ಲ್ಯು.ಡಿ. ಮತ್ತು ಮೈಸೂರು ಮಹಾನಗರ ಪಾಲಿಕೆ ಗುತ್ತಿಗೆದಾರರು

ನಿಮ್ಮ ಆಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ನಿಮ್ಮ ಮಕ್ಕಳಾದ, ಆರ್.ಚಂದ್ರಶೇಖರಯ್ಯ ಅಧ್ಯಕ್ಷರು, ಮೈಸೂರು ಮಹಾನಗರ ಪಾಲಿಕೆ, ಗುತ್ತಿಗೆದಾರರ ಸಂಘ ಆರ್.ಮೋಹನ್ ಕುಮಾರ್, ಆರ್.ದೇವರಾಜ್, ಆರ್.ರಾಜಶೇಖರ್, ಆರ್.ನಾಗರತ್ನ (ಮಗಳು), ಎನ್.ಮಂಜುನಾಥ್, ಮಾಜಿ ವಿರೋಧ ಪಕ್ಷದ ನಾಯಕರು, ಜಿಲ್ಲಾ ಪಂಚಾಯತ್, ಮೈಸೂರು ಹಾಗೂ ಬಿಳಿಕೆರೆ ಕುಟುಂಬಸ್ಥರು

19ನೇ ವರ್ಷದ ಸವಿನೆನಪು



ಶ್ರೀ ಕರಿಯಪ್ಪ-ಚಾಮಯ್ಯನ ದೇವಣ್ಣ
ನೀವು ತೋರಿದ ದಾರಿ ನಮಗೆ ದಾರಿದೀಪ
ದುಃಖತಪ್ತರು: ಗೋವಿಂದರಾಜು
PWD Class-1, Contractor, ದೇವರಾಜ
ಜಯನಗರ, ಕೆ.ಜಿ.ಕೊಪ್ಪಲ್ ಹಾಗೂ ಕುಟುಂಬವರ್ಗದವರು

SITES FOR SALE
KBL Silicon City Phase-1
40x80 & 50x80 W/F
Commercial, 100 Ft. Road
Phase-3
30x50 Middle & N/W Corner
Behind Infosys & BEML
9900466811, 9980270076

@ಬೋಗಾದಿ ರಸ್ತೆ
30X40 & 30X50 Sites
Fully Developed. Start @ 24 ಲಕ್ಷ
9740407921

ಸೈಟು ಮಾರಾಟಕ್ಕಿದೆ

30x40 ದಕ್ಷಿಣಾಭಿಮುಖ ರಿಂಗ್‌ರೋಡ್‌ನಿಂದ ಕೇವಲ 50 ಮೀಟರ್, ಮುಡಾ ಮಂಜೂರಾತಿ ನಿವೇಶನ, ದಟ್ಟಗಳ್ಳಿ
7349520338



FOR SALE
Duplex house 4bhk new for sale 40x60 east facing 40 ft rd near Vijaynagar 4th stage 2nd phase 200 meter to ring rd
Contact: Raj
9606051584 / 9448174184

WANTED
SALES PERSONS - 5 Nos
For Men's Ethnic Wear Showroom
Location: JP Nagar, Mysore
Salary + Incentives
Rs.20,000 per month
Contact:
Shivkumar: 94803 25758

G9 projects
Designing your Dreams
Vee2 Developers
POORVA SHELTERS PHASE - I, II & III
Go easy on your pockets
INVESTMENT FRIENDLY PLOTS
20×30 | 30×40 &
20×40 | 30×50
Near to Marvel PU College
Lalithadripura Ring road Mysuru
8055-004-400

SRKK GROUPS

Immediate Hiring for
Civil Engineer's and Site Supervisor
* Knowledge in Layout & Infrastructure development
* Expeirece - 2 to 3 year's. Note: Only for Male Candidates who will be Ready to relocate all over Mysore District
Marketing and Sales Executive
Knowledge in Ready Mix Concrete Field , Experience - 2 to 3 year's
Procurement
Knowledge in Construction field, Experience - 2 to 3 year's
9606217801-9606247801
Email Id: srkkcd@gmail.com

ನೇರವಾಗಿ ಫ್ಯಾಕ್ಟರಿಯಿಂದ
ಬ್ರಾ ಮಾರಾಟ

ಮಹಿಳೆಯರ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಪುಲ್‌ಓವರ್, ಶೇಪ್‌ವೇರ್ ಮತ್ತು ನೈಟ್‌ವೇರ್
UP TO 70% OFF
ಮಾರಾಟ ಕಡೆಯ 2 ದಿನಗಳು ಮಾತ್ರ
ಜನವರಿ 17 ಮತ್ತು 18
ಭಾನುವಾರ ಕಡೆಯ ದಿನ
₹3499 WORTH 3 BRANDED WOMEN'S BRA ₹1199 Only
₹1999 WORTH 3 BRANDED WOMEN'S PANTIES ₹499 Only
enamor
ಬಂದಂತಮ್ಮ ಕಾಳಮ್ಮ ಸಮುದಾಯ ಭವನ
ನ್ಯೂಕಾಂತರಾಜೇ ಅರಸ್ ರಸ್ತೆ, ಅಪೋಲೋ ಆಸ್ಪತ್ರೆ ಸಿಗ್ನಲ್ ಹತ್ತಿರ, ಕುವೆಂಪುನಗರ, ಮೈಸೂರು
Car Parking Available
Time : 10 am to 10 pm

CADA
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು–ಮೈಸೂರು
ಕಾರ್ಯಪಾಲಕ ಅಭಿಯಂತರವರ ಕಚೇರಿ, ನಂ. 2 ವಿಭಾಗ, ಕಾಡಾ ಕಾಜಯೋ, ವಿಜಯನಗರ, 1ನೇ ಹಂತ, ಮೈಸೂರು–17
ದೂ: 0821–2414090, ಇ–ಮೇಲ್: eecada2mysore@gmail.com
ಸಂಖ್ಯೆ: ಕಾಇಂ/ಕಾಡಾವಿ2/ಕಾಜಯೋ/ಅ.ಟೆಂ–23/2025–26 ದಿನಾಂಕ: 14.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 4705 ಯೋಜನೆಯ ಕಛೇರಿ ಕೆಲಸಗಳಿಗೆ ಕಂಪ್ಯೂಟರ್. ಪ್ರಿಂಟರ್ಸ್ ಮತ್ತು ಯು.ಪಿ.ಎಸ್ ಅಳವಡಿಸಲು (KG-3) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ KPPP ಮೂಲಕ ಟೆಂಡರ್‌ರನ್ನು ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ **ರೂ. 15.59 ಲಕ್ಷಗಳು** (ಜಿ.ಎಸ್.ಟಿ. ಹೊರತುಪಡಿಸಿದಂತೆ) ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಟೆಂಡರ್‌ದಾರರು ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 16.01.2026** ರಿಂದ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 22.01.2026 ಸಂಜೆ 4.00 ಗಂಟೆಯವರೆಗೆ.** ಟೆಂಡರ್‌ನ್ನು ತೆರೆಯುವ **ದಿನಾಂಕ: 23.01.2026 ಸಂಜೆ 4.30 ಗಂಟೆಯ ನಂತರ.**

ವಿಶೇಷ ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು.
ನಂ.2 ವಿಭಾಗ. ಕಾಡಾ, ಕಾಜಯೋ., ಮೈಸೂರು.
DIPR/MYS/1515/SA/2025-26

ಬ್ರಾಂಡೆಡ್ ಫ್ಯಾಷನ್ ಎಕ್ಸ್‌ಪೋ ಸೇಲ್

ಹಬ್ಬದ ಪ್ರಯುಕ್ತ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿರುವ ರೆಡಿಮೆಡ್ ಬಟ್ಟೆಗಳು
ಕಡೆಯ 4 ದಿನದ ಮಾರಾಟದಲ್ಲಿ ವಿಶೇಷ ರಿಯಾಯಿತಿ ಪಡೆಯಿರಿ

5,000/- ರೂ. ಮೇಲ್ಪಟ್ಟು ಖರೀದಿಸಿದರೆ 10% ಕ್ಯಾಶ್ ಬ್ಯಾಕ್ ಪಡೆಯಿರಿ
3,000/- ರೂ. ಗಳವರೆಗೆ ಖರೀದಿಸಿದರೆ 5% ಕ್ಯಾಶ್ ಬ್ಯಾಕ್ ಪಡೆಯಿರಿ

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮಾರಾಟ
4 ದಿನಗಳು ಮಾತ್ರ : ಜನವರಿ 17, 18, 19 & 20 ಮಂಗಳವಾರ ಕಡೆಯ ದಿನ

ಪುರುಷರ ಉಡುಪುಗಳು
- ರೌಂಡ್‌ನೆಕ್ ಟಿ-ಶರ್ಟ್ಸ್ 1ಕ್ಕೆ ಕೇವಲ 100/- ರೂ.ಮಾತ್ರ
- ಶರ್ಟ್‌ಗಳು 5ಕ್ಕೆ ಕೇವಲ 1000/- ರೂ.ಮಾತ್ರ
- ಜೀನ್ಸ್ ಪ್ಯಾಂಟ್ 3ಕ್ಕೆ ಕೇವಲ 1000/- ರೂ.ಮಾತ್ರ
- ಟ್ರಾಕ್ ಪ್ಯಾಂಟ್ 3ಕ್ಕೆ ಕೇವಲ 1000/- ರೂ.ಮಾತ್ರ

ಪ್ರೀಮಿಯಂ ಶರ್ಟ್ಸ್
M.R.P. 1999/- to 2999/-
3 ಶರ್ಟ್ಸ್ ಕೇವಲ 1000/- ರೂ.ಮಾತ್ರ

ಪ್ರೀಮಿಯಂ ಬ್ರಾಂಡ್ಸ್
M.R.P. 1999/- to 7999/-
ಸ್ವೆಟ್ ಶರ್ಟ್ಸ್, ಜಿಪ್ಪರ್ ವುಡ್ಡೀಸ್, ಜಾಕೆಟ್ಸ್, ಟ್ರೌಸರ್ಸ್, ರೂ. 300/- ರಿಂದ 1000/- ರವರೆಗೆ

ಮಹಿಳೆಯರ ಉಡುಪುಗಳು
- ವೆಸ್ಟರ್ನ್ ಟಾಪ್ಸ್ 1ಕ್ಕೆ ಕೇವಲ 100/- ರೂ.ಮಾತ್ರ
- ಲೆಗ್ಗಿನ್ಸ್ 1ಕ್ಕೆ ಕೇವಲ 150/- ರೂ.ಮಾತ್ರ

ಪ್ರೀಮಿಯಂ ಡ್ರೆಸ್ & ಬಾಟಮ್ಸ್
3 ಕ್ಕೆ ಕೇವಲ 1000/- ರೂ.ಮಾತ್ರ

ಸೀರೆಗಳು ಕೇವಲ 100/- ರೂ.ಮಾತ್ರ

ಪ್ರೀಮಿಯಂ ಐಟಂಸ್ : ಕೋಡ್ ಸೆಟ್ಸ್ ಲಾಂಗ್ ಡ್ರೆಸ್, ಸ್ಕರ್ಟ್ಸ್, ಜೀನ್ಸ್ ಚಳಿಗಾಲದ ಜಾಕೆಟ್ಸ್, ಬಾಟಮ್ಸ್
ರೂ. 250/- ರಿಂದ 800/- ರವರೆಗೆ

ಚಿಕ್ಕಮಕ್ಕಳ ಹುಡುಗ ಹುಡುಗಿಯರ ರೆಡಿಮೇಡ್ ಬಟ್ಟೆಗಳು ಕೇವಲ 50/- ರೂ.ಮಾತ್ರ

ಪುರುಷರ ಮತ್ತು ಮಹಿಳೆಯರ ಪ್ರೀಮಿಯಂ ಬ್ರಾಂಡೆಡ್ ಫುಟ್‌ವೇರ್
adidas Reebok PUMA crocs FILA SKECHERS
Upto 60% to 80% Discount on MRP

ಗೃಹೋಪಯೋಗಿ ವಸ್ತುಗಳು ಹಾಗೂ ಕ್ರಾಕರಿ (ಪಿಂಗಾಣಿ) ವಸ್ತುಗಳು
ಕಾಫಿ ಮಗ್ ಸೆಟ್, ಬಿಸಿ ಮತ್ತು ತಣ್ಣನೆಯ ಬಾಟಲ್‌ಗಳು ಹಾಗೂ ಎಲ್ಲಾ ತರಹದ ಮ್ಯಾಟ್‌ಗಳು, ಪಿಲ್ಲೊಸ್, ಬ್ಲಾಂಕೆಟ್ಸ್‌ಗಳು, ಬೆಡ್ ಕವರ್ಸ್, ಕಾರ್ಪೆಟ್ಸ್ ರೂ. 50/- ರಿಂದ 2500/- ರವರೆಗೆ

ಸ್ಥಳ : ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು
ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8618376405, 8747869888 ಉಚಿತ ಪ್ರವೇಶ & ಪಾರ್ಕಿಂಗ್